ಪ್ರಚಾರ ಪುಸ್ತಕ ಮಾಲೆ

236

ಶ್ರೀ ರಾಮಾಯಣ ದರ್ಶನಂ

ಡಾ. ಸಿ. ಪಿ. ಕೃಷ್ಣಕುಮಾರ್

ಪ್ರಸಾರಾಂಗ ★ ಮೈಸೂರು ವಿಶ್ವವಿದ್ಯಾನಿಲಯ ★

ಪ್ರಚಾರ ಪುಸ್ತಕಮಾಲೆ—೨೩೭

ಶ್ರೀ ರಾಮಾಯಣ ದರ್ಶನಂ

ಡಾ. ಸಿ. ಪಿ. ಕೃಷ್ಣಕುಮಾರ್

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
೧೯೮೯

ಮೊದಲನೆಯ ಮುದ್ರಣ : ೧೯೬೩
ಎರಡನೆಯ ಮುದ್ರಣ : ೧೯೬೯

೧೦,೦೦೦ ಪ್ರತಿಗಳು

ಬೆಲೆ : ರೂ. ೧–೦೦

ಪ್ರಕಾಶಕರು
ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೬

ಮುದ್ರಕರು
ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ, ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಂಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲೆಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸ ಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲ ದವರಿಗೆ ವಿಶ್ವವಿದ್ಯಾನಿಲಯ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ. ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ಅವರ ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆಯು ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆ ಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ

ವಿಷಯಗಳನ್ನು ಕುರಿತ ಇನ್ನೂರಮೂವತ್ತೈದು ಪುಸ್ತಕಗಳು ಪ್ರಕಟ ವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಡಾ. ಸಿ. ಪಿ. ಕೃಷ್ಣಕುಮಾರ್ ಅವರ 'ಶ್ರೀ ರಾಮಾಯಣ ದರ್ಶನಂ' ಹೆಚ್ಚು ಜನಪ್ರಿಯವಾಗಲೆಂದು ನಾನು ಆಶಿಸುತ್ತೇನೆ.

ಕೆ. ಎಸ್. ಹೆಗ್ಡೆ

ಕುಲಪತಿಗಳು

ಅರಿಕೆ

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಕುರಿತು ಅನೇಕ ಕಡೆ ನಾನು ಮಾಡಿದ ಪ್ರಚಾರೋಪನ್ಯಾಸಗಳ ಫಲ, ಈ ಪುಸ್ತಿಕೆ. ಇದರಲ್ಲಿ ಆ ಕಾವ್ಯದ ಸ್ಥೂಲ ಪರಿಚಯ ಹಾಗೂ ವಿಮರ್ಶೆಯನ್ನು ಉದ್ದೇಶಿಸಲಾಗಿದೆ. ಮುಖ್ಯವಾಗಿ ಇದು ಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡಿದ್ದರೂ, ತೀರ ಪ್ರಾಥಮಿಕ ನೆಲೆಯ ಕೃತಿ ಎಂದು ಹೇಳಲಾರೆ. ಸ್ವಲ್ಪವಾದರೂ ಪ್ರವೇಶ, ಸಿದ್ಧತೆ ಇದ್ದವರು ಇದರ ಪೂರ್ಣ ಪ್ರಯೋಜನ ಪಡೆಯಬಲ್ಲರು. ವಿಷಯದ ಸ್ವರೂಪವೇ ಹಾಗಿದೆ. ಕಾವ್ಯದ ಗ್ರಹಿಕೆಗೆ ಇಲ್ಲಿನ ವಿವರಣೆ, ವ್ಯಾಖ್ಯಾನ, ಉದ್ಧರಣಗಳಿಂದ ಸ್ವಲ್ಪವಾದರೂ ನೆರವು ಸಿಗುವುದಾದರೆ, ಮೂಲವನ್ನು ಓದಬೇಕೆಂಬ ಆಸಕ್ತಿ ಕೆರಳುವುದಾದರೆ, ನನ್ನ ಆಶಯ ಈಡೇರಿದಂತೆ.

ಇದನ್ನು ಪ್ರಕಟಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಕೆ.ಟಿ. ವೀರಪ್ಪನವರಿಗೂ ಸಂಪಾದಕರಾದ ಶ್ರೀ ಈರೇಗೌಡರಿಗೂ ಅಚ್ಚಿಟ್ಟ ವಿಶ್ವವಿದ್ಯಾನಿಲಯ ಮುದ್ರಣಾಲಯದವರಿಗೂ ನನ್ನ ವಂದನೆ.

ಸಿ.ಪಿ.ಕೆ.

ಪರಿವಿಡಿ

ಪೀಠಿಕೆ

ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕನ್ನಡದ ಮಹಾ ಕಾವ್ಯಗಳಲ್ಲಿ ಒಂದು. ಇಪ್ಪತ್ತನೆಯ ಶತಮಾನದಲ್ಲಿ ಯಾವುದೇ ಮಹಾಕಾವ್ಯವನ್ನು ಪಾಶ್ಚಿಮಾತ್ಯ ಪ್ರಪಂಚ ಕಂಡಿಲ್ಲ ವಾದ್ದರಿಂದ, ಈ ವೈಜ್ಞಾನಿಕ ಯುಗದಲ್ಲಿ ಮಹಾಕಾವ್ಯದ ಆವಿರ್ಭಾವಕ್ಕೆ ಆಸ್ಪದವಿಲ್ಲವೆಂಬ ಅಭಿಪ್ರಾಯವೊಂದಿದೆ. ಆದರೆ ಇದಕ್ಕೆ 'ಶ್ರೀ ರಾಮಾಯಣ ದರ್ಶನಂ' ಅಪವಾದ. ಇದೊಂದು ಆಧುನಿಕ ಮಹಾಕಾವ್ಯ; ಕನ್ನಡದ ಸಿದ್ಧಿ ಶಿಖರಗಳಲ್ಲೊಂದು.

ಮಹಾಕಾವ್ಯ ಪ್ರಕಾರದಲ್ಲಿ ಎರಡು ವರ್ಗಗಳಿವೆ : 'ವಿಕಾಸಶೀಲ ಮಹಾಕಾವ್ಯ' ಮತ್ತು 'ಕಲಾತ್ಮಕ ಮಹಾಕಾವ್ಯ.' ವಾಲ್ಮೀಕಿ ರಾಮಾಯಣ ಮತ್ತು ವ್ಯಾಸಭಾರತ ಮೊದಲನೆಯ ವರ್ಗಕ್ಕೆ ನಿದರ್ಶನವಾದರೆ, ಪಂಪಭಾರತ ಮತ್ತು 'ಶ್ರೀ ರಾಮಾಯಣ ದರ್ಶನಂ' ಎರಡನೆಯದಕ್ಕೆ ಉದಾಹರಣೆ. 'ವಿಕಾಸಶೀಲ' ಮಹಾಕಾವ್ಯ ಒಬ್ಬ ಕವಿಯ ಹೆಸರಿನಲ್ಲಿದ್ದರೂ ವಾಸ್ತವವಾಗಿ ಬಹುಕವಿ ಕೃತವಾದದ್ದು; 'ಕಲಾತ್ಮಕ ಮಹಾಕಾವ್ಯ' ವಾದರೊ ಏಕಕವಿ ಕೃತ. 'ವಿಕಾಸಶೀಲ ಮಹಾಕಾವ್ಯ'ದ ಕಲೆ ಸರಳವಾಗಿ ಅಪ್ರಜ್ಞಾಪೂರ್ವಕವಾಗಿದ್ದರೆ, 'ಕಲಾತ್ಮಕ ಮಹಾಕಾವ್ಯ'ದ ಕಲೆ ಸಂಕೀರ್ಣವಾಗಿ, ತಕ್ಕಮಟ್ಟಿಗೆ ಪ್ರಜ್ಞಾಪೂರ್ವಕವೂ ಆಗಿರುತ್ತದೆ. 'ಕಲಾತ್ಮಕ ಮಹಾಕಾವ್ಯ'ದ ವಸ್ತು ಸಾಮಾನ್ಯವಾಗಿ 'ವಿಕಾಸಶೀಲ ಮಹಾಕಾವ್ಯ'ದಿಂದಲೇ ಬಂದಿರುತ್ತದೆ. ಯಾವ ಬಗೆಯದೇ ಆಗಿರಲಿ, ಮಹಾಕಾವ್ಯದ ಮೂಲಭೂತ ಲಕ್ಷಣವೆಂದರೆ, ಅದು ಆಯಾ ಯುಗಧರ್ಮದ ಮತ್ತು ಸಮಷ್ಟಿ ಪ್ರಜ್ಞೆಯ ಅಭಿವ್ಯಕ್ತಿ ಯಾಗಿರತಕ್ಕದ್ದು. 'ಶ್ರೀ ರಾಮಾಯಣ ದರ್ಶನಂ' ಕೂಡ ಈ ಲಕ್ಷಣಕ್ಕೆ ಅನುಗುಣವಾಗಿಯೆ ಇದೆ.

ಭರತಖಂಡದ ಆದಿಕಾವ್ಯವೆನಿಸಿದ ಸಂಸ್ಕೃತದ ವಾಲ್ಮೀಕಿ ರಾಮಾಯಣವೆ 'ಶ್ರೀ ರಾಮಾಯಣ ದರ್ಶನ'ಕ್ಕೆ ಆಧಾರ, ಆಕರ. ಕಥೆಯು ಸ್ಥೂಲ ರೂಪರೇಖೆಗಳಲ್ಲಿ ಎರಡಕ್ಕೂ ಹೆಚ್ಚು ವ್ಯತ್ಯಾಸ ವಿಲ್ಲ; ಕಣ್ಣಿಟ್ಟು ನೋಡಿದರೆ, ಎಲ್ಲೋ ಕೆಲವು ಕಥಾಂಶಗಳಲ್ಲಿ ಭಿನ್ನತೆ ತೋರಿಬರುತ್ತದೆ. ಆದರೆ ಮೂಲದಲ್ಲಿಲ್ಲದ ಸಂಗತಿಗಳು ಮತ್ತು ವಿವರಗಳು ಕುವೆಂಪು ಅವರ ಕೃತಿಯಲ್ಲಿ ವಿಪುಲವಾಗಿವೆ. ಒಟ್ಟಿನಲ್ಲಿ ವಾಲ್ಮೀಕಿಯ ಕತೆಯನ್ನು ಅವರು ಬದಲಿಸಿಲ್ಲ, ವಿಕೃತಿಗೊಳಿಸಿಲ್ಲ. ಅವರ ವಿಶಿಷ್ಟತೆಯಿರುವುದು ಕತೆಯಲ್ಲಲ್ಲ, ಕಲೆಯಲ್ಲಿ ಮತ್ತು ದರ್ಶನದಲ್ಲಿ; ಕತೆಯೇನಿದ್ದರೂ ನಿಮಿತ್ತ ಮತ್ತು ಮಾಧ್ಯಮ. ವಾಲ್ಮೀಕಿಯಲ್ಲಿಲ್ಲದ ಏನೋ ಒಂದು ದರ್ಶನ ಕುವೆಂಪು ಅವರ ಕಾವ್ಯದಲ್ಲಿದೆ, ಅದೇ ಇದರ ಜೀವಾಳ ಎಂಬುದನ್ನು 'ಶ್ರೀ ರಾಮಾಯಣ ದರ್ಶನಂ' ಎಂಬ ಶೀರ್ಷಿಕೆಯೆ ಸೂಚಿಸುತ್ತದೆ. ರಾಮಾಯಣದ ಕತೆ ಕುವೆಂಪು ಅವರಲ್ಲಿ ಹೊಸದಾಗಿ ಭಾಸ ವಾಗುವುದು ಈ ದರ್ಶನದಿಂದಲೇ.

ಪಿಂತೆ
ವಾಲ್ಮೀಕಿಯುಲಿದ ಕಥೆಯಾದೊಡಂ, ಕನ್ನಡದಿ
ಬೇರೆ ಕಥೆಯೆಂಬಂತೆ, ಬೇರೆ ಮೈಯಾಂತಂತೆ,
ಮರುವುಟ್ಟುವಡೆದಂತೆ ಮೂಡಿದೀ ಕಾವ್ಯಮಂ
ವಿಶ್ವವಾಣಿಗೆ ಮುಡಿಯ ಮಣಿ ಮಾಡಿಹೆನ್

ಎನ್ನುತ್ತಾರೆ ಕವಿ. ಅವರು ವಾಲ್ಮೀಕಿಯನ್ನು ಕುರಿತಾಡುವ ಈ ಮಾತುಗಳೂ ಗಮನಾರ್ಹ :

ಕಲೆಯನಲ್ಲದೆ ಶಿಲ್ಪಿ ಶಿಲೆಯನೇಂ ಸೃಷ್ಟಿಪನೆ?
ತನು ನಿನ್ನದಾದೊಡಂ, ಚೈತನ್ಯಮೆನ್ನದನೆ,
ಕಥೆ ನಿನ್ನದಾಮೊಡಂ, ನೀನೆ ಮೇಣಾಶೀರ್ವದಿಸಿ
ಮತಿಗೆ ಬೋಧವನಿತ್ತೊಡಂ, ಕೃತಿ ನನ್ನ ದರ್ಶನಂ
ಮೂರ್ತಿವೆತ್ತೊಂದಮರ ಕಾವ್ಯದಾಕೃತಿಯಲ್ತೆ?

ದರ್ಶನವೆಂದರೇನು ಎಂಬ ಪ್ರಶ್ನೆಯೊಂದು ಇಲ್ಲಿ ಉದ್ಭವಿಸಬಹುದು. ಕತೆಯಲ್ಲಿ ರಸಾತ್ಮಕವಾಗಿ ಮೂಡಿದ ನಿರ್ದಿಷ್ಟ ತತ್ತ್ವ ಎಂದು ಇದಕ್ಕೆ ಸಂಕ್ಷೇಪವಾಗಿ ಉತ್ತರಿಸಬಹುದು. ದ್ರಷ್ಟಾರನಾದ ಕವಿ ಪೂರ್ಣದೃಷ್ಟಿಯಿಂದ ಕಂಡು ಕಂಡರಿಸುವ ಸತ್ಯವೇ ದರ್ಶನವೆನಿಸುತ್ತದೆ. "ಸ್ವಾನುಭವ, ದೇಶದ ಸಂಸ್ಕೃತಿ, ಪಡೆದ ವಿದ್ಯೆ, ಹುಟ್ಟಿ ಬೆಳೆದ ಸನ್ನಿವೇಶ, ಮಹಾಪುರುಷ ಸಂಶ್ರಯಂ ಮುಂತಾದುವುಗಳ ಪ್ರಭಾವದಿಂದ ಮೂಡುವ ಬುದ್ಧಿಸ್ಥಿತಿಯನ್ನು ಜೀವನದೃಷ್ಟಿ ಎಂದು ಕರೆಯಬಹುದು; ಅದು ರಸಾನುಭೂತಿಗೇರಿದರೆ ದರ್ಶನವಾಗುತ್ತದೆ." ಅದು ಅಸಂಖ್ಯ ಸಂಸ್ಕಾರಗಳ ಸಮಷ್ಟಿ ಫಲ. ಅದು ಲೌಕಿಕವಾಗಬಹುದು, ಆಧ್ಯಾತ್ಮಿಕವಾಗಲೂಬಹುದು. 'ಶ್ರೀ ರಾಮಾಯಣ ದರ್ಶನಂ' ಇಂಥ ದರ್ಶನದಿಂದ ವ್ಯಾಪ್ತವಾಗಿದೆ; ಅದಕ್ಕೆ ಅನೇಕ ಅವಯವಗಳು. ಈ ಕಾರಣದಿಂದ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ "ಮೂಲ ವಿಗ್ರಹಕೆತ್ತಿದುತ್ಸವದ ಪಡಿ"ಯಾಗಿಯೂ, ಮೂಲದಲ್ಲಿಲ್ಲದ ಹಲವು ಆಯಾಮಗಳನ್ನು ಮೈಗೂಡಿಸಿಕೊಂಡು ಸ್ವೋಪಜ್ಞ ಸೃಷ್ಟಿಯಾಗಿದೆ.

ತಮ್ಮ ಕೃತಿ ಎಂದೋ ಆಗಿಹೋದುದನ್ನು ವರದಿಮಾಡುವ ಬಾಹ್ಯಚರಿತ್ರೆಯಲ್ಲ, ಇದು ಆತ್ಮಚರಿತ್ರೆ ಎನ್ನುತ್ತಾರೆ ಕುವೆಂಪು:

> ಬಹಿರ್ಘಟನೆಯಂ ಪ್ರತಿಕೃತಿಸುವಾ ಲೌಕಿಕ
> ಚರಿತ್ರೆಯಲ್ತಿದು, ಅಲೌಕಿಕ ನಿತ್ಯಸತ್ಯಂಗಳಂ
> ಪ್ರತಿಮಿಸುವ ಸತ್ಯಸ್ಯ ಸತ್ಯ ಕಥನಂ ಕಣಾ....

ಇದು 'ಭಾವಚರ ನಿತ್ಯಸತ್ಯ'ಗಳ ಕಾಣ್ಕೆ. ಇದರಲ್ಲಿ ಬರಿಯ ಭೂತ ವರ್ತಮಾನಗಳ ಸಮಾಚಾರವಿಲ್ಲ, ಭವಿಷ್ಯದ ಹೊಳಹುಂಟು. "ಪಿಡಿವೊಲಲ್ತಾದುದಕೆ ಕನ್ನಡಿಯನ್, ಅಪ್ಪುದಕೆ ಮುನ್ನುಡಿಯ

ನುಲಿವಂತೆಯುಂ... ಹಾಡಿದನೊ ..." ಕವಿಗೆ ಮುಖ್ಯವಾದದ್ದು ನಿತ್ಯ ರಾಮಾಯಣ; ಎಂದೋ ಆಗಿಹೋದ ರಾಮನಲ್ಲ. ಎಂತಲೇ "ರಾಮಾವತಾರಕಿಂ ಗುರುತರಂ ತಾನೈಸೆ ರಾಮಾಯಣಾವತಾರಂ!" ಎಂದು ಅವರು ತಮ್ಮ ಕೃತಿಯ ಬಗೆಗೆ ಉದ್ಗರಿಸುತ್ತಾರೆ.

ಕುವೆಂಪು ಅವರ ಈ ಮಹಾಕಾವ್ಯಕ್ಕೆ ಸಮಗ್ರ ಭಾರತೀಯ ಪರಂಪರೆಯ ಹಿನ್ನೆಲೆಯಿದೆ. ಮಹಾಕವಿಚೇತನ ಒಂದು ಕಡೆ ವೇದೋಪನಿಷತ್ತು, ಭಗವದ್ಗೀತೆ, ಷಡ್ದರ್ಶನ, ಯೋಗ ವಿಜ್ಞಾನ, ರಾಮಾಯಣ, ಮಹಾಭಾರತ, ಪುರಾಣ ಇತ್ಯಾದಿಗಳಿಂದ, ಇನ್ನೊಂದು ಕಡೆ ಪ್ರಾಚೀನ ಕನ್ನಡಸಾಹಿತ್ಯದಿಂದ, ಮಗುದೊಂದು ಕಡೆ ಈ ಯುಗದ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ, ರಮಣಮಹರ್ಷಿ, ಗಾಂಧೀಜಿ ಮುಂತಾದವರ ವಿಚಾರಧಾರೆಯಿಂದ ಪರಿಪುಷ್ಟವಾದದ್ದು. ಅಂತೆಯೇ ಅದು ಪಾಶ್ಚಾತ್ಯ ಮಹಾಕಾವ್ಯ ಪರಂಪರೆಯನ್ನು ಹೀರಿಕೊಂಡಿದೆ ಮತ್ತು ಪಶ್ಚಿಮಪ್ರಣೀತವಾದ ವೈಜ್ಞಾನಿಕ, ವೈಚಾರಿಕ ಮನೋಧರ್ಮವನ್ನು ಅಳವಡಿಸಿಕೊಂಡಿದೆ. ಹೋಮರ್, ವರ್ಜಿಲ್, ಡಾಂಟೆ, ಫಿರ್ದೂಸಿ ಮೊದಲಾದ ವಿದೇಶೀಯ ಮಹಾಕವಿಗಳನ್ನು ಕುವೆಂಪು ಹೆಸರಿಸುವಲ್ಲಿ, ಅವರಿಂದ ತಾವು ಪ್ರಭಾವಿತರಾಗಿರುವುದನ್ನು ಸೂಚಿಸುವುದಕ್ಕಿಂತ ಮಿಗಿಲಾಗಿ ತಮ್ಮದು ವಿಶ್ವಪ್ರಜ್ಞೆ ಎಂಬುದನ್ನು ಧ್ವನಿಸಿದ್ದಾರೆ. ಹಿಂದಿನ ಕಾಲದ ಕವಿಗಳಿಗೆ ಅಸಾಧ್ಯವಾಗಿದ್ದ ಈ ವಿಶ್ವಪ್ರಜ್ಞೆ ಕುವೆಂಪು ಅವರನ್ನು ಉಪಕರಣ ಮಾಡಿಕೊಂಡು, 'ಶ್ರೀ ರಾಮಾಯಣ ದರ್ಶನ'ದಲ್ಲಿ ಸುಪ್ರಕಟವಾಗಿದೆ. ಆದ್ದರಿಂದಲೆ ಕವಿ 'ಶ್ರೀ ಕುವೆಂಪುವ ಸೃಜಿಸಿದೀ ಮಹಾಛಂದಸಿನ ಮೇರುಕೃತಿ, ಮೇಣ್ ಜಗದ್ಭವ್ಯ ರಾಮಾಯಣಂ" ಎಂದು ಹೇಳಿಕೊಂಡಿರುವುದು.

'ಶ್ರೀ ರಾಮಾಯಣ ದರ್ಶನಂ' ತನ್ನ ಅಂತರಂಗ, ಬಹಿರಂಗಗಳಲ್ಲಿ ಹಲವಾರು ಪ್ರಭಾವಮುದ್ರೆಗಳನ್ನು ತಳೆದಿದೆ. ಆದರೆ ಆ ಪ್ರಭಾವಗಳನ್ನೆಲ್ಲ ಅರಗಿಸಿಕೊಂಡೂ ತನ್ನತನವನ್ನು ಸಾಧಿಸಿ, ಅನನ್ಯ ಪರತಂತ್ರವಾದ ನಿರ್ಮಾಣವಾಗಿ ಪರಿಣಮಿಸಿದೆ. ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ ಅದರ ಮೂರು ಕಣ್ಣುಗಳು. ಅದರಲ್ಲಿ ಲೌಕಿಕಕ್ಕೆ ಅಧ್ಯಾತ್ಮದ ಪರಿವೇಷವಿದೆ. ಅದೊಂದು ರಸಸ್ಯಂದಿಯಾದ ಕಾವ್ಯವೂ ಹೌದು, ಉದಾತ್ತವಾದ ದರ್ಶನವೂ ಹೌದು; ಎರಡನ್ನೂ ಬೇರ್ಪಡಿಸುವುದು ಶಕ್ಯವಿಲ್ಲ.

ಯುಗಧರ್ಮ

ರಾಮಾಯಣ ವೃತ್ತಾಂತ 'ಶ್ರೀ ರಾಮಾಯಣ ದರ್ಶನ'ದಲ್ಲಿ ಈ ಇಪ್ಪತ್ತನೆಯ ಶತಮಾನಕ್ಕೆ ತಕ್ಕಂತೆ ಮೂಡಿಬಂದಿದೆ. ಜಾಗತಿಕ ಮಟ್ಟದಲ್ಲಿ ಇಂದಿನ ಯುಗಧರ್ಮವಾಗಿರುವ ಸರ್ವೋದಯ ಅದರಲ್ಲಿ ಅದ್ಭುತವಾಗಿ ಪ್ರತಿಮಿತವಾಗಿದೆ ಮಾತ್ರವಲ್ಲ, ಗಾಂಧೀಜಿ ಭಾರತದ ಮಟ್ಟದಲ್ಲಿ ಸಾಕ್ಷಾತ್ಕರಿಸಿಕೊಂಡ ಅಹಿಂಸಾತತ್ತ್ವದ ಆವಿಷ್ಕಾರವೂ ಅದರಲ್ಲಿದೆ; ಅವುಗಳ ಅರ್ಥ ಇಲ್ಲಿ ಹಿಗ್ಗಿದೆ. ಸರ್ವೋದಯ ಅಹಿಂಸಾತ್ಮಕವಾಗಿ, ವ್ಯಕ್ತಿಗತ ಮನಃಪರಿವರ್ತನೆಯ ಮೂಲಕ ಸಿದ್ಧಿಸಬೇಕಾದುದೂ ಮುಖ್ಯ. 'ಶ್ರೀ ರಾಮಾಯಣ ದರ್ಶನ'ದ ಆದಿಯಲ್ಲೆ ಇದರ ಸೂಚನೆಯಿದ್ದು, ಇಡೀ ಕಾವ್ಯವನ್ನು ದಿಗ್ದರ್ಶಿಸುತ್ತದೆ.

ಮೂಲ ರಾಮಾಯಣದಲ್ಲಿ ವಾಲ್ಮೀಕಿಮುನಿ ಕ್ರೌಂಚಪಕ್ಷಿಯನ್ನು ಕೊಂದ ಬೇಡನಿಗೆ ಕೊಡುವ ಶಾಪವೆ ರಾಮಾಯಣಕ್ಕೆ ನಾಂದಿಯಾಗುತ್ತದೆ. ಆದರೆ ಕುವೆಂಪು ಅವರಲ್ಲಿ ಆ ಭಾಗ ಹೀಗೆ ಬಂದಿದೆ;

"ಮಾಣ್, ನಿಷಾದನೆ, ಮಾಣ್ ! ಕೊಲೆ ಸಾಲ್ಗುಮಿನ್ನೆಯ್ಯ
ಮಾಣ್!
ನಲಿಯುತಿರೆ ಬಾನ್ ಬನದ ತೊರೆ ಮಲೆಯ ಭುವನಕವನಂ
ಸುಖದ ಸಂಗೀತಕೆ ವಿಷಾದಮಂ ಶ್ರುತಿಯೊಡ್ಡಿ
ಕೆಡಿಸುವಯ್? ನಾನುಮೊರ್ ಕಾಲದೊಳ್ ನಿನ್ನವೊಲೆ
ಕೊಲೆಯ ಕಲೆಯಲ್ಲಿ ಕೋವಿದನಾಗಿ ಮಲೆತಿರ್ದೆನಯ್.
ನಾರದ ಮಹಾಋಷಿಯ ದಯೆ ಕಣಾ ಕರುಣೆಯಂ
ಕಲಿತೆನ್!" ಎಂದಾತ್ಮ ಕಥೆಯಾತ್ಮ ತತ್ತ್ವವನೊರೆದು
ಕಬ್ಬಿಲಗೆ ಬಗೆ ಕರಗುವಂತೆ ಬೋಧಂಗೆಯ್ದು,
ಕೃಪೆದೋರುತಾತಂಗಹಿಂಸಾ ರುಚಿಯನಿತ್ತು,
ಕೊಂಚೆವಕ್ಕಿಯ ಮೆಯ್ಯಿನಾ ಬಾಣಮಂ ಬಿಡಿಸಿ,
ಪ್ರಾಣಮಂ ಬರಿಸಿ ಸಂಜೀವ ಜೀವನದಿಂದೆ...

ಈ ಬಗೆಯ ಪುನರುಜ್ಜೀವನಕ್ಕೆ ಸಮಗ್ರ ಕಾವ್ಯವೇ ನಿದರ್ಶನ.

ವಾಲ್ಮೀಕಿ ರಾಮಾಯಣದಲ್ಲಿ ದಶರಥ ಸಂತಾನ ಪ್ರಾಪ್ತಿಗಾಗಿ ಅಶ್ವಮೇಧಯಾಗವನ್ನು ಮಾಡುತ್ತಾನಷ್ಟೆ. ಆ ಸಂದರ್ಭದಲ್ಲಿ 'ಶ್ರೀ ರಾಮಾಯಣ ದರ್ಶನ'ದ 'ವಿಚಾರಮತಿ' ಜಾಬಾಲಿ ಯಾಡುವ ಮಾತುಗಳಿವು:

ರಘುಕುಲವಾರ್ಧಿ ಚಂದ್ರಮನೆ,
ಕುಲಪುರೋಹಿತರೊರೆದ ಜನ್ನಮಂ ಕೈಕೊಂಡು
ಪಸುಳೆರನ್ನರ ಪಡೆಪೆಯದು ದಿಟಂ. ಕೇಳದೊಡಂ
ನನ್ನೊಂದು ಕಾಣ್ಕೆಯಂ. ಪೂರ್ವಪದ್ಧತಿವಿಡಿದು
ಮಾಳ್ಪ ದಿಗ್ವಿಜಯ ಹಯಮೇಧ ಮೊದಲಾದುವಂ
ತೊರೆದು, ಹಿಂಸಾ ಕ್ರೌರ್ಯವಿಲ್ಲದಿಹ ಪ್ರೇಮಕ್ಕೆ
ನೋಂತು, ದೇವರ್ಕಳಂ ಪೂಜಿಸಲ್ ಮೆಚ್ಚುವುದು
ಜಗವನಾಳುವ ಋತಂ

ಆದ್ದರಿಂದ ಅಶ್ವಮೇಧಕ್ಕಿಲ್ಲಿ ಸ್ಥಾನವಿಲ್ಲ.

ಇದನ್ನೆಲ್ಲ ನೋಡಿದರೆ, 'ಶ್ರೀ ರಾಮಾಯಣ ದರ್ಶನ'ದಲ್ಲಿ ಹಿಂಸೆ, ಕೊಲೆ, ನಾಶ. ದುರಂತಗಳಂತಹ ನೇತ್ಯಾತ್ಮಕ ಪ್ರಕ್ರಿಯೆಗಳಿಗೆ ಅವಕಾಶವಿಲ್ಲವೆಂಬುದು ತಿಳಿದುಬರುತ್ತದೆ. ಅಲ್ಲಿರುವುದೆಲ್ಲ ಪರಿವರ್ತನೆಯು ಮತ್ತು ಪುನರುತ್ಥಾನದ ಶುಭಪರಂಪರೆ; ಮಂಗಳಾಂತ ಕ್ರಾಂತಿ. ಆದರೆ ಈ ಪರಿವರ್ತನೆಯಾಗಲಿ ಪುನರುತ್ಥಾನವಾಗಲಿ ಹಠಾತ್ತನೆ ಸಿದ್ಧಿಸುವಂಥದಲ್ಲ; ಅವಕ್ಕೆ ದೀರ್ಘಕಾಲದ ಹೋರಾಟ ಮತ್ತು ಸಾಧನೆ ಅಗತ್ಯ. ಅದನ್ನು ಕುವೆಂಪು ಅತ್ಯಂತ ಮಾನವೀಯವಾಗಿ ಮತ್ತು ಮನೋವೈಜ್ಞಾನಿಕವಾಗಿ ಚಿತ್ರಿಸಿದ್ದಾರೆ. ಆದರೆ ಚಿತ್ರಣ ಆ ಹಂತವಲ್ಲೆ ನಿಂತುಬಿಡದೆ, ದಾರ್ಶನಿಕ ಸ್ತರಕ್ಕೂ ಚಾಚಿಕೊಳ್ಳುತ್ತದೆ ಎಂಬುದೇ ಕುವೆಂಪು ಅವರ ಅಪೂರ್ವತೆ.

ದಶರಥನ ಆಳಿಕೆಯನ್ನು ವರ್ಣಿಸುವ ವ್ಯಾಜದಲ್ಲಿ ಕವಿ ಆದರ್ಶ ಪ್ರಜಾಪ್ರಭುತ್ವದ ಒಂದು ಚಿತ್ರವನ್ನು ಕೊಟ್ಟಿರುವುದೂ ಲಕ್ಷಿಸ ತಕ್ಕದ್ದಾಗಿದೆ;

> ರಾಜರ್ಷಿಯಾ ದೀರ್ಘದರ್ಶಿಯಾ ಸಮದರ್ಶಿ ತಾಂ
> ಜನ್ಮ ಕುಲ ಧನ ಜಾತಿ ವರ್ಣಪ್ರಭೇದಮಂ
> ಗಣಿಸದೆಯೆ, ಮನದ ಹೃದಯದ ಧರ್ಮಕರ್ಮವನೆ
> ಹಿಡಿದು ಮನ್ನಣೆಮಾಡಿ, ನೀಚೋಚ್ಚ ಭಿನ್ನಮಂ
> ಸ್ಪರ್ಧೆ ವೈರಂಗಳಂ ತೊಡೆದು, ಸಮಬುದ್ಧಿಯಿಂ
> ದರ್ಪದಿಂ ಪಾಲಿಸಿರ್ದನು ತನ್ನ ರಾಜ್ಯಮಂ,
> ಸರ್ವ ಪ್ರಜಾಮತಕೆ ತಾನು ಪ್ರತಿನಿಧಿಯೆಂಬ
> ಮೇಣವರ ಹಿತಕೆ ಹೊಣೆಯೆಂದೆಂಬ ಬುಧರೊಲಿದ
> ಸಮದರ್ಶನವನೊಪ್ಪಿ.

"ಪಾಪಿಗುದ್ಧಾರವಿಂಹುದಾ..." ಎಂಬ ದರ್ಶನದಲ್ಲಿ ಸರ್ವೋದಯ ತತ್ತ್ವವಿದೆ. ಅದನ್ನು ಮುಂದೆ ನೋಡಬಹುದು.

ವಿಧಿ ನಿಯತಿ

ಸಾಮಾನ್ಯದೃಷ್ಟಿಗೆ ಈ ಲೋಕದ ವ್ಯಾಪಾರಗಳು ದ್ವಂದ್ವ ಪೂರ್ಣವಾಗಿ, ಅನಿಯತ ಸ್ವಚ್ಛಂದವಾಗಿ ಭಾಸವಾಗುತ್ತವೆ. ಆದರೆ ಇವುಗಳನ್ನೆಲ್ಲ ಬಂಧಿಸಿರುವ ನಿಯಾಮಕ ಸೂತ್ರ ಪೂರ್ಣದೃಷ್ಟಿಗೆ ಅರಿವಾಗುತ್ತದೆ. ಈ ದೃಷ್ಟಿಯ ಪ್ರಕಾರ, ಸಾವು ಬದುಕಿನ ಅಂತ್ಯವಲ್ಲ, ಒಂದು ಬಾಗಿಲಷ್ಟೆ. ದೇಹಗಳು ಬದಲಾಗಬಹುದು, ಆದರೆ ಆತ್ಮದ ಪರ್ಯಟನ ವಿಕಾಸಶೀಲವಾಗಿ ಸಂತತ ಸಾಗಿರುತ್ತದೆ. ಯಾವೊಂದು ಚೇತನವೂ ಹುಟ್ಟು-ಸಾವಿನ ನಡುವಣ ಒಂದೇ ಜೀವಮಾನಕ್ಕೆ ಸೀಮಿತವಾಗಿರುವುದಿಲ್ಲ. ಇದನ್ನೊಪ್ಪಿಕೊಂಡಾಗ, ಜೀವ-ಸಾವುಗಳ ಕಲ್ಪನೆಯೆ ಬದಲಾಗುತ್ತದೆ; ಸುಖ-ದುಃಖಗಳಿಗೆ ವಿಶೇಷಾರ್ಥ ಬರುತ್ತದೆ; ಬದುಕಿನ ಹೋರಾಟ ಹೊಸದೊಂದು ಬೆಲೆಯನ್ನು ಪಡೆದುಕೊಳ್ಳುತ್ತದೆ.

'ಶ್ರೀ ರಾಮಾಯಣ ದರ್ಶನ'ದಲ್ಲಿ ಕವಿ ಹೇಳುತ್ತಾರೆ:

> ನೆಯ್ದಾಳುತಿದೆ ಜಗವನೊಂದತಿ ವಿರಾಣ್ ಮನಂ
> ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ
> ಜೀವಿಗಳ್ಗಿಚ್ಛೆಯಾ ಸ್ವಾತಂತ್ರ್ಯ ಭಾವಮಂ
> ನೀಡಿ. ಮಂಥರೆ ಸೀತೆ ರಾಮ ರಾವಣರೆಲ್ಲರುಂ
> ಸೂತ್ರಗೊಂಬೆಗಳಲ್ತೆ ಆ ವಿಧಿಯ ಹಸ್ತದಲಿ?

ವಿಧಿಯ ಪಾರಮ್ಯ ಇಲ್ಲಿ ಉದ್ಘೋಷಿತವಾಗಿದೆ. ಇನ್ನೊಂದೆಡೆ ಈ ಮಾತು ಬರುತ್ತದೆ: "ವಿಧಿಯ ಸೂತ್ರದ ಜಗಜ್ಜಾಲದೊಳ್ ವ್ಯಕ್ತಿಗಳ್ ಗ್ರಂಥಿಮಾತ್ರಗಳಲ್ತೆ, ವಿಧಿ ಹಸ್ತ ಕೌಶಲಪ್ರತಿಮೆಗಳ್?" ಈ ಉಕ್ತಿಗಳೆಲ್ಲ ಜಗತ್ತಿನ, ಜೀವನದ ರಹಸ್ಯವನ್ನು ಉದ್ಘಾಟಿಸುವ ಕೀಲಿಕೈಯಂತಿವೆ.

ಗಾಳಿಪಟ ಆಗಸದಲ್ಲಿ ಸ್ವೇಚ್ಛೆಯಿಂದ ವಿಹರಿಸುತ್ತಿದ್ದರೂ ಅದರ ಸೂತ್ರವನ್ನು ಹಿಡಿದಿರುವ ಕೈ ಎಲ್ಲೊ ಅಗೋಚರವಾಗಿರುತ್ತದೆ. ಹಾಗೆಯೇ ವಿಧಿ ಎಲ್ಲ ಜೀವಿಗಳಿಗೂ ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟೇ ಅವುಗಳ ಗತಿಯನ್ನು ನಿಯಂತ್ರಿಸುತ್ತದೆ. ವಾಸ್ತವವಾಗಿ ಅದು ಸ್ವಾತಂತ್ರ್ಯವಲ್ಲ. 'ಸ್ವಾತಂತ್ರ್ಯಭಾವ' ಮಾತ್ರ. ಈ ಭಾವವನ್ನು ಪರಿಪರಿಯಾಗಿ ಬಣ್ಣಿಸಿ, ಅದರ ಹಿಂದಿರುವ ವಿರಾಟ್ ಶಕ್ತಿಯನ್ನು ಗುರುತಿಸುವಲ್ಲಿ 'ಶ್ರೀ ರಾಮಾಯಣ ದರ್ಶನಂ' ಯಶಸ್ವಿಯಾಗಿದೆ.

ಎಲ್ಲರೂ ವಿಧಿಯ ಕೈಯ ಉಪಕರಣಗಳು ಎಂಬ ತಿಳಿವಳಿಕೆಯಿಂದ, ಆಯಾ ವ್ಯಕ್ತಿಯ ಜವಾಬ್ದಾರಿಯನ್ನು ತಪ್ಪಿಸಿದಂತಾಗುವುದಿಲ್ಲ ಮತ್ತು ಬದುಕನ್ನು ಸರಳೀಕರಿಸಿದಂತಾಗುವುದಿಲ್ಲ ಎಂಬುದನ್ನು ಇಲ್ಲಿ ನೆನಪಿಡಬೇಕು.

ದೈವ ಅಜೇಯವಾದುದು, ಮಾನುಷಬಲಕ್ಕೆ ಮಿತಿಯುಂಟು ಎಂದು ಒಂದೆಡೆ ರಾಮ ನುಡಿಯುತ್ತಾನೆ :

> ದೈವಮಂ ಮುಂದಲೆವಿಡಿದು ತರುಬುವದಟೆರ್ಕೆ
> ಅವರಜನೆ. ಮೇರೆಯಿದೆ ಮರ್ತ್ಯದ ಪರಾಕ್ರಮಕೆ.
> ಮರ್ತ್ಯದಾಳ್ ಬಿದಿಯೊಡನೆ ತಾಂ ನಡೆಯುವನ್ನೆಗಂ
> ಕಲಿ ; ಬಿಂಕದಿಂ ಬಿದಿಗಿದಿರ್ ಮಲೆಯೆ ಬಲಿ, ಕೂಡೆ
> ತಾನದರ ಚಕ್ರಶೈಲತೆಗೆ.

ಆದರೆ ವಿಧಿಯ ವಜ್ರನಿಯತಿಯನ್ನು ಪ್ರಾರ್ಥನೆ ತಪಸ್ಸುಗಳಿಂದ ಗೆಲ್ಲಬಹುದು, ಅಥವಾ ಸಡಿಲಿಸಬಹುದು.

ವಿಧಿ—ಅಥವಾ ದೈವೀ ಶಕ್ತಿ—ಕೆಲಸಮಾಡುವ ರೀತಿ ಅಗಮ್ಯವಾದದ್ದು ; ಅದಕ್ಕೆ ಬಹುಪಥಗಳು, ಬಹುರೂಪಗಳು. ನಮ್ಮ ನಿರೀಕ್ಷೆಯಂತೆ ಅದು ಬರದಿರಬಹುದು :

ಭಗವದಾಗಮನಮೇಂ
ಭಕ್ತನ ನಿರೀಕ್ಷಿಸಿದ ರೂಪದಿಂ ಬಂದಪುದೆ ?
ಸುಖದವೋಲಾಶಿಸಲ್ ದುಃಖದೊಳ್ ಮೈದೋರಿ,
ಭಕ್ತನನಿತುಂ ಸುಲಿದು ನೈವೇದ್ಯಮಂ ಕೊಳದೆ
ಪೇಳ್ ಅಹಂಕಾರಮಂ ದಿವ್ಯಶೂನ್ಯತೆಗದ್ದುವೋರ್
ಸಂಪೂರ್ಣತಾ ಸಿದ್ಧಿಯೋಳ್ !

ದುಃಖ, ಸಂಕಷ್ಟಗಳೂ ಸ್ವಾಗತಾರ್ಹವೆ. ಏಕೆಂದರೆ, "ಶಿಲ್ಪಿಯ ನಿಶಿತ ಟಂಕದ ಮೊನೆಯ ಕಠಿನ ಶಿಕ್ಷೆಗಲ್ಲದೆ ಪೊಣ್ಮುವುದೆ ಕಲಾ ಪೂರ್ಣಮಹ ದೇವತಾವಿಗ್ರಹಂ ?"

"ನಿಶ್ಶಬ್ದಿಯೈ ಈಶ್ವರಕೃಪಾಬ್ಧಿ" ಎಂದು ಹೇಳುತ್ತಾರೆ ಕವಿ. ಆ ಭಗವತ್‌ಶಕ್ತಿಯ ಕೃಪೆಗೆ "ತೃಣಮೆ ಖಡ್ಗಂ, ಪನಿ ಕಡಲ್, ಕಿಡಿ ಸಿಡಿಲ್". ಅದು ಸರ್ವವ್ಯಾಪಿಯಾಗಿ, ಬಹುಮುಖಿಯಾಗಿ, ನಿರೀಕ್ಷಿತ ಅನಿರೀಕ್ಷಿತ ರೂಪಗಳಲ್ಲಿ ಪ್ರವರ್ತಿಸಿ ಲೇಸನ್ನೆಸಗುವ ಬಗೆಯನ್ನು 'ಶ್ರೀ ರಾಮಾಯಣ ದರ್ಶನಂ' ನಿರೂಪಿಸುತ್ತದೆ.

'ಪಾಪಿಗುದ್ಧಾರಮಿಹುದೌ'

ಈ ಜಗತ್ತಿನಲ್ಲಿ ಒಳಿತಿದೆ, ತದ್ವಿರುದ್ಧವಾಗಿ ಕೆಡುಕಿದೆ. ಇದಕ್ಕೆ ಏನರ್ಥ ? ಎರಡೂ ಬೇರೆ ಬೇರೆಯೆ ? ಹಾಗಲ್ಲವೆನ್ನುತ್ತದೆ 'ಶ್ರೀ ರಾಮಾಯಣ ದರ್ಶನಂ'. ಭಗವಂತನ ಲೀಲಾಭೂಮಿಕೆ ಈ ಜಗದ್ರಂಗ ; ತನ್ನ ಲೀಲೆಗಾಗಿ ಅವನು ಸತ್ ಮತ್ತು ಅಸತ್ ರೂಪಗಳನ್ನು ತಳೆದಿದ್ದಾನೆ. ಮೂಲತಃ ಇವು ಅಭಿನ್ನ, ಲೀಲಾರ್ಥವಾಗಿ ಬೇರೆಯಾದುವಷ್ಟೆ. ಅಸತ್ ಶಕ್ತಿ ಸತ್‌ಶಕ್ತಿಯಾಗಿ ಪರಿವರ್ತನೆಗೊಳ್ಳಬಹುದು, ಪರಿವರ್ತನೆಗೊಳ್ಳಲೇಬೇಕು. ಅಸತ್ತಿನಿಂದ ಸತ್ತಿನೆಡೆಗೆ, ತಮಸ್ಸಿನಿಂದ ಜ್ಯೋತಿಯೆಡೆಗೆ, ಮೃತ್ಯುವಿನಿಂದ ಅಮೃತತ್ವದೆಡೆಗೆ ಲೋಕ ಸಾಗಬೇಕು ; ಆದರೆ ಈ ಯಾತ್ರೆ

ಯೊಂದು ನಿರಂತರ ಸಾಧನೆ. ಕುವೆಂಪು ಅವರ ಅಗ್ಗಳಿಕೆಯಿರು ವುದು ಈ ವಿಕಾಸವನ್ನು ಕಂಡು ಚಿತ್ರಿಸುವಲ್ಲಿ. ಅವರ ದರ್ಶನಕ್ಕೆ ನಿದರ್ಶನವಾಗಿ ಬಳಕೆಗೊಂಡಿದೆ ರಾಮಾಯಣಕಥೆ. ರಾವಣ, ಮಂಥರೆ, ಕೈಕೆ, ವಾಲಿ, ಚಂದ್ರನಖಿ ಮುಂತಾದ ಪಾತ್ರಗಳೆಲ್ಲ ಆ ದರ್ಶನ–ನಿದರ್ಶನದ ಅಂಗಗಳು.

"ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್‌ವ್ಯೂಹ ರಚನೆ ಯೊಳ್" ಎಂಬ ದರ್ಶನ ಧ್ವನಿ 'ಶ್ರೀ ರಾಮಾಯಣ ದರ್ಶನ'ದ ಉದ್ದಕ್ಕೂ ಪ್ರವಹಿಸುತ್ತಿದೆ. ವಾಲ್ಮೀಕಿ ಕೃತ ರಾಮಾಯಣದ ಪೂರ್ವೋಕ್ತ ಪಾತ್ರಗಳು ಈ ಮಹಾಕಾವ್ಯದಲ್ಲಿ ಕುವೆಂಪು ದರ್ಶನದ ಹೊಗರಿನಲ್ಲಿ ಮಿಂದು ನಿಂತಿವೆ. ವಾಲ್ಮೀಕಿಗಳು ಮಂಥರೆ, ರಾವಣ ಮುಂತಾದ ಪಾತ್ರಗಳ ಪೂರ್ವಜೀವನವನ್ನಷ್ಟೆ ಚಿತ್ರಿಸಿದರು; ಅವರ ಬದುಕಿನ ಉತ್ತರಕಾಂಡವನ್ನು ಚಿತ್ರಿಸುವ ಕಾರ್ಯ ಕುವೆಂಪು ಅವರಿಂದ ಅನ್ಯಾದೃಶವಾಗಿ ನಡೆದಿದೆ. ಅದು ಉದ್ಧಾರಕಾಂಡವೂ ಹೌದು. ವಾಲ್ಮೀಕಿಗಳಲ್ಲಿ ನಿರೂಪಿತವಾಗಿರು ವುದು ಆ ಪಾತ್ರಗಳ ಯಾವುದೋ ಒಂದು ಮುಖ; ಹಾಗಾಗಿ ಅವು ಬಹುಮಟ್ಟಿಗೆ ಸರಳ ರೇಖೆಗಳಂತಾಗಿವೆ. ಆದರೆ ಕುವೆಂಪು ಅವರ ಕೈಯಲ್ಲಿ ಅವು ಅತ್ಯಂತ ಸಂಕೀರ್ಣವಾಗಿ ಕಂಡರಣೆಗೊಂಡಿವೆ; ಅವುಗಳ ಪೂರ್ಣ ಚರಿತ್ರೆಯನ್ನಿಲ್ಲಿ ನೋಡುತ್ತೇವೆ. ಮನೋವೈಜ್ಞಾ ನಿಕ ವಿಶ್ಲೇಷಣೆ ಕುವೆಂಪು ಅವರ ಎಲ್ಲ ಪಾತ್ರಗಳಲ್ಲೂ ಹಾಸು ಹೊಕ್ಕಾಗಿದೆ. ಮಂಥರೆ, ರಾವಣ—ಈ ಎರಡು ಪಾತ್ರಗಳನ್ನು ಸಮೀಕ್ಷಿಸಿದರೆ ಸಾಕು, 'ಶ್ರೀ ರಾಮಾಯಣ ದರ್ಶನ'ದ ನವೀನ ದೃಷ್ಟಿ, ಸೃಷ್ಟಿಗಳು ವಿದಿತವಾಗುತ್ತವೆ. "ಪಾಪಮುಂ ಪುಣ್ಯ ಮುಖಿ" ಎಂಬ ದರ್ಶನಸೂತ್ರಕ್ಕೆ ಬರೆದ ಭಾಷ್ಯ ಈ ಪಾತ್ರಗಳು; ರಾವಣನದಂತೂ ಮಹಾಭಾಷ್ಯ.

ಮಂಥರೆ

ವಾಲ್ಮೀಕಿ ರಾಮಾಯಣದ ಮಂಥರೆ ಎಲ್ಲರ ನಿಂದೆ, ತಿರಸ್ಕಾರಗಳಿಗೆ ಪಕ್ಕಾಗುವಂಥ ಜೀವ; ಅವಳನ್ನು ಪಾಪಿ ಎಂದೆ ಕರೆಯಬೇಕಾಗುತ್ತದೆ. ಆದರೆ ಕುವೆಂಪು ರಾಮಾಯಣದಲ್ಲಿ ಅವಳುಪಾಪಿಯಾಗಿಯೆ ಉಳಿಯದೆ 'ಮಂಥರಾಲಕ್ಷ್ಮಿ'ಯಾಗಿ ಉದ್ಧಾರಗೊಳ್ಳುತ್ತಾಳೆ. ರಾಮಾದಿಗಳ ವನವಾಸಕ್ಕೆ ಇಲ್ಲಿ ಅವಳು ಕಾರಣವಾಗುವುದಿಲ್ಲ, ಕೇವಲ ಕರಣವಾಗುತ್ತಾಳೆ; ವಿಧಿಯ ನಿಗೂಢಯೋಜನೆಗೆ ನಿಮಿತ್ತಮಾತ್ರವಾಗುತ್ತಾಳೆ. ಅವಳಿಂದಲೇ ರಾಮಮಹಿಮೆಯ ವಿಕಸನ, ರಾಮಾವತಾರದ ಸಾರ್ಥಕತೆ. ಶಿಶುರಾಮಗಗನ ಚಂದ್ರನನ್ನು ಬಯಸಿ ಅಳುತ್ತಿರುವಾಗ, ಕನ್ನಡಿಯಮೂಲಕ ಆ ಬಯಕೆಯನ್ನು ಅವಳು ನೆರವೇರಿಸುವಲ್ಲಿ ಇದುಇಂಗಿತವಾಗಿದೆ. ವಾಲ್ಮೀಕಿ ರಾಮಾಯಣದಲ್ಲಿ ಇದ್ದಕ್ಕಿದ್ದಂತೆಕಾಣಿಸಿಕೊಳ್ಳುತ್ತಾಳೆ ಮಂಥರೆ. ಆದರೆ ಕುವೆಂಪು ಅವಳ ಪೂರ್ವವೃತ್ತಾಂತವನ್ನೆಲ್ಲ ಸವಿಸ್ತರವಾಗಿ ನಿರೂಪಿಸಿ, ಅವಳ ಅಂತರಂಗಪರಿಚಯ ನಮಗಾಗುವಂತೆ ಮಾಡಿದ್ದಾರೆ. ಆ ಮಮತೆಯಸುಳಿ ರಾಮಾಯಣದ ದಿಕ್ಕನ್ನೆ ಬದಲಿಸಿ, ಕಡೆಗೆ ಶಿವಂಕರಶಕ್ತಿಯಾಗಿ ಪರಿಣಮಿಸುತ್ತಾಳೆ.

ಕೈಕೆಯ ತಂದೆ ಒಮ್ಮೆ ಬೇಟೆಗೆ ಹೋಗಿದ್ದಾಗ, ಅಡವಿಯಲ್ಲಿ ಅಳುತ್ತಿದ್ದ ಅನಾಥ ದಸ್ಯು ಶಿಶುವೊಂದನ್ನು ಕಾಣುತ್ತಾನೆ. ಅದು 'ವಿಕೃತಿ ವಕ್ರತೆ ರೂಹುಗೊಂಡಂತೆ' ಇರುತ್ತದೆ. ಅವನದನ್ನು ಅರಮನೆಗೆ ತರುತ್ತಾನೆ; ಅದು ಎಲ್ಲರ ಕಣ್ಣಿಗೂ 'ಹೇಸಿನಾಕೃತಿಯಾಗಿ' ಬೆಳೆಯುತ್ತದೆ. ಎಲ್ಲರಿಗೂ ಅದರ ಬಗ್ಗೆ ತಿರಸ್ಕಾರ. ಮಂಥರೆ ಎಂದು ಅದಕ್ಕೆ ಹೆಸರಿಡುತ್ತಾರೆ. ಆ ಕುಬ್ಜೆ ಕುವರಿಯಾಗಿ ಬೆಳೆ

ದಾಗ, ಕೈಕೆಯು ಜನನವಾಗುತ್ತದೆ. ಮಗುವನ್ನಾಡಿಸುವ ಕೆಲಸ ವನ್ನು ದೊರೆ ಮಂಥರೆಗೆ ವಹಿಸುತ್ತಾನೆ. ಆಗ,

> ಮಳೆ ಹೊಯ್ದ ತೆರನಾಯ್ತು ಮಂಥರೆಯ ಮರುಧರೆಗೆ
> ಚೈತ್ರನಾಗಮವಾಯ್ತು ಮಂಥರೆಯ ಶಿಶಿರಕ್ಕೆ,
> ಮಂಥರೆಯ ಬಾಳ್‌ನಿಶಿಗೆ ಶಶಿಯುದಿಸಿದಂತಾಯ್ತು,
> ಮಂಥರೆಯ ಮೃತ್ಯುವಿಗೆ ತಾನಮೃತ ಸೇಚನೆಯಾಯ್ತು...

ಹಾಲಿನಲ್ಲಿ ಇದ್ದಿಲಿನ ಚೂರು ತೇಲುವಂತೆ ಮಂಥರೆ ತನಗಿಲ್ಲದ ಕೈಕೆಯ ಚೆಲುವಿನಲ್ಲಿ ಲೋಲಾಡುತ್ತಾಳೆ. ಅವಳ ತೊಡೆಯಲ್ಲಿ ಕೈಕೆ "ಕಾಳಾಹಿಭೋಗದಲಿ ಹೊಳೆವ ಹೆಡೆಮಣಿಯಂತೆ" ಬೆಳೆಯುತ್ತಾಳೆ. ಮಂಥರೆಗೆ ಯೌವನ ಕಳೆದು, ಮುಪ್ಪು ಸಮೀಪಿಸುತ್ತದೆ. ಅವಳ ದೈಹಿಕ ವಿಕಾರ ಹೆಚ್ಚುತ್ತದೆ. ಎಲ್ಲ ರಿಂದಲೂ ಅಪಮಾನಿತಳಾದ ಅವಳ ಮಮತೆ ಕೈಕೆಯ ಮೇಲೆ ನೂರ್ಮಡಿಸುತ್ತದೆ. ಕೈಕೆಗಾದರೊ ಅವಳ ಬಗ್ಗೆ ಕೃತಜ್ಞತೆ ಮತ್ತು ಪ್ರೀತಿ.

ಹೀಗಿರುವಾಗ ದಶರಥ ಕೈಕೆಯನ್ನು ವರಿಸುತ್ತಾನೆ. ದಾಸಿ ಮಂಥರೆಯೂ ಅಯೋಧ್ಯೆಗೆ ಅವಳೊಡನೆ ಬರುತ್ತಾಳೆ. "ರವಿ ವಂಶದರಸರೂರಾದೊಡೇಂ ಮನ್ನಣೆ ಕುರೂಪತೆಗೆ ತಾನೆಲ್ಲಿ?" ಎಲ್ಲರೂ ಅವಳನ್ನು ಶಪಿಸುತ್ತಾರೆ; ಅವಳ ಸೋಂಕು ಮೈಲಿಗೆ ಯೆಂದು ಬಗೆದು ದೂರವೆ ಇರಿಸುತ್ತಾರೆ. ಕೌಸಲ್ಯೆ, ಸುಮಿತ್ರೆ ಯರೂ ಅಷ್ಟೆ. ಆ ಗೂನಿ ಕೈಕೆಗಾಗಿ ಅದನ್ನೆಲ್ಲ ಸೈರಿಸಿಕೊಳ್ಳುತ್ತಾಳೆ; 'ಕಮ್ಮಾರನಡಿಗಲ್ಲೆನಲ್' ಬಾಳುತ್ತಾಳೆ. ಕೈಕೆ ಭರತನನ್ನು ಹಡೆದಾಗ, ಮಂಥರೆಗೆ ಮೂರನೆಯ ಕಣ್ಣು ಮೂಡಿದಂತಾಗು ತ್ತದೆ. ಅವಳು 'ಹಡೆದ ತಾಯಿಯೆ ನಾಣ್ಚುವೋಲಂತೆ' ಭರತ ನನ್ನು ಸಲಹುತ್ತಾಳೆ.

ನರರನ್ಯರಿಲ್ಲಾಯಿತ್ತು ಮಂಥರೆಯು
ಲೋಕಕ್ಕೆ. ಕೈಕೆ ಭರತರ್ ವಿನಾ. ದಶರಥಂ
ಕೈಕೆ ಭರತರಿಗಾಗಿ; ಕೈಕೆ ಭರತರಿಗಾಗಿ ಏ
ಕೋಸಲಮಯೋಧ್ಯೆಗಳ್, ಶಶಿ ಸೂರ್ಯ ತಾರಾಳಿಗಳ್
ಕೈಕೆ ಭರತರಿಗಾಗಿ; ಭರತನಾಳ್ವಿಕೆಗಾಗಿ ಈ
ಪೃಥಿವಿ !

ಮುಂದೆ ಮಂಥರೆ ರಾಮನ ಪಟ್ಟಾಭಿಷೇಕವನ್ನು ತಪ್ಪಿಸಿ, ಅವನು ವನವಾಸಕ್ಕೆ ಹೋಗುವಂತೆ ಮಾಡುತ್ತಾಳೆ. ತಾನು ಮಾಡಿದ್ದು ಭರತನಿಗೆ ಪ್ರಿಯವಾಗುತ್ತದೆಂದು ಅವಳ ಎಣಿಕೆ. ಆದರೆ ಭರತ ಅವಳನ್ನು ಕಟುವಾಗಿ ನಿಂದಿಸಿ "ಬಿಸುಟ್ಟೆನಿದೊ ನಿನ್ನನೆಂದೆಂದಿಗುಂ" ಎಂದುಬಿಡುತ್ತಾನೆ. ಆಗ ಮಂಥರೆಗೆ ಆಘಾತ ವಾಗುತ್ತದೆ.

ಹಾ ತನ್ನ ಕೈಕೆಯ ಮಗುಗೆ,
ತನ್ನ ಜೀವಾನಂದಸಾಗರ ಸುಧಾಂಶುವಿಗೆ,
ಭರತದೇವಗೆ ನೆಲದ ಸಿರಿಯಕ್ಕೆ, ಸೊಗಮಕ್ಕೆ,
ಮುಡಿಗೆ ನೇಸರ ಬಳಿಯ ಮಕುಟಮಕ್ಕೆಂದಲ್ತೆ
ರಾಮನನಡವಿಗಟ್ಟಿದೆನ್? ಮತ್ತೆ ರಾಮನಂ
ಮನೆಗೆ ಕರೆತಂದೆನಾದೊಡೆ, ಕಂದ ಭರತಂಗೆ
ಮುದವಪ್ಪುದಪ್ಪುದಂತೆಯೆ ಕೈಕೆಗುತ್ಸವಂ

ಎಂದುಕೊಂಡು, ರಾಮನನ್ನು ಮರಳಿಸುವ ನಿಶ್ಚಯದಿಂದ ಹೊರಡುತ್ತಾಳೆ—ತನ್ನ ವಿಷವನ್ನು ತಾನೆ ಹೀರಲೆಳಸುವ ಕಾಳ ಸರ್ಪಿಣಿಯಂತೆ ಮತ್ತು ಪುಣ್ಯದ ಅನ್ವೇಷಣೆಗೆ ಹೋಗುವ ಪಾಪ ದಂತೆ. ರಾಮನನ್ನು ಅವಳು ಹೃದಯದಲ್ಲಿಟ್ಟುಕೊಂಡು, ಅನ್ನ ನೀರುಗಳಿಲ್ಲದೆ "ಓ ಭರತನಣ್ಣಯ್ಯಾ" ಎಂದು ಕೂಗುತ್ತ ಅಡವಿ ಯಲ್ಲಿ ನಡೆಯುತ್ತಾಳೆ. ಅವಳ ಪಾಲಿಗೆ ರಾಮ 'ಭರತನಣ್ಣಯ್ಯ'; ಎಲ್ಲಿಯೂ ಅವಳಿಗೆ ಭರತನೇ ಮುಖ್ಯ. ಅವಳ ಮರುಳುಗಣ್ಣಿಗೆ

ದೂರದಲ್ಲಿ ಜ್ಯೋತಿಯೊಂದು ಗೋಚರಿಸುತ್ತದೆ. ಅದನ್ನವಳು ರಾಮನೆಂದು ಬಗೆದು, ಮುನ್ನುಗ್ಗುತ್ತಾಳೆ. ಆ ಕಾಡುಕಿಚ್ಚು ಅವಳನ್ನು ಆಹುತಿಗೊಳ್ಳುತ್ತದೆ: "ಬಂದಪ್ಪಳಿಸಿದಗ್ನಿಗಾ ಮಂಥರೆಯ ಮೂರ್ತಿ ತಾ ಸುಟ್ಟು ಸೀದುದೊ ಚಿಟ್ಟೆ ಸೀವಂತೆ!"

ಇಲ್ಲಿಗೆ ಮಂಥರೆಯ ಕತೆ ಮುಗಿಯುವುದಿಲ್ಲ. ವ್ಯಕ್ತಿಯಾಗಿ ಅವಳು ಇನ್ನಿಲ್ಲ, ದಿಟ; ಆದರೆ ಶಕ್ತಿಯಾಗಿ ಮತ್ತೆ ಕಾವ್ಯದ ಕಡೆಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಭರತ ಅಗ್ನಿಪ್ರವೇಶಕ್ಕೆ ಅಣಿಯಾದಾಗ ಯಜ್ಞ ಕುಂಡದಿಂದ ಜ್ವಾಲೆಯೇಳುವಂತೆ ಒಂದು ಸುಂದರ ಸೂಕ್ಷ್ಮ ತೇಜದ ದೇವತಾಮೂರ್ತಿ ಮೈದೋರಿ, "ಕಂದ ನಿನ್ನಗ್ರಜಂ ಇಂದೊ ನಾಳೆಯೊ ದಿಟಂ ಪಿಂತಿರುಗಿ ಬಂದಪಂ" ಎನ್ನುತ್ತದೆ. "ದೇವಿ ನೀನಾರ್?" ಎಂದವನು ಕೇಳುತ್ತಾನೆ. "ಮತ್ತಾರ್ ನಿನ್ನ ಸುಕ್ಷೇಮಚಿಂತನೆಯೊಳಿರ್ಪಳಾ ಮಂಥರೆ ವಿನಾ?" ಎಂಬುದು ಉತ್ತರ. "ಬೇಡಮಾ ಪೆಸರನೊರೆಯದಿರ್. ಆ ಗೂನಿ ಕಾರಣಮಾಗೆ ನಾನಿಂತು ಇಂದಿಲ್ಲಿ ಕೈಕೊಂಡೆನೈಸೆ ಕಡುಗಜ್ಜಮಂ" ಎನ್ನುತ್ತಾನೆ ಭರತ. ಆ ಮೂರ್ತಿ ಹೇಳುತ್ತದೆ

ವತ್ಸ, ಕಾರಣಳಲ್ತು; ಬರಿ ಕರಣಮಾ ಕುಬ್ಜೆ.
ಮಂಥರಾ ಪ್ರೇಮದಂತಃಕರಣಮಂ ಕಾಣೆ
ನೀಂ. ರಾಮನಂ ಮತ್ತೆ, ನಿನ್ನಭ್ಯುದಯಕಾಗಿ,
ಪಿಂ ಮರಳ್ಚುವುದ್ಯೋಗದೊಳ್ ತೊಡಗಿರಲ್ಕವಳ್
ದವಾಗ್ನಿಗಾಹುತಿಯಾದಳಲ್ತೆ?

ಹೀಗೆ ಹೇಳಿ ಆ ಮೂರ್ತಿ ಅದೃಶ್ಯವಾಗುತ್ತದೆ.

ಕವಿವಾಣಿ ಕೇಳುತ್ತದೆ:

ಮೂಡುತಿರ್ದುವೆ ಮಹಾರತ್ನಗಳ್, ಪೇಳ್,
ಮಥಿಸದಿರೆ ಮಂಥರೆಯ ವಾಸುಕಿ ಮಹಾಮಮತೆ ತಾಂ
ಕೈಕೆಮನ್ದರದಿಂದಮಾ ತ್ರೇತಾಸಮುದ್ರಮಂ?

ಮಂಥರೆ ಪಾಪಿ ಮಾತ್ರವಲ್ಲ, ದಲಿತ ದಸ್ಯುವರ್ಗದ ಪ್ರತಿನಿಧಿಯೂ ಹೌದು. ಅವಳ ಉದ್ಧಾರದಲ್ಲಿ ದಲಿತರ ಉದ್ಧಾರವೂ ಸರ್ವೋದಯದ ಅಂಗವಾಗಿ ಧ್ವನಿತವಾಗುತ್ತದೆ. ಕವಿಪ್ರತಿಭೆ ಅವಳಿಗೆ ಸಹಾನುಭೂತಿದೋರುತ್ತದೆ:

ಓ ಪತಿತೆ,
ಓ ಕುಬ್ಜೆ, ಓ ಮಂಥರೆಯೆ, ಮರುಗುವೆನ್ ನಿನಗೆ
ಕವಿಸಹಜ ಕರುಣೆಯಿಂ, ಲೋಕಕ್ರೋಧಮದಹಸ್ತಿ
ಪದದಲನ ರೋಷದಾವಾಗ್ನಿಗಾಹುತಿಯಾಗಿ
ಬಿಳ್ದ ನಿನ್ನಾ ಭಸ್ಮರಾಶಿಯುಂ ತೊಳೆವುದಿದೊ
ಕಣ್ಗಂಗೆ, ಕಾವ್ಯಮಹಿಮಾ ಸಿಂಧುತೀರ್ಥಕ್ಕೆ !

ರಾವಣ

'ಶ್ರೀ ರಾಮಾಯಣ ದರ್ಶನ'ದ ಹೃದಯವೆಂದರೆ ರಾವಣ ಪಾತ್ರ. ಕುವೆಂಪು ಅವರ ದರ್ಶನ ಮುಖ್ಯವಾಗಿ ಈ ಪಾತ್ರದ ಮೇಲೆ ನೆಲೆಗೊಂಡಿದೆ. ಮೂಲರಾಮಾಯಣದಲ್ಲಿ ರಾಮ ರಾವಣನನ್ನು ಕೊಲ್ಲುತ್ತಾನೆ; ದುಷ್ಟಶಕ್ತಿ ಶಿಷ್ಟ ಶಕ್ತಿಯಿಂದ ಹತವಾಗುತ್ತದೆ. ಎರಡು ಶಕ್ತಿಗಳೂ ವಿಭಿನ್ನವಾಗಿಯೆ ನಿಲ್ಲುತ್ತವೆ. 'ಶ್ರೀ ರಾಮಾಯಣ ದರ್ಶನ'ದಲ್ಲಿ ರಾಮ ರಾವಣನನ್ನು ಕೊಂದಂತೆ ಕಂಡರೂ, ವಾಸ್ತವವಾಗಿ ಅದು ಕೊಲೆಯಲ್ಲ: ಆಸುರೀಶಕ್ತಿ ದೈವೀಶಕ್ತಿಯಾಗಿ ಪರಿವರ್ತನೆಗೊಳ್ಳುತ್ತದೆ; ಸತ್‌ಶಕ್ತಿ ಅಸತ್ ಶಕ್ತಿಯನ್ನು ತನ್ನಲ್ಲಿ ವಿಲೀನ ಮಾಡಿಕೊಳ್ಳುತ್ತದೆ. ಹೀಗಾಗಿ ಸದಸತ್ತುಗಳ ಅದ್ವೈತ ಈ ಮಹಾಕಾವ್ಯದಲ್ಲಿ ಕಂಡುಬರುತ್ತದೆ. ಆದರೆ ಈ ಅದ್ವೈತ ಸುಲಭವಾಗಿ ಸಿದ್ಧಿಸಿದ್ದಲ್ಲ. ಅದಕ್ಕಾಗಿ ಎಷ್ಟೊಂದು ಸಾಧನೆ! ಎಷ್ಟೊಂದು ಹೋರಾಟ! ಎಷ್ಟು ಜೀವಗಳು ತಪಿಸುತ್ತವೆ!

ರಾಮ-ರಾವಣರಿಬ್ಬರೂ ಒಂದೇ ಶಕ್ತಿಯ ಎರಡು ರೂಪಗಳು; ಇದ್ದಿಲು, ವಜ್ರಗಳು ಹೇಗೆ ಇಂಗಾಲದ ಎರಡು ರೂಪಗಳೋ ಹಾಗೆ. ಇದ್ದಿಲು ವಜ್ರವಾಗುವುದು ವೈಜ್ಞಾನಿಕವಾಗಿ ಸಾಧ್ಯವೋ ಏನೊ. ಅಂತೆಯೆ ರಾವಣತ್ವ ತಪಸ್ಸಿನಿಂದ ರಾಮತ್ವಕ್ಕೇರುವ ಸಾಧ್ಯತೆಯನ್ನು ಕುವೆಂಪುಕಾವ್ಯ ಬಂಧುರವಾಗಿ ಚಿತ್ರಿಸಿದೆ.

> ಸೂರ್ಯನಾತಪಕೆ ಕಾಲದ ತಪಂ ನೆರವಾಗಲಾ
> ಬಜ್ಜರತನಂ ಬರ್ಪುದೊಯ್ಯನಿದ್ದಲಿಗೆನಲ್
> ಸೀತೆ ಮಂಡೋದರಿಯರಿರ್ವರ್ ತಪಂಬಡಲ್
> ರಾವಣನ ಮನದ ಪೊನ್ ಹೃತ್ತಾಪ ಮೂಷೆಯೊಳ್
> ಕುದಿಕುದಿದು ಕರಗಿ ಕಾಳಿಕೆಯನುಳಿಯದೇನ್?

ವಾಲ್ಮೀಕಿ ರಾಮಾಯಣದ ರಾವಣನಿಗಿಂತ ಮೂಲಭೂತವಾಗಿ ಬೇರೆಯಲ್ಲ, 'ಶ್ರೀ ರಾಮಾಯಣ ದರ್ಶನ'ದ ರಾವಣ. ಆದರೆ ಕುವೆಂಪು ಅವರ ದೃಷ್ಟಿ ವಿಶೇಷವಿರತಕ್ಕದ್ದು ರಾವಣಾತ್ಮದ ಉತ್ತರೋತ್ತರ ವಿಕಾಸ, ಪರಿಪಾಕಗಳಲ್ಲಿ; ಅದು ಪಡೆದ ಸಿದ್ಧಿಯಲ್ಲಿ. ರಾವಣ ಬಿದ್ದ ಪರಿ ಮಾತ್ರವಲ್ಲದೆ ಎದ್ದುನಿಂತ ಪರಿ ಮತ್ತು ತಲುಪಿದ ಗುರಿ ಎರಡನ್ನೂ ಇಲ್ಲಿ ಕವಿಪ್ರತಿಭೆ ಪ್ರಕಾಶಗೊಳಿಸಿದೆ.

ಮೂಲ ರಾಮಾಯಣದ ರಾವಣ ಕೇವಲ ದುಷ್ಟ, ವಿಷಯ ಲಂಪಟ; ಲೋಕಕಂಟಕ. ಸಾಯುವವರೆಗೂ ಅವನು ಹಾಗೆಯೇ ಉಳಿದುಕೊಳ್ಳುತ್ತಾನೆ. ಕುವೆಂಪು ರಾಮಾಯಣದಲ್ಲಿ ಹಾಗಲ್ಲ: ಅವನು ಸರಸತೆ, ಸೌಜನ್ಯ, ಸಂಸ್ಕೃತಿ, ಸಹೃದಯತೆಗಳನ್ನುಳ್ಳವನು. ಪ್ರಾರಂಭದಲ್ಲಿ ಅವನು ಕಾಮಾಂಧನೇ ಆದರೂ ಕಡೆಗೆ ಸೀತಾ ಸಂಬಂಧವಾದ ಅವನ ಕಾಮ ಪವಿತ್ರ ಪ್ರೇಮಕ್ಕೆ ತಿರುಗುತ್ತದೆ: ಅವನು ಮಹಾನುಭಾವನಾಗಿ ಪರಿಣಮಿಸುತ್ತಾನೆ. ಇದ್ದಕ್ಕಿದ್ದಂತೆ ಅವನು ಪರಿವರ್ತಿತನಾಗುವುದಿಲ್ಲವೆಂಬುದು ಮುಖ್ಯ. ಕವಿ ಹಾಗೆ

ಅವನನ್ನು ಏಕ್‌ದಂ ಮಹಾತ್ಮನನ್ನಾಗಿ ಮಾಡಿದ್ದಲ್ಲಿ, ಅದು ಅಸಂಭಾವ್ಯವೂ ಮನೋವಿಜ್ಞಾನ ವಿರುದ್ಧವೂ ಆಗುತ್ತಿತ್ತು. ಕುವೆಂಪು ರಾವಣಮಾನಸವನ್ನು ವಿವರ ವಿವರವಾಗಿ ಬಿಡಿಸಿ ತೋರುತ್ತಾರೆ; ಅವನ ಭಯಂಕರ ಕಾಮುಕತೆಯ ಮೂಲವನ್ನೇ ಶೋಧಿಸುತ್ತಾರೆ; ಅವನ ಮನದಲ್ಲಿ ನಡೆಯುವ ತುಮುಲವನ್ನೂ ಹಿತಾಹಿತ ಶಕ್ತಿಗಳ ಘರ್ಷಣೆಯನ್ನೂ ಕ್ಷಕಿರಣಗಳಲ್ಲಿ ಪ್ರಕಟಿಸುತ್ತಾರೆ. ಇದರಿಂದ ರಾವಣನ ಉದ್ಧಾರಕ್ಕೆ ಸಮರ್ಥವಾದ ಹಿನ್ನೆಲ ಕಲ್ಪಿತವಾಗಿದೆ.

ಹುಟ್ಟುವಾಗಲೆ "ನೆತ್ತರೊಳೆ ಪೆಣ್ಣೊಡಲಿನಾಸೆಯಾ ಬೇಟಮಂ" ಹೊತ್ತು ಹುಟ್ಟಿದವನು ರಾವಣ. ಆ ಜನ್ಮದೌರ್ಬಲ್ಯವನ್ನು ಜಯಿಸಲು ಅವನು ಮಹಾಪ್ರಯತ್ನ ಮಾಡುತ್ತಾನೆ. ಪಾತಿವ್ರತ್ಯವನ್ನು ನಂಬಿ, ಪತ್ನೀವ್ರತಕ್ಕೆಳಸಿ, ತಾರುಣ್ಯವನ್ನು ಮುಗ್ಧ ಬುದ್ಧಿಯಿಂದ ಕಳೆಯುತ್ತಾನೆ. ಆದರೆ ಅವನು ಹೆಣ್ತನವನ್ನು ಬಯಸುವ ಮೊದಲೆ ಹೆಣ್ತನ ಅವನನ್ನು ಬಯಸುತ್ತದೆ. ಅಂದಿನಿಂದ ಹೆಣ್ಣಿನ ಬಗ್ಗೆ ಅವನಲ್ಲಿದ್ದ ಪವಿತ್ರ ಭಾವನೆ ಅಳಿದು ಹೋಗಿ, ಭೋಗಭಾವವೆ ಪ್ರಬಲವಾಗುತ್ತದೆ. ಕಾಮದ ಹುಚ್ಚು ಹೊಳೆಯಲ್ಲಿ ಅವನು ಕೊಚ್ಚಿಹೋಗುತ್ತಾನೆ. ಅವನ ರೂಪ ವೈಭವಗಳಿಗೆ, ರಸಿಕತೆಗೆ, ಯೌವನಕ್ಕೆ ವಶವಾಗದ ಹೆಣ್ಣುಗಳೇ ಇಲ್ಲ. ಹದಿಬದೆಯರೆನಿಸಿಕೊಂಡ ಎಷ್ಟೋ ಸ್ತ್ರೀಯರನ್ನು ಅವನು ಪರೀಕ್ಷಿಸುತ್ತಾನೆ; ಎಲ್ಲರೂ ಅವನಿಗೆ ಸುಲಭವಾಗಿ ಸೋಲುತ್ತಾರೆ. ಪಾತಿವ್ರತ್ಯದಲ್ಲಿ ಅವನಿಗೆ ನಂಬಿಕೆ ಕುಸಿಯುತ್ತದೆ. ಕುತೂಹಲ ಅನಿವಾರ್ಯವಾದ ರುಚಿಯಾಗಿ, ತೃಷ್ಣೆಯಾಗಿ ಅವನನ್ನು ಪತನದತ್ತ ಸೆಳೆದೊಯ್ಯುತ್ತದೆ. ತಾನು ಹಿಡಿದಿರುವುದು ದುರ್ಮಾರ್ಗವೆಂಬ ಅರಿವು ಅವನಿಗಿಲ್ಲದೆ ಇಲ್ಲ. ಆದರೆ ತನಗೆ ಸೋಲದ ಪತಿವ್ರತೆ

ಯನ್ನು ಕಾಣಲಾರದ ವೈಫಲ್ಯದಿಂದ ಅವನು ವಿಷಯದ ವಿಷಗರ್ತ ದಲ್ಲಿ ತೊಳಲುತ್ತಾನೆ. ಸೀತೆ ತನಗೆ ದುರ್ಲಭಳೆಂಬುದು ಮನವರಿಕೆ ಯಾದೊಡನೆಯೇ ಅವನ ಊರ್ಧ್ವಗಮನ ಮೊದಲಾಗುತ್ತದೆ.

ಹೀಗೆ ರಾವಣನ ಉದ್ಧಾರದ ಬೀಜ ಅವನ ಹೃದಯದ ದ್ವಂದ್ವ ಪ್ರವೃತ್ತಿಯಲ್ಲೇ ಸುಪ್ತವಾಗಿರುವುದನ್ನು ಕಾಣುತ್ತೇವೆ. ಸೀತೆ, ಮಂಡೋದರಿ, ವಿಭೀಷಣ, ಅನಲೆ, ಕಡೆಗೆ ಚಂದ್ರನಖಿ— ಮೊದಲಾದವರೆಲ್ಲ ಗಾಳಿ ಬೆಳಕು ನೀರುಗಳಂತೆ ಆ ಬೀಜವನ್ನು ಜಾಗ್ರದವಸ್ಥೆಗೆ ತಂದು, ಮರವಾಗಿಸುತ್ತಾರೆ. ಇವರೆಲ್ಲರ ತಾರಕ ಶಕ್ತಿಯಿಲ್ಲದಿದ್ದರೆ ರಾವಣ ಅದೇ ಜನ್ಮದಲ್ಲಿ ಅಷ್ಟು ಕ್ಷಿಪ್ರವಾಗಿ ಉದ್ಧಾರಗೊಳ್ಳುತ್ತಿರಲಿಲ್ಲ.

"ತನ್ನಯ ಮನೋಹರಿಯ ಮೆಯ್ಯ ಮೋಹಸರಸಿಯೊಳಾಡಿ ತಡಿಗೇರ್ದ ಮತ್ತೇಭಸನ್ನಿಭ" ರಾವಣನನ್ನು ಮೊದಲ ಬಾರಿಗೆ 'ಶ್ರೀ ರಾಮಾಯಣ ದರ್ಶನ'ದಲ್ಲಿ ನೋಡುತ್ತೇವೆ. ಅವನು ಮೀಸೆಗಯ್ಯಾಗಿ, ಕಿರುನಗೆವೆರಸಿ, ತಾಂಬೂಲರಾಗ ರಂಜಿತ ತುಟಿಯುಳ್ಳವನಾಗಿ ಇನಿಯಳಿಗೆ ಹೇಳುತ್ತಾನೆ: "ಪ್ರಿಯೆ, ಪಯಣ ಮಿದೆ ನಾಳೆ; ದೂರಂ, ಮಹತ್ತರಂ; ಅನಿವಾರ್ಯಮುಂ ದಿಟಂ ...ಬಂದೊದಗಿತೊಯ್ಯನೆಯೆ ನಿನಗೇತಕಾ ರಾಜಕಾರಣಂ, ಬರಿ ಗಂಡು ಹಗರಣಂ?" ಪತಿಯ ಮುಖವಿಕೃತಿಯನ್ನು ಗಮನಿಸಿದ ಮಂಡೋದರಿ, ಆ ರಾಜಕಾರಣವೇನೆಂದು ಕೇಳುತ್ತಾಳೆ. ರಾಮ ಲಕ್ಷ್ಮಣರಿಂದಾದ ಖರದೂಷಣರ ವಧೆಯನ್ನೂ ಚಂದ್ರನಖಿಯ ಅಪಮಾನವನ್ನೂ ತಿಳಿಸುತ್ತಾನೆ ರಾವಣ. ಅದಕ್ಕೆ ಪ್ರತೀಕಾರವಾಗಿ ರಾಮನ ಮಡದಿಯನ್ನು ಹೊತ್ತು ತಂದು ಮಂಡೋದರಿಗೆ ಮತ್ತೊಬ್ಬಳು ದಾಸಿಯನ್ನಾಗಿ ಮಾಡುವುದಾಗಿ ಹೇಳುತ್ತಾನೆ.

ಆಗ ಮಂಡೋದರಿ ಕಂಬನಿಮಿಡಿದು, ಸುಯ್ಯುತ್ತ, ತನ್ನ ಹೃದಯ ವನ್ನೊರೆಯಲಾರದೆ, ಮನೆಯ ದೇಗುಲಕ್ಕೆ ನಡೆಯುತ್ತಾಳೆ.

ಇಲ್ಲಿ ರಾವಣ ತನ್ನ ವಿಷಯಲೋಲುಪತೆಗೆ ರಾಜಕಾರಣದ ವೇಷವನ್ನು ತೊಡಿಸಿ ಸೀತಾಪಹರಣಕ್ಕೆ ಸಿದ್ಧನಾಗಿದ್ದಾನೆ. ಹಿಂದೆಷ್ಟು ಸಲ ಮಂಡೋದರಿ ಪತಿಗೆ ವಿವೇಕ ಹೇಳಿದ್ದಳೊ! ಅವಳ ಪ್ರಯತ್ನ ಗಳೆಲ್ಲ ವಿಫಲವಾಗಿದ್ದುವು. ಎಂತಲೇ ಈ ಸಲ ಅವಳು ಏನೂ ಮಾತನಾಡದೆ, ತನ್ನ ಏಕೈಕ ಅವಲಂಬನವಾದ ಭಗವತ್ ಪ್ರಾರ್ಥನೆಗೆ ನಡೆಯುತ್ತಾಳೆ. ಸೀತೆಯ ತಪಸ್ಸು ಬೆಂಬಲವಾಗುವ ತನಕ ಮಂಡೋದರಿಯ ತಪಸ್ಸು ಫಲಿಸುವಂತಿಲ್ಲ, ರಾವಣನ ಪರಿವರ್ತನೆಯಾಗುವಂತಿಲ್ಲ.

ಬಳಿಕ ರಾವಣ ಮಾರೀಚನನ್ನೊಲಿಸಿ, ಸೀತೆಯನ್ನು ಲಂಕೆಗೆ ತರುತ್ತಾನೆ; ಅವಳನ್ನೊಂದು ಗುಪ್ತಗೃಹದಲ್ಲಿರಿಸಿ, ಅವಳ ಮನ ವೊಲಿಸುವಂತೆ ಚಂದ್ರನಖಿಯನ್ನು ನೇಮಿಸುತ್ತಾನೆ. ಸೀತೆಯನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳುವ ಅರಸಿಕ ನೀಚ ಅವನಲ್ಲ; ತಾನಾಗಿ ಒಲಿಯದ ಯಾವ ಹೆಣ್ಣನ್ನೂ ಅವನು ಕೂಡಿದವನಲ್ಲ. ಸೀತೆ ಮಿಾಯದೆ, ಉಡದೆ, ಅನಶನವ್ರತೆಯಾಗಿ ಸದಾ ಪ್ರಿಯನ ಧ್ಯಾನದಲ್ಲಿದ್ದಾಳೆಂಬ ವಾರ್ತೆ ಬಂದಾಗ ದೈತ್ಯೇಂದ್ರ ಕುದಿಯುತ್ತಾನೆ. ಮನದ ತಳ್ಳಂಕವನ್ನು ಮುಚ್ಚಿಡುತ್ತ ಸೀತೆಯೆಡೆಗೆ ಬಂದು, "ಸಲ್ಲದು, ದೇವಿ, ಶಠವರ್ತನಂ ನಿನ್ನಾರ್ಯ ಸಂಸ್ಕೃತಿಗೆ... ಆಹಾರಮಂ ನಿನಗೆ ತಕ್ಕುದಂ ಕೊಂಡು, ನಿನಗೊಪ್ಪುವಾವಾಸಮಂ ಪೊಕ್ಕು, ನೋಂಪಿಗೆ ಮಾಡು ಯೋಗ್ಯಮಂ...ತೀರದೊಳಶೋಕ ವನಮಿರ್ಪುದೊಂದೆಳ್ತರದ ಮಲೆಯ ಕೋಡಿನಲಿ...ಸಮೆದಪುದಲ್ಲಿ ತೃಣಗೃಹಂ. ನಿನ್ನಾಸೆ ಮೇಣ್ ನನ್ನಾಜ್ಞೆ..." ಎಂದು ಹೇಳಿ, ನಾನಾ ಭಾವಗಳ ತೊತ್ತಳದುಳಿತಕ್ಕೆ ಸಿಕ್ಕಿ, ಮಂಡೋದರಿಯ

ಮಂದಿರಕ್ಕೆ ಹೊರಡುತ್ತಾನೆ. ಇಲ್ಲಿ, ತನಗರಿವಿಲ್ಲದೆಯೆ ಸೀತೆಯ ತಪಕ್ಕೆ ಅವನು ಇಂಬು ಕೊಡುತ್ತಿದ್ದಾನೆ; ತನ್ನ ಉತ್ಥಾನವನ್ನು ಆಮಂತ್ರಿಸುತ್ತಿದ್ದಾನೆ.

ರಾವಣ ಸೀತೆಯನ್ನು ತಂದ ಸುದ್ದಿ ಪೂಜಾಗೃಹದಲ್ಲಿದ್ದ ಮಂಡೋದರಿಗೆ ಮುಟ್ಟುತ್ತದೆ. ಅವಳು ಸೀತೆಯನ್ನು ಕಾಣುವ ಕಾತರದಿಂದ ಪೂಜೆಯಿಂದೇಳುವನಿತರಲ್ಲಿ ರಾವಣ ಅಲ್ಲಿಗೆ ಬರುತ್ತಾನೆ. ಆ ಗಾಢಮೌನದಲ್ಲಿ "ನಮಿಸಿದನ್ ಮನ್ಮಥಾರಿಗೆ ಮನ್ಮಥನ ಬಂದಿ!" ಅವನು ಉದ್ವೇಗದಿಂದ ದೀನದುಃಖಿಯಾದ ಸತಿಯೆಡೆಗೆ ನಡೆದು. "ದೇವಿ, ನಿನ್ನರಕೆಯೇಂ?" ಎಂದು ಕೇಳು ತ್ತಾನೆ. "ಸತಿಗರಕೆಯೇಂ ಜೀವೇಶ? ಪತಿಹೃದಯಮಂ ಪಡೆವು ದಲ್ಲದೆಯೆ ಬೇರಾವುದರಕೆ?" ಎಂಬುದು ಮಂಡೋದರಿಯ ಉತ್ತರ. ರಾವಣ "ನಿನ್ನವನೆ ಸಾಸೇಗಳುಂ!" ಎನ್ನುತ್ತಾನೆ. "ಅಯ್ಯೋ, ಆ ಪುಣ್ಯಮೆಂದಿಗೊ!" ಎಂದು ಉದ್ಗರಿಸಿದ ಮಂಡೋದರಿ. "ಹದಿಬದೆಯ ಹೃದಯದುರಿ ಲಂಕೆಯಂ ದಹಿಸದೆ?" ಎಂದು ನೇರವಾಗಿ ಕೇಳುತ್ತಾಳೆ. ಆಗ ಲಂಕೇಶ "ಮತ್ತೆ ಮತ್ತದೆ ಮಾತು! ಹದಿಬದೆಯ ಹೃದಯದುರಿ? ಪುಸಿ ಮನೆಗೆ ಪುಸಿಗೋಡೆ!" ಎಂದು ಲಘುವಾಗಿ ಆಡುತ್ತಾನೆ. ಮಂಡೋದರಿ ಕೆರಳಿ ನುಡಿಯುತ್ತಾಳೆ:

ಪ್ರಾಣೇಶ, ದೈತ್ಯೇಂದ್ರ,
ಮತ್ತೋರ್ವನಿದ್ದಿದ್ದರೀ ತೆರನ ರಾವಣಂ
ತೋರುತಿರ್ದಳ್ ನಿನಗೆ ಹದಿಬದೆಯರಿರ್ಪುದಂ,
ಹದಿಬದೆತನದ ಹಿರಿಮೆಯುಂ, ನಿನ್ನ ಈ ಮಯನ
ಮಗಳಬಲೆ!

ಪತ್ನಿಯ ಆ ದಿಟ್ಟನೋಟಕ್ಕೆ, ದನಿಯ ದೃಢತೆಗೆ, ಧರ್ಮಧೈರ್ಯಕ್ಕೆ ರಾವಣನೆದೆ ಅಳುಕುತ್ತದೆ. ಅವನು

ದೇವಿ,
ಕರುಣೆಸುಪಸಂಹರಿಸು ದಿಟ್ಟಿಸಿಡಿಲಂ...
....ನೀನೆನಗೆ ಶಾಂತಿ
ಸತ್ತ್ವಮಾತ್ಮಂ; ನೀನೆನಗೆ ತುತ್ತತುದಿಯಾಸೆ,
ನೆಲೆ, ನೆಚ್ಚು, ಸೈಪು! ದೇವನೆ ಪೇಸಿ ಬಿಟ್ಟೊಡಂ
ಕೆಟ್ಟೆನಲ್ಲೆನ್; ಪ್ರೇಮಮಯಿ ನೀಂ ತೊರೆಯೆ, ಅಯ್ಯೊ,
ಶೂನ್ಯನೆಂ

ಎಂದು ನುಡಿದು, ಇತರರಿಗೆ ತಿಳಿಯಂದ ತನ್ನ ಒಳತೋಟಿಯನ್ನು ಸತಿಗೆ ನಿವೇದಿಸುತ್ತಾನೆ:

ಸೀತೆಯಂ ತಂದಂದಿನಿಂ ಮನಕೆ ಕಳವಳಂ.
ಹೆದರಿಕೆಯನಾನರಿಯೆನಾದೊಡಂ ಮನಕೇನೊ
ಅಶಾಂತಿ. ಒಮ್ಮೊಮ್ಮೆ ಕೆರಳುತಿಂದ್ರಿಯತೃಷ್ಣೆ
ಕಾತರಿಸುತಿದೆ; ಮತ್ತಮೊಮ್ಮೊಮ್ಮೆ, ನಿನ್ನೊಂದು
ತಪದ ಫಲಮೆಂಬಂತೆ, ಬಿರಿಯೊತ್ತಿ ತಡೆಯುತಿದೆ
ತೃಷೆಯ ಮನ್ಮಥರಥದ ತೇರ್ಗಾಲಿಯಂ ಶಿವಂ.

ದಂಪತಿಯ ಸಂಭಾಷಣೆ ಮುಂದುವರಿಯುತ್ತದೆ:

"ನನ್ನಿಂದೆ ಕದ್ದೊಯ್ದುಳಂ ಮರಳಿ
ತಂದೆನಾಂ ಗೆಲ್ದು!" "ಪೆಣ್ಗೆ ತನುವಲ್ತು ಹೃದಯಂ!"
"ತನುವಿನಂಶಮೆ ಹೃದಯಂ! ಅದರ ಬೆಂಬಳಿಯೊಳಿದು
ಸೋಲ್ವುದಿಂದಲ್ಲದಿರೆ ನಾಳೆ!" "ಶಿವಕೃಪೆಯಿಂದೆ, ಕೇಳ್,
ಪುಸಿಗೈವಳಾ ಭ್ರಾಂತಿಯಂ ಸೀತೆ!" "ನನ್ನಿಚ್ಛೆ
ಸೋಲ್ಗೆ: ಹದಿಬದೆ ಗೆಲ್ಗೆ; ನಿನ್ನಾಸೆಯುಂ ಸಲ್ಗೆ:
ಬಲದಿನಲ್ಲದೆ ಸೋಲೆನಭ್ಯುದಯಕಾದೊಡಂ!"

ಹಾಗೆ ಹೇಳಿ ಹೊರಹೋಗುತ್ತಿದ್ದ ಪತಿಯನ್ನು ಮಂಡೋದರಿ ಕರೆದು, ಪ್ರಸಾದ ಕೊಡುತ್ತಾಳೆ. ಅದನ್ನು ಹಣೆಗೊತ್ತಿಕೊಂಡ ರಾವಣ "ನೀಂ ಮಹಿಮಳಾನಲ್ಪನೆಂ, ದೇವಿ, ನಿನ್ನೊಳ್ಪು ಶಿಕ್ಷಿಸಲಿ ರಕ್ಷಿಸಲಿ ಧನ್ಯನಾಂ!" ಎಂದು ನುಡಿದು. ಶಿವನ ಮುಂದೆ ದಿಂಡಂ

ಗೆಡೆಯುತ್ತಾನೆ. ಈ ಸಂದರ್ಭದಲ್ಲಿ, ಮಂಡೋದರಿ ಶಿವಶಿವಾಣಿಯರ ಸಾನ್ನಿಧ್ಯದಲ್ಲೇ ತನ್ನಾಣ್ಮನ ಉದ್ಧಾರಕ್ಕೆ ವೇದಿಕೆ ಸಿದ್ಧಪಡಿಸುತ್ತಿರುವುದನ್ನು ನೋಡುತ್ತೇವೆ. ರಾವಣನೂ ಒಳ್ಪಿಗೆ ಸಿದ್ಧನಾಗಿಯೇ ಇದ್ದಾನೆ.

ಮುಂದೆ ರಾವಣ ಅಶೋಕವನಕ್ಕೆ ಧಾನ್ಯಮಾಲಿನಿಯೊಡನೆ ಹೋಗಿ, ಸೀತೆಯ ಪ್ರೇಮಭಿಕ್ಷೆಯನ್ನು ಯಾಚಿಸುತ್ತಾನೆ. "ಸಾಧನೆಗೆ ಯಾವುದೂ ಅಸಾಧ್ಯವಲ್ಲ. ಕಾಲಾಂತರಕ್ಕೆ ಕಲ್ಲು ಈಶ್ವರ ಕೃಪೆಯಾಗಿ ಪರಿಣಮಿಸುವಂತೆ, ನಿನ್ನ ಕಲ್ಲೆದೆ ಕರಗಿ ಮೃದುವಾಗುವುದು ದಿಟ! ಈ ಧಾನ್ಯಮಾಲಿನಿಯೆ ನನಗೆ ಸಾಕ್ಷಿ..." ಎನ್ನುತ್ತಾನೆ. ಆಗ ಸೀತೆ "ದಶಗ್ರೀವ! ನೀನೆಂದಂತೆ, ಸಾಧನೆಗೆ ಯಾವುದೂ ಅಸಾಧ್ಯವಲ್ಲ. ಕಬ್ಬಿಣದಂತಹ ನಿನ್ನ ಕಲ್ಲೆದೆ ಕರಗಿ ಮೃದುವಾಗುವುದು ದಿಟ! ನಿನ್ನ ಆತ್ಮೋದ್ಧಾರಕ್ಕೆ ನಾನು ಅನವರತವೂ ನೋಂತಿದ್ದೇನೆ!" ಎನ್ನುತ್ತಾಳೆ. ರಾವಣ ಮೂಕವಿಸ್ಮಿತನಾಗುತ್ತಾನೆ. ಕಡಲ ಮೊರೆ, ಹಕ್ಕಿಯಿಂಚರ, ತರುಮರ್ಮರ ಕೇಳಿಸುತ್ತವೆ. ಅವನು ಚಿಂತಾಮಗ್ನನಾಗಿ, ಮೌನದಿಂದ ಧಾನ್ಯಮಾಲಿನಿಯೊಡನೆ ಮೊಗದಿರುಹುತ್ತಾನೆ. ರಾವಣನ ಮಾತುಗಳಲ್ಲೆ ಅವನ ಪರಿವರ್ತನೆಯ ಸೂಚನೆಯಿದೆ; ಸೀತೆ ಅದನ್ನು ಸ್ಪಷ್ಟಪಡಿಸುತ್ತಾಳಷ್ಟೆ.

ಆಂಜನೇಯ ಲಂಕಾನ್ವೇಷಣ ನಿರತನಾಗಿ ರಾವಣ ಗೃಹವನ್ನು ಹೊಗುವಾಗ ನಡೆಯುವ ರಾವಣ–ಮಂಡೋದರಿಯರ ಸಂವಾದದಲ್ಲಿ ಮತ್ತೆ ನಾವು ರಾವಣನ ಅಂತಸ್ಥವನ್ನರಿಯುತ್ತೇವೆ. ಮಂಡೋದರಿ ಶಿವಪಾರ್ವತಿಯರ ಮುಂದೆ ಪತಿಭಿಕ್ಷೆಯನ್ನು ಬೇಡುತ್ತಿದ್ದಾಳೆ. ಆಗ ಹನುಮ "ರಾಮಚಂದ್ರಂ ಗೆಲ್ಗೆ! ಜನಕನಂದಿನಿ ಬಾಳ್ಗೆ!" ಎಂದು ಉದ್ಗರಿಸುತ್ತಾನೆ. ಅದನ್ನು ಕೇಳಿ

ದೊಡನೆಯೆ ಮಂಡೋದರಿ ಬೆಚ್ಚಿ ಚೀರುತ್ತಾಳೆ. ಕೂಡಲೆ ರಾವಣ ಒಳಬರುತ್ತಾನೆ. "ಇವನಾರ್! ಈತನಾರ್? ಈ ಮಹಾಪುರುಷ ನಾರ್? ನಾಂ ಕಾಣೆನಿನ್ನೆಗಂ ಇವಂಗೆಣೆಯ ಓಜಸ್ವಿಯಂ" ಎಂದು ಮಾರುತಿ ಬೆಕ್ಕಸಬೆರಗಾಗುತ್ತಾನೆ. ರಾವಣ ದರ್ಪಧ್ವನಿಯಿಂದ ಮಂಡೋದರಿ ಚೀರಿದುದೇಕೆಂದು ಕೇಳುತ್ತಾನೆ. ತಾನು ಕೇಳಿ ದುದನ್ನು ಅವಳು ಹೇಳುತ್ತಾಳೆ. ಇಬ್ಬರಿಗೂ ಹೀಗೆ ಮಾತಾಗು ತ್ತದೆ:

"ನಿನ್ನ ಹೃದಯಮೆ ನಿನಗೆ, ದೇವಿ,
ಕಿವಿಯಾಯ್ತು, ನಿನ್ನುಸಿರ ಹರಕೆಯನೆ ನಿನ್ನ ಕಿವಿ
ಧ್ಯಾನಸಮಯದೊಳಾಲಿಸಿತು. ಬೇರೆಯಿನ್ನೆಲ್ಲಿ
ವಾಣಿ, ಪೇಳ್, ನನ್ನ ರಾಣಿ?"
"ನಿನಗೆ ಅಶುಭವನೆಂತು
ನೆನೆಯುವೆನ್, ಜೀವೇಶ?"
"ನನಗೆ ಅಶುಭವನಲ್ತು,
ಅವರ್ಗೆ ಶುಭಮಂ"
"ಸರ್ವರ್ಗೆ ಶುಭಮಿರ್ಕೆ, ಪ್ರಭೂ.
ಕಲ್ಯಾಣಕಲ್ಪತರು, ಲೋಕಗುರು ಶಿವನಿದಿರ್
ಪ್ರಾರ್ಥನೆಗೆ ಕಾರ್ಪಣ್ಯಮೇಕೆ?"

ಸೀತೆಯನ್ನು ತಾನು ಕಂಡುದಾಗಿ ಮಂಡೋದರಿ ಹೇಳುತ್ತಾಳೆ. ಆಗ ರಾವಣ ತನ್ನ ಅಂತರ್ಯವನ್ನು ಬಿಚ್ಚಿ ಹೇಳುತ್ತಾನೆ:

ಕೆಟ್ಟೆನಾಂ! ಕೊಂದೆ ನೀಂ!
ಹಿಂದೆಂದು ಸೋಲರಿಯದೆನ್ನನ್. ಮಯಕುಮಾರಿ,
ನೀಂ ಸೋಲಿಸಿದೆ ಶುಭಕೆ! ಕೇಳ್. ದೇವಿ, ಪೇಳ್ವೆನ್.
ರಣರಂಗಮಾಗಿರ್ಪುದೆನ್ನ ಹೃದಯಂ ಹಿತಕೆ
ಮೇಣ್ ಪ್ರಿಯಕೆ, ರುಚಿಗೆ ಮೇಣ್ ಶುಚಿಗೆ; ನಿನ್ನ ಮುಂದಿರೆ
ನಿನಗೆ, ಮೇಣಾಕೆಯಂ ನೆನೆಯಲಾಕೆಯ ಸುಖದ
ಸಂಗಕ್ಕೆ!

ಮುಂದೆ ಅವನು "ನಾಳೆ ಸೂರ್ಯೋದಯದಲ್ಲಿ ಒಬ್ಬನೆ ಕಡೆಯ ಬಾರಿಗೆ ಅಶೋಕವನಕ್ಕೆ ಹೋಗುತ್ತೇನೆ. ನಿನ್ನ ರಾವಣ ಸಂಮ್ಮನೆ ಸೋತುಹೋಗುತ್ತಾನೆಂದು ತಿಳಿಯಬೇಡ, ಮಂಡೋದರಿ!" ಎನ್ನುತ್ತಾನೆ. ಅವನ ಮುಖ ಕಾಮದಿಂದ ವಿಕಾರವಾಗುತ್ತದೆ. ಆಗ ಮಂಡೋದರಿ ಮುನ್ನುಗ್ಗಿ ಪತಿಯ ಕಾಲುಗಳನ್ನು ಬಳ್ಳಿಯಂತೆ ತಬ್ಬಿಕೊಂಡು ಬಿನ್ನವಿಸುತ್ತಾಳೆ:

ಬೇಡ ಬೇಡೀ ಹಠದ
ಸಾಹಸಂ ರಾಜೇಂದ್ರ. ರುಚಿಗೆ ಕೈಕೊಂಡುದಂ
ಚಲಕೆ ಮುಂಬರಿಪುದೇಂ ಸುಖವೆ, ಸರಸವೆ, ಮತಿಯೆ,
ಸಚ್ಚರಿತ್ರವೆ, ಜೀವಿತೇಶ್ವರ ?... ಶಿವಕೆ
ಶರಣಾದವರದು ಸೋಲೆ ? ಆ ಗೆಲ್ಗೆ ಮಿಗಿಲೊಳದೆ
ಬೇರೆ ಗೆಲ್ಲಂ ?.... ಸೋಲು ಸತ್ಯಕ್ಕೆ;
ನಮಗದುವೆ ಗೆಲ್. ಸೋಲು ಧರ್ಮಕ್ಕೆ; ನಮಗದುವೆ
ಗೆಲ್...

ಇದನ್ನು ಕೇಳಿದ ರಾವಣ ಭಾವಭಾರದಿಂದ ಬಾಗುತ್ತಾನೆ; ಅವನ ಕಣ್ಣುಗಳಿಂದ ಹನಿಗಳುದುರುತ್ತವೆ. ಪತ್ನಿಗೆ ಹೇಳುತ್ತಾನೆ: "ಕ್ಷಾತ್ರ ತೇಜ ಸ್ವತಃ ಸೋಲನ್ನು ಬಯಸಿ ಪಡೆಯುತ್ತದೆಯೇ? ಪ್ರಿಯೆ, ವೀರರು ಬಯಸುವುದು ವಿಜಯವನ್ನೇ ಹೊರತು ಸೋಲನ್ನಲ್ಲ. ನಿನ್ನ ಆಸೆ, ನನ್ನ ಸೋಲು ಬರುವುದಾದರೆ ಬರಲಿ...ಸೀತೆಯನ್ನು ಮೊದಮೊದಲು ಚೆಲುವಿಗಾಗಿ ಒಲಿದೆ. ಅವಳು ಅದನ್ನು ಮಸುಳಿಸಿದಳು... ಈಗ ಚಲವೆ ನನ್ನನ್ನು ಮೋಹಿಸುತ್ತಿದೆ. ಹಿಂದಿನಂತೆ ನಾನೀಗ ಅವಳನ್ನು ಮತ್ತೆಮತ್ತೆ ನೋಡುತ್ತಿಲ್ಲ; ಎಲ್ಲಿ ನನ್ನ ದೃಢತೆಗೆ ಭಂಗ ಬರುವುದೋ ಎಂದು ಅಂಜಿಕೆ. ಅವಳೊಂದು ಕಡೆ, ನೀನೊಂದು ಕಡೆ, ಆ ವಿಭೀಷಣನೊಂದು ಕಡೆ, ನನ್ನ ಚಿತ್ತವನ್ನು

ಚಲಿಸುತ್ತಿದ್ದೀರಿ. ಆದರೇನು? ನಿಮ್ಮೆಲ್ಲರನ್ನೂ ಗೃಹವೈರಿಗಳೆಂದು ತಿಳಿದು ಗೆಲ್ಲುತ್ತೇನೆ."

ರಾವಣನ ಹೃದಯವಾಗಲೆ ಅರೆಪಕ್ವವಾಗಿರುವುದನ್ನು ಇಲ್ಲಿ ನೋಡುತ್ತೇವೆ. ಅವನ ಕಾಮ ಉಡುಗಿಹೋಗಿ, ಅದರ ಸ್ಥಾನದಲ್ಲಿ ಸೀತೆಯನ್ನು ಗೆಲ್ಲಲೇಬೇಕೆಂಬ ಛಲ ಮೂಡಿದೆ. ಮುಂದೆ ಈ ಛಲವೂ ಅಳಿದು, ರಾಮನನ್ನು ವೀರೋಚಿತ ರೀತಿಯಲ್ಲಿ ಗೆದ್ದು ಸೀತೆಗೆ ತಂದೊಪ್ಪಿಸಬೇಕೆಂಬ ಅಭಿಮಾನಮೂಲವಾದ ಛಲವಷ್ಟೇ ಪ್ರಬಲಿಸುತ್ತದೆ.

ಮುಂದೆ ರಾವಣ ಮತ್ತೊಮ್ಮೆ ಅಶೋಕವನಕ್ಕೆ ಹೋಗಿ, ಸೀತೆಯನ್ನು ಒಲಿಸಲು ಯತ್ನಿಸಿ, ಧಿಕ್ಕೃತನಾಗುತ್ತಾನೆ. ಆಗ ಕೋಪದಿಂದ "ಇನ್ನೆರಡು ತಿಂಗಳ ಅವಧಿ ಕೊಟ್ಟಿದ್ದೇನೆ. ಅಷ್ಟರಲ್ಲಿ ನೀನು ವಶವಾಗದಿದ್ದರೆ, ಇದಕ್ಕೆ ಮದ್ದು ಬಲಾತ್ಕಾರ ರೂಪದಿಂದ ಬರುತ್ತದೆ. ನೀನು ನಿರಶನವ್ರತದಿಂದ ಸಾಯುವುದಾದರೆ, ನಾನೂ ಅದೇ ಚಿತೆಯನ್ನೇರಿ ಭಸ್ಮರೂಪದಿಂದಾದರೂ ನಿನ್ನನ್ನು ಕೂಡುತ್ತೇನೆ" ಎಂದು ನುಡಿದು ಹೋಗುತ್ತಾನೆ. ಅದನ್ನು ಕೇಳಿ ಸೀತೆ ತಲ್ಲಣಿಸುತ್ತಾಳೆ. ಆಗ ತ್ರಿಜಟೆ ಅವಳನ್ನು ಹೀಗೆ ಸಂತೈಸುತ್ತಾಳೆ: "ರಾವಣನಾಡಿದ್ದೆಲ್ಲ ಹುಸಿ. ಅವನನ್ನು ನಾನು ಬಲ್ಲೆ. ಅವನು ಕಾಮುಕನಾದರೂ, ಒಲಿಯದವರನ್ನು ಬಲಾತ್ಕಾರದಿಂದ ಕೂಡುವ ಪಶುವಲ್ಲ; ಕಠಿಣನಾದರೂ ಅಸಂಸ್ಕೃತನಲ್ಲ; ನಾರಿಯನ್ನು ಮೀರಿ ಕೂಡುವ ಹೇಡಿಯಲ್ಲ, ಯಾವಾಗಲೂ ಪೌರುಷಶಾಲಿ." ರಾವಣನ ನೈಜ ವ್ಯಕ್ತಿತ್ವವನ್ನು ತ್ರಿಜಟೆಯ ಈ ನುಡಿಗಳು ಕನ್ನಡಿಸುತ್ತವೆ.

ದೈತ್ಯಸಭೆಯಲ್ಲಿ ವಿಭೀಷಣನಾಡಿದ ಹಿತವಚನವನ್ನು ಆಲಿಸಿದ ರಾವಣ ಅಸ್ವಸ್ಥನಾಗಿ ಮನೆಗೆ ಮರಳುತ್ತಾನೆ. ಅವನ ಮಾನಸಿಕ

ಹೋರಾಟವೆ ದೈಹಿಕ ಅಸ್ವಸ್ಥತೆಯಾಗಿ ಕಾಣಿಸಿಕೊಳ್ಳುತ್ತದಷ್ಟೆ. ಮಂಡೋದರಿ ಅನಲೆಯರು ಅವನ ಶುಶ್ರೂಷೆಯಲ್ಲಿ ತೊಡಗುತ್ತಾರೆ. ಅವನು ನಿದ್ರಾಗತನಾಗಿರುವಾಗ ವಿಭೀಷಣ ಅಣ್ಣನನ್ನು ಕಾಣಲು ಬರುತ್ತಾನೆ. ಸರ್ವಲೋಕಭಯಂಕರನಾದ ರಾವಣ ಇದ್ದಕ್ಕಿದ್ದಂತೆ ನಿದ್ದೆಯಲ್ಲಿ ಅಳತೊಡಗುತ್ತಾನೆ. ಬಳಿಕ ಕಣ್ದೆರೆದು ಅನಲೆಯನ್ನು ಮಾತ್ರ ಕಂಡು, ಭಾವಗೋಪನದ ಉದ್ದೇಶದಿಂದ ಅವಳನ್ನು ಕರೆದು ಹೀಗೆನ್ನುತ್ತಾನೆ: "ನೀನು ನನ್ನನ್ನು ಆಗಲಿದಂತೆ ಒಂದು ಕನಸಾಯಿತು, ಅಕ್ಕ!" ಆಗ ಅನಲೆ ತಾನೆಲ್ಲಿಗೂ ಹೋಗುವುದಿಲ್ಲವೆಂದು ದೊಡ್ಡಯ್ಯನಿಗೆ ಭರವಸೆ ಕೊಡುತ್ತಾಳೆ. "ನಿಮ್ಮಯ್ಯ ನನ್ನನ್ನು ತೊರೆದರೊ?" ಎಂದು ಕೇಳುತ್ತಾನೆ ರಾವಣ. ಅನಲೆ "ದೊಡ್ಡಯ್ಯ, ಈ ಶಂಕೆ ಬೇಡ. ನಿನ್ನ ಒಡಹುಟ್ಟಿದವನು ನಿನ್ನನ್ನು ಬಿಡುತ್ತಾನೆಯೇ? ಇದೋ ಇಲ್ಲೇ ಕುಳಿತಿದ್ದಾನೆ, ನೋಡು" ಎಂದು ತಂದೆಯನ್ನು ತೋರಿಸುತ್ತಾಳೆ. ಆಗ ತನ್ನ ಮೃದು ಹೃದಯದ ದೌರ್ಬಲ್ಯ ವಿಭೀಷಣನಿಗೆ ಗೊತ್ತಾಗಿಬಿಟ್ಟಿತೇ ಎಂದು ರಾವಣ ರೋಷತಪ್ತನಾಗುತ್ತಾನೆ; "ಈ ಕುಲದ್ರೋಹಿಯನ್ನು ನನ್ನ ಬಳಿಗೆ ಬಿಟ್ಟವರು ಯಾರು?" ಎಂದು ಗರ್ಜಿಸುತ್ತಾನೆ. ವಿಭೀಷಣನಂಥ ಮಹಾಪುರುಷನನ್ನು ತಡೆಯುವುದು ಅನುಚಿತವೆಂದು ಅವಿಂಧ್ಯ ಹೇಳುತ್ತಾನೆ. ರಾವಣ ಸುಯ್ದು, ಅಳುತ್ತ ನಿಂತಿದ್ದ ಅನಲೆಯನ್ನು ಅಪ್ಪಿಕೊಂಡು ಮುಂದ್ದಾಡಿ, "ಅಳದಿರಳದಿರೌ, ಅಕ್ಕ! ಸಾವಪ್ಪೊಡಂ ನನಗೆ, ನಿನಗೆಸಗೆನಾಂ ನೋವಪ್ಪುದಂ!" ಎನ್ನುತ್ತಾನೆ: ವಿಭೀಷಣನತ್ತ ತಿರುಗಿ "ಅನಲೆ ನಿನ್ನ ಮಗಳಲ್ತು, ಎನ್ನವಳ್! ಇವಳೆನ್ನ ಕಾಪಿಡುವ ದೇವಿ!" ಎನ್ನುತ್ತಾನೆ. ವಿಭೀಷಣ "ಆ ಪುಣ್ಯಮೆನಗಕ್ಕೆ!" ಎಂದು ಹರ್ಷಿಸುತ್ತಾನೆ. ಅವನು ಲಂಕೆಯನ್ನು ಬಿಡುವಾಗ, ರಾವಣ ಅನಲೆಯನ್ನು ತನ್ನ ಬಳಿಯೆ ಉಳಿಸಿಕೊಳ್ಳುತ್ತಾನೆ.

ರಾವಣನ ಮನದ ಹೋಯ್ದಾಟ, ಭ್ರಾತೃಪ್ರೇಮ, ಪುತ್ರೀ ವಾತ್ಸಲ್ಯ, ಆತ್ಮೋದ್ಧಾರ ಕಾತರ, ಸಂಲಭದಲ್ಲಿ ಸೋಲಬಾರ ದೆಂಬ ಹಟ—ಇವೆಲ್ಲ ಈ ಪ್ರಸಂಗದಲ್ಲಿ ಸುವಿದಿತವಾಗಿವೆ. ಇದು ಸಂಕೀರ್ಣತಮ ಚಿತ್ರಣ.

ಯುದ್ಧದ ಎರಡನೆಯ ದಿನ ರಾವಣನ ಭೋಜನ ಪ್ರಸಂಗ ವೊಂದನ್ನು ಕಾಣುತ್ತೇವೆ. ಅವನು ರಣವಾರ್ತೆಯನ್ನು ತಿಳಿದು ಬರಲು ಚರರನ್ನಟ್ಟಿ, ಚಿಂತಾಮಗ್ನನೂ ಉದ್ವಿಗ್ನನೂ ಆಗಿ ಯಂತ್ರ ದಂತೆ ಭೋಜನವನ್ನು ಕೆಮ್ಮನೆ ಕಬಳಿಸುತ್ತಿರುತ್ತಾನೆ. ಆಗ ಮಂಡೋದರಿ ಯುದ್ಧವಾರ್ತೆಯನ್ನು ಕೇಳುವ ನೆಪದಿಂದ ಮಾತು ತೆಗೆಯುತ್ತಾಳೆ. ಪತ್ನಿಗೆ ಅದನ್ನು ಹೇಳುವಾಗ ರಾವಣನ ಹಣೆಯಲ್ಲಿ ಬೆವರ ಹನಿಗಳು ಮೂಡುತ್ತವೆ. ಅದನ್ನು ಕಂಡ ಮಂಡೋದರಿ ಕಣ್ಣೀರಿಡುತ್ತ, ಪತಿಯ ಹಣೆಯನ್ನು ಜ್ಜುತ್ತಾಳೆ. ಆಗ ರಾವಣ "ನನ್ನ ಹಣೆಯಿರಲಿ, ನಿನ್ನ ಕಣ್ಣೊರಸಿಕೊಳ್, ಲಂಕೇಶ್ವರಿ; ರಣಭೀತಿ ನಿನಗೇಕೆ?" ಎಂದು ಸಂತೈಸುತ್ತಾನೆ. ಇಬ್ಬರ ಮಾತೂ ಸೀತೆಯತ್ತ ಹೊರಳುತ್ತದೆ. ರಾವಣ ಕಳೆದಿರುಳು ತನಗಾದ ಕನಸೊಂದನ್ನು ವಿವರಿಸುತ್ತಾನೆ. ವೇದವತಿ ಚಿತೆ ಯೇರಿದ ದೃಶ್ಯವನ್ನೂ ಅವಳ ಭಸ್ಮದಿಂದ ತಪಸ್ವಿನಿ ಸೀತೆ ಉದ್ಭವಿಸಿದ್ದನ್ನೂ ಕಂಡುದಾಗಿ ಹೇಳುತ್ತಾನೆ. ಅದು ಬರಿಯ ಕನಸಲ್ಲವೆಂದೂ ಅವನ ಅಂತರಾತ್ಮನ ಎಚ್ಚರಿಕೆ ಮತ್ತು ಶುದ್ಧ ಸಂದೇಶವೆಂದೂ ಮಂಡೋದರಿ ಹೇಳುತ್ತಾಳೆ. ಬಳಿಕ ಸಾರಣ ಸಂತೋಷವಾರ್ತೆಯನ್ನು ತರುತ್ತಾನೆ. ರಾವಣ ಅವಸರದಲ್ಲಿ ಊಟ ಮುಗಿಸಿ, "ಇನ್ನೆನಗೆ ರಣದ ಮೋಹಮೆ ಮೋಹಮಾ ಜಾನಕಿಯ ಮೇಲೆ ಮುನ್ನಿರ್ದ ಮೋಹಮೆಲ್ಲ ತಿರುಗಿಹುದು ರಣದ ಮಧುರತರ ಸಾಹಸಕೆ!" ಎಂದು ನುಡಿದು ಕೊತ್ತಳದತ್ತ

ತೆರಳುತ್ತಾನೆ. ಅವನ ಊರ್ಧ್ವಗಮನದ ಮತ್ತೊಂದು ಘಟ್ಟ ವನ್ನಿದು ವ್ಯಂಜಿಸುತ್ತದೆ.

ಕುಂಭಕರ್ಣ ಮಡಿದಮೇಲೆ ಅನಲೆ ಸೀತೆಯ ಮುಂದೆ ಆಡುವ ಈ ಮಾತುಗಳು ರಾವಣನ ಶುಭೋದಯಕ್ಕೆ ಸಾಕ್ಷಿ: "ರಾವಣ ನಾತ್ಮ ತನ್ನ ಕಸುಗಾಯ ಒಗರನ್ನು ಕಳೆದು, ಹಣ್ಣಾನಕ್ಕೆ ತಿರುಗು ತ್ತಿರುವ ಸೂಚನೆಯೊಂದು ನನಗೆ ತೋರುತ್ತಿದೆ. ಆದರೂ ಅವನು ಮಹಾಸತ್ತ್ವ, ಅತ್ಯಭಿಮಾನಿ: ಈ ಕಾಳಗದ ಕೊಲೆಯನ್ನು ತಡೆಯಲು ತಾನೇ ಮುಂಬರಿಯುವವನಲ್ಲ; ಕ್ಷಾತ್ರತೇಜಕ್ಕೆ ಭಂಗ ತಂದುಕೊಳ್ಳುವವನಲ್ಲ...ಆ ಮಹಾತ್ಮನಿಗೆ ಇನ್ನು ಸುಗತಿ ದೂರ ವಿಲ್ಲ."

ರಾವಣನೇನೂ ಅಮಾನುಷ, ಅಪ್ರಾಕೃತ ವ್ಯಕ್ತಿಯಲ್ಲ. ಅವನೂ ನಮ್ಮಂತೆಯೆ ಸುಖಕ್ಕೆ ಹಿಗ್ಗುವ, ದುಃಖಕ್ಕೆ ತಗ್ಗುವ ಮರ್ತ್ಯಮಾನವ. ಅವನ ಬದುಕಿನಲ್ಲಿ ಒಂದರ ಮೇಲೊಂದರಂತೆ ಬಂದ ಆಘಾತಗಳು ಅವನಲ್ಲಿ ವೈರಾಗ್ಯವನ್ನು ಚೋದಿಸಿ, ಮುಂದಿನ ಅಭ್ಯುದಯಕ್ಕೆ ಅವನ ಅಂತರಂಗವನ್ನು ಹದಗೊಳಿಸುತ್ತವೆ. ಕುಂಭ ಕರ್ಣ, ಅತಿಕಾಯ, ಇಂದ್ರಜಿತು, ಧಾನ್ಯಮಾಲಿನಿ—ಇವರೆಲ್ಲರ ಮರಣ, ಬದುಕಿನ ಬಗ್ಗೆ ಅವನ ನಂಬಿಕೆಯನ್ನು ಅಲುಗಿಸಿಬಿಡು ತ್ತದೆ. ಆ ಆಘಾತ ಪರಂಪರೆಯಿಂದ ಅವನ ಚಿತ್ತ ತತ್ತರಿಸಿ, ಹಣ್ಣಾಗಿ, ಭೋಗವಿಮುಖವಾದುದರಲ್ಲಿ ಆಚ್ಚರಿಯಿಲ್ಲ.

ಇಂದ್ರಜಿತು ಮಡಿದ ಸುದ್ದಿ ಬಂದಾಗ ರಾವಣ ಕಂಬನಿ ಗರೆಯುತ್ತ, ಮಂಡೋದರಿಯನ್ನು ಸಂತವಿಡುತ್ತಾನೆ; "ರಾಣಿ, ಶೋಕವನ್ನು ತಡೆ, ಮನವನ್ನು ಕಲ್ಲುಮಾಡು....ನಮ್ಮ ಈ ಸಂಕಟಕ್ಕೆ ಕಾರಣಳಾದ ಆ ಸೀತೆಯನ್ನು ತುಂಡರಿಸಿಬಿಡುತ್ತೇನೆ."

ಆ ಮಾತನ್ನು ಕೇಳಿ ಮಂಡೋದರಿ ಬೆಬ್ಬಳಿಸುತ್ತಾಳೆ. ಆಗ ರಾವಣ "ನಿನ್ನ ವದನ ವೈರೂಪ್ಯವನ್ನು ನೋಡಲಾರೆ! ತಪ್ಪಾಯಿತು. ಅವಳನ್ನು ಕೊಲ್ಲುವುದಿಲ್ಲ. ಕ್ಷಮಿಸು!" ಎನ್ನುತ್ತಾನೆ. ಅಷ್ಟರಲ್ಲಿ ಧಾನ್ಯಮಾಲಿನಿ ಮೃತ್ಯುಮುಖದಲ್ಲಿದ್ದಾಳೆಂಬ ಸುದ್ದಿ ಬರುತ್ತದೆ. ರಾವಣ ಖಿನ್ನನಾಗಿ ಅವಳ ಅರಮನೆಗೈದುತ್ತಾನೆ. ಅವಳು ಮಲಗಿದ ಮಂಚದೆಡೆ ನಿಂತು ಆ ತ್ರಿಲೋಕ ವಿಜಯಿ ತನಗೆ ತಾನೆ ಗೊಣಗಿಕೊಳ್ಳುತ್ತಾನೆ: "ಬಾಳ್! ಕಳ್ಳನೂರೆದೊಂದು ಸುಳ್ಳಿನ ಸಂತೆ! ಬರಿ ಬೊಂತೆ! ಕಡೆಗೆ ಬೆಂಕಿಯು ಹೊರೆದು, ಬೂದಿ ರಾಸಿಯುನುಳಿವ ಅರ್ಥವಿಲ್ಲದ ಬಣಗು ಕಂಥೆ! ಇದಕೇಕಿನಿತುಂ ಚಿಂತೆ!" ಧಾನ್ಯಮಾಲಿನಿ ಸಾಯುತ್ತಾಳೆ. ಅನಿತರಲ್ಲಿ, ಇಂದ್ರಜಿತುವಿನ ಮಡದಿ ತಾರಾಕ್ಷಿ ಪತಿಯೊಡನೆ ಸಹಗಮನಕ್ಕೆ ನಿರ್ಧರಿಸಿದ ಸಮಾಚಾರ ಬರುತ್ತದೆ. ರಾವಣ ತೆಕ್ಕನೆ ಮೇಲೆದ್ದು ಇಂದ್ರಜಿತುವಿನ ಮನೆಗೆ ಧಾವಿಸುತ್ತಾನೆ. ಅಲ್ಲಿ ನೆಲಕ್ಕೆ ಕುಸಿದು, ಕಂಬನಿಗರೆಯುತ್ತ ಸೊಸೆಯನ್ನು ಸಾಂತ್ವನಗೊಳಿಸುತ್ತಾನೆ. ಮೊಮ್ಮಗನಾದ ವಜ್ರಾರಿ ಯನ್ನೆತ್ತಿಕೊಂಡು, ಮುದ್ದಿಸಿ, "ಮಗಳೆ, ನೋಡಿಲ್ಲಿ ಬದುಕಿ ಗರ್ಥಂ, ಮತ್ತೆ ಬಾಳ್ಗೆ ಗುರಿ ನಿನಗೆ..." ಎಂದು ಸೊಸೆಗೆ ಕೊಟ್ಟು ಹೊರಡುತ್ತಾನೆ.

ಪಶ್ಚಾತ್ತಾಪದಗ್ಧಳಾದ ಚಂದ್ರನಖಿ ಬಂದು, "ಸೀತೆಯನ್ನು ರಾಮನಿಗೊಪ್ಪಿಸುವುದಂ ನನ್ನ ಮನೋರಥ" ಎಂದಾಗ, ರಾವಣ "ಅದು ಹೆಂಬೇಡಿಗಳಿಗೆ ಮತ್ತು ಜೀವಗಳ್ಳರಿಗೆ ಸತ್ಪಥ!" ಎನ್ನು ತ್ತಾನೆ. "ಸೀತೆಯೊಳ್ ಇನ್ನುಮಿಂಪುರ್ಬದೆ ನಿನಗೆ ಅಂದಿನಾ ಕಾಮ ರುಚಿ?" ಎಂದು ಕೇಳುತ್ತಾಳೆ ಚಂದ್ರನಖಿ. ರಾವಣ "ದಿಟಂ ನನಗೆ ಸತ್ತುದಾ ಸೀತೆಯೊಳ್ ಕಾಮರುಚಿ" ಎಂದೂ ಬೇರೊಂದು ತೆರನಾದ ಮೋಹವೀಗ ಸೀತೆಯ ಮೇಲೆ ತನಗುಂಟಾಗಿರುವು

ದೆಂದೂ ತನ್ನ ಅಂತಸ್ಥವನ್ನು ವಿವರಿಸಿ, ದೃಶ್ಯವೊಂದನ್ನು ತಂಗಿಯ ಬಗೆಗಣ್ಣಿನ ಮುಂದೆ ನಿಲ್ಲಿಸುತ್ತಾನೆ:

ಮೂಲೋಕಮಿನ್ನೆಗಂ ಮತ್ತಮಿನ್ನಾದೊಡಂ
ಕಂಡರಿಯದಾ ಕಾಣಲಾರದಾ ಕೊಳುಗುಳದಿ
ರಘುಕುಲಲಲಾಮನಂ, ಜಗದೇಕವೀರನಂ,
ಗೆಲ್ದು, ಸೆರೆಯಾಳ್ ಮಾಡಿ ತಂದು, ಲಂಕೇಶ್ವರನ
ಸರ್ವಗರ್ವವನಿರದೆ ಸೋಲಿಸಿದ ಮೈಥಿಲಿಗೆ
ಕಪ್ಪಮೆನೆ ಕಾಣಿಕೆಯನೊಪ್ಪಿಸುವ ಭವ್ಯತಾ
ದಿವ್ಯದೃಶ್ಯಂ!

ಆಗ ಚಂದ್ರನಖಿ "ದಿಟಂ ನೀನ್ ಮಹಾಕವಿ ದಿಟಂ..." ಎಂದು ಹೊಗಳುತ್ತಾಳೆ. ಕಡೆಗೆ ರಾವಣ "ನೀಮೆ ಗೆಲ್ವಿರ್ ತುದಿಗೆ! ನಿಮ್ಮದೊಳಸಂಚು! ತನ್ನವರ್ ಗೆಲ್ಲುವೊಡೆ ತನಗೆ ಸೋಲ್ವುದೆ ಜಯಂ!" ಎಂದು ಅಂತರಂಗದ ಸೋಲೊಪ್ಪಿಕೊಳ್ಳುತ್ತಾನೆ. ಬಹಿ ರಂಗವಾಗಿ ಮಾತ್ರ ಅವನು ಯುದ್ಧಮಾಡಿ ರಾಮನನ್ನು ಗೆಲ್ಲಲೇ ಬೇಕಾಗಿದೆ. ಸದ್ಗತಿಯ ಕಡೆಯ ಹಂತವನ್ನು ರಾವಣ ಸಮೀಪಿ ಸುತ್ತಿರುವುದು ನಮಗಿಲ್ಲಿ ಗೊತ್ತಾಗುತ್ತದೆ.

ರಾವಣನ ಮೂಲಬಲ ಯುದ್ಧ ಸನ್ನದ್ಧವಾಗಿ ಹೊರಟಾಗ, ಆರುವ ಮುನ್ನ ಸೊಡರ ಕುಡಿ ಉಜ್ಜ್ವಲಿಸುವಂತೆ ಅವನಿಗೆ ಸೀತೆಯ ಮೆಯ್ಮೋಹ ತೆಕ್ಕನುಕ್ಕುತ್ತದೆ. "ಮತ್ತೊಮ್ಮೆ ಅವಳ ಹೃದಯದಾಳವನ್ನು, ಪತಿವ್ರತಾ ಸತ್ತ್ವವನ್ನು ಪರೀಕ್ಷಿಸುತ್ತೇನೆ!" ಎಂಬ ನೆವದಿಂದ ಅಶೋಕವನಕ್ಕೆ ಬರುತ್ತಾನೆ. ಆದರೆ ಸೀತಾ ಕುಟೀರದ ಬಳಿಗೆ ಬಂದೊಡನೆಯೆ ಶಮೆ ಅವನಾತ್ಮವನ್ನು ತುಂಬುತ್ತದೆ. ಬಹುಕಾಲದಿಂದ ತಾನು ಆಲಿಸದ ಹಕ್ಕಿಯಿಂಚರ ಕೇಳಿಸುತ್ತದೆ, ಕಡಲ ನೀಲಿ ಕಾಣಿಸುತ್ತದೆ! ಅಷ್ಟೇ ಅಲ್ಲ, ಪರ್ಣ ಶಾಲೆಗೆ ಬೆಂಕಿ ಹೊತ್ತಿಕೊಂಡಂತೆ ತೋರುತ್ತದೆ. ಆದರ ನಡುವೆ

ರಣಚಂಡಿ ಕುಣಿಯುತ್ತಿದ್ದಾಳೆ. ಅವಳು ಮುಡಿದ ಲಂಕಾವೀರರ ರುಂಡಗಳನ್ನು ಧರಿಸಿದ್ದಾಳೆ. ರಾವಣ ಕುಂಭಕರ್ಣನ ಶಿರವನ್ನು ಗುರುತಿಸುತ್ತಾನೆ; ಅದರ ಪಕ್ಕದಲ್ಲಿಯೇ ತನ್ನ ಹಂದಲೆಯನ್ನೂ ಕಾಣುತ್ತಾನೆ. ಹಮ್ಮೈಸಿ, ಕಣ್ಮುಚ್ಚಿ ನೊಂದು ಅರಮನೆಗೆ ಮರಳುತ್ತಾನೆ. ಅವನ ನಿರ್ಗಮನವನ್ನರಿತ ಸೀತೆ "ಬಾರನಿನ್ ಬಳಿಗವನ್ ಈ ಜನ್ಮದೊಳ್! ಕಡಿದುದಾತನ ಸೂತ್ರಮಾಯೆ!" ಎನ್ನುತ್ತಾಳೆ. ಇಲ್ಲಿಗೆ ರಾವಣನ ಕಾಮಾಗ್ನಿ ಪೂರ್ಣವಾಗಿ ನಂದಿದಂತಾಯಿತು.

ರಾಮ–ರಾವಣ ಸಮರದ ಹಿಂದಿನ ರಾತ್ರಿ ರಾವಣನಿಗಾದ ಒಂದು ಸ್ವಪ್ನ, ಅವನ ಮಾನಸಪರಿವರ್ತನೆಗೊಡ್ಡಿದ ಮಹಾ ಪ್ರತಿಮೆಯಾಗಿದೆ. (ಅದು ಸ್ವಪ್ನವೆನ್ನುವುದಕ್ಕಿಂತ ಸಮಾಧಿಸ್ಥಿತಿ ಯಲ್ಲಿ ಕಂಡ ದರ್ಶನವೆನ್ನುವುದು ಯುಕ್ತ). ಸೀತೆಯ ಬಗ್ಗೆ ರಾವಣನಿಗಿದ್ದ ಕಾಮಭಾವನೆ ಉದಾತ್ತೀಕರಣಗೊಂಡು ಪವಿತ್ರ ಪರಿಶುದ್ಧ ಪ್ರೇಮವಾಗಿ ಮಾರ್ಪಟ್ಟುದನ್ನು ಇಲ್ಲಿ ಕಾಣುತ್ತೇವೆ. ಸೀತೆಯನ್ನು ಅವನು ಮಾತೆಯನ್ನಾಗಿ ಸ್ವೀಕರಿಸುತ್ತಾನೆ. ಈ ತಾಯಿ–ಮಕ್ಕಳ ಸಂಬಂಧ ಈ ಜನ್ಮದಲ್ಲಿ ಕೇವಲ ಮಾನಸಿಕವಾಗಿ ಸಾಧ್ಯವಾಗುತ್ತದೆ; ದೈಹಿಕವಾಗಿ ಅದು ಪೂರ್ಣವಾಗತಕ್ಕದ್ದು ಮುಂದಿನ ಜನ್ಮದಲ್ಲಿ. ಇದು ಆ ಸ್ವಪ್ನದ ಅಂತರಾರ್ಥ.

ಆ ಇರುಳು ರಾವಣ ಸಂಕಲ್ಪಸಿದ್ಧಿಗಾಗಿ ದುರ್ಗೆಯನ್ನು ಆರಾಧಿಸುತ್ತಿರುತ್ತಾನೆ. ಜಗಜ್ಜನನಿ ಅವನ ನಿಷ್ಠೆಗೆ ಮೆಚ್ಚಿ, ಮೈದೋರಬೇಕೆನ್ನುವಷ್ಟರಲ್ಲಿ ದೇವಗಣ ಅವಳನ್ನು ತಡೆಯುತ್ತದೆ. ತಾಯಿ ವಿಳಂಬಿಸುತ್ತಿರುವುದನ್ನು ಕಂಡು ಮುಳಿದ ರಾವಣ ತನ್ನ ತಲೆಗಳನ್ನೇ ಕತ್ತರಿಸಿ ಅರ್ಪಿಸಲು ಖಡ್ಗವನ್ನು ತುಡುಕುತ್ತಾನೆ. ಕೂಡಲೆ ಶಿಲಾಶರೀರ ಕಂಪಿಸುತ್ತದೆ; ಮಿಂಚಿನ ಸಾಗರ ಅವನ

ಮೇಲೆ ಹರಿದಂತಾಗಿ, ಅವನು ವೈಮರೆತು ಸ್ವಾಪ್ನಿಕ ಮನೋಮಯಕ್ಕೆ ಸಾಗುತ್ತಾನೆ. ಅಲ್ಲಿ ಶಿವೆ ಪ್ರತ್ಯಕ್ಷಳಾಗಿ "ಬೇಡಿದುದನಾಂ ನೀಡುವೆನ್, ನೀಡದುದುಮುಂಟೆ ಭಕ್ತಂಗೆ?" ಎನ್ನುತ್ತಾಳೆ. ಮುಂದಿನ ಸಂಭಾಷಣೆ ಹೀಗಿದೆ:

"ದಶರಥಸುತಂ
ರಣದಿ ಸೋಲ್ವಂತೆನಗೆ ಮಾಡು ಕೃಪೆಯನ್ !"
"ತಥಾಸ್ತು!"
"ಸೀತೆ ವಶವಪ್ಪಂತೆ !"
"ತಥಾಸ್ತು !"
"ನೀಂ ತಾಯ್ ದಿಟಂ !
ನೀಂ ಕೃಪಾಬ್ಧಿಯೆ ದಿಟಂ ! ರಾಮುಜಯಕಿಂ ಮಿಗಿಲ್
ಸೀತೆ ಸೋಲ್ವುದೆ ಸೋಜಿಗಂ !"
"ಸೋಜಿಗಮದೇಕೆ?
ಒಲಿದ ಕಂದಗೆ ತಾಯಿ ಸೋಲ್ವುದೇನಚ್ಚರಿಯೆ ?
ಸಹಜಂ !"
"ಆದೇನ್ ಮತ್ತೆ ವಕ್ರೋಕ್ತಿ!"
"ವಕ್ರಮೇನ್ !
ನಿನ್ನೆರ್ದೆಯ ಗೂಢವೃತ್ತಿಗೆ ನನ್ನದುಕ್ತಿಯಯ್ !"
"ಸೀತೆ ಸೋಲ್ವಳೆ ? ರಾಮನಂ ಗೆಲ್ವನಿದು ದಿಟಮೆ ?"
"ಸೀತೆಯಾಲಿಂಗಿಪಳ್, ಚುಂಬಿಸೆರ್ದೆಗೊತ್ತುವಳ್;
ರಣದಿ ರಾಮನ ಸೋಲಿಪಯ್, ಪುನರ್ಜನ್ಮದೊಳ್!
ಕಾಣ್ ತೋರ್ಪುದಂ."

ಆ ದೃಶ್ಯ ಕಣ್ಮರೆಯಾಗುತ್ತದೆ. ರಾವಣನಿಗೊಂದು ದೇವಾಲಯ ಕಾಣಿಸುತ್ತದೆ. ಅದರ ಪೀಠದ ಮೇಲೆ ಬೃಹದಶ್ವವೊಂದಂ ಮುಂಗಾಲ್ಗಳನ್ನೆತ್ತಿಕೊಂಡು ಕೆನೆಯುತ್ತ ನಿಂತಿರುತ್ತದೆ. ಅಷ್ಟರಲ್ಲಿ ಆಗಸದಿಂದ ಖಡ್ಗ ಹಿಡಿದ ಬೃಹನ್ಮೂರ್ತಿಯೊಂದು ಇಳಿದು ಆ ಕುದುರೆಯ ಕೊರಳನ್ನು ಕತ್ತರಿಸುತ್ತದೆ. ನೆತ್ತರು ಹೊಳೆಯಾಗಿ

ಹರಿಯುತ್ತದೆ. ರಾವಣ ಓಡಿಹೋಗಿ ದೋಣಿಯೊಂದನ್ನೇರು ತ್ತಾನೆ. ಕುದುರೆಯ ಮುಂಡ ಕುಣಿಯುತ್ತ ಚಿಮ್ಮಿಬಂದು ಆ ನೆತ್ತರ ನದಿಗೆ ಧುಮುಕುತ್ತದೆ. ಆ ರಭಸಕ್ಕೆ ರಾವಣನ ದೋಣಿ ಮಗುಚಿಕೊಳ್ಳುತ್ತದೆ. ಅವನು ಆ ರಕ್ತದ ನದಿಯಲ್ಲಿ ಮುಳುಗ ತೊಡಗುತ್ತಾನೆ. ಅಷ್ಟರಲ್ಲಿ ಕುಂಭಕರ್ಣನನ್ನು ಕಂಡು, ಕೂಗು ತ್ತಾನೆ. ಇಬ್ಬರು ಸೋದರರೂ ಬದುಕುವಾಸೆಯಿಂದ ಹೆಣಗುತ್ತ ದಡಕ್ಕಡರುತ್ತಾರೆ. ಆದರೆ ಇಬ್ಬರೂ ಶಿಶುಗಳಾಗಿದ್ದಾರೆ. ಸುತ್ತಲೂ ತಪೋವನ ಕಾಣಿಸುತ್ತದೆ. ಮನಸ್ಸಿಗೆ ಹಿಂದಿನದೆಲ್ಲ ಮರೆತು ಹೋಗುತ್ತದೆ. ರಾವಣ, ಕುಂಭಕರ್ಣರಿಬ್ಬರೂ ಆಗ ತಾನೆ ಹುಟ್ಟಿದ ಹಸುಳೆಗಳಂತೆ ಅಳತೊಡಗುತ್ತಾರೆ! ಆಗ ಸೀತೆ ಅಲ್ಲಿಗೆ ಬಂದು, ಆ ಅವಳಿಮಕ್ಕಳನ್ನೆತ್ತಿ ಮುದ್ದಾಡುತ್ತಾಳೆ; ಹಾಡಿ ಮೊಲೆಯೂಡಿಸುತ್ತಾಳೆ; ತೊಡೆಯೇರಿಸಿಕೊಂಡು ಲಲ್ಲಯಿಸು ತ್ತಾಳೆ.

ತಾನು ಮಗುವಾದ ಆ ಅದ್ಭುತಕ್ಕೆ ಬೆಬ್ಬಳಿಸುತ್ತ ರಾವಣ ಎಚ್ಚರಗೊಳ್ಳುತ್ತಾನೆ; ಮಂಡೋದರಿಯನ್ನು ಕೂಗಿ ಕರೆದು, ಕಂಡ ವಿಸ್ಮಯವನ್ನು ಹೇಳುತ್ತಾನೆ. ಅವಳು "ಕನಸಾಯಿತೆ?" ಎಂದು ಕೇಳುತ್ತಾಳೆ. ರಾವಣ "ಅದು ಕನಸಿನ ರೀತಿಯಲ್ಲ; ಅನುಭವ ವಿಶೇಷ" ಎನ್ನುತ್ತಾನೆ. "ಸೀತೆಯ ಬಗ್ಗೆ ನಿನಗೀಗ ಉಂಟಾಗಿರುವ ಸಾತ್ತ್ವಿಕದ ಭಾವಶುದ್ಧಿಯೆ ಸ್ವಪ್ನದಲ್ಲಿ ಪ್ರತಿಮೆಯನ್ನು ಪಡೆ ಯಿತು" ಎನ್ನುತ್ತಾಳೆ ಮಂಡೋದರಿ.

ಮುಂದಿನ ಭವದಲ್ಲಿ ರಾವಣ ಕುಂಭಕರ್ಣರು ಸೀತೆಗೆ ಲವಕುಶ ರಾಗಿ ಹುಟ್ಟಿ ರಾಮನನ್ನು ಜಯಿಸುವರೆಂಬ ದರ್ಶನವನ್ನು ಕವಿ ಇಲ್ಲಿ ಪ್ರಕಟಿಸಿದ್ದಾರೆ. ರಾವಣನ ಬಯಕೆ, ದೇವಿಯ ವರ ಈಡೇರುತ್ತವೆ—ಆದರೆ ರಾವಣ ನಿರೀಕ್ಷಿಸುವ ರೀತಿಯಲ್ಲಲ್ಲ;

ಸೀತೆ ಅವನಿಗೆ ವಶವಾಗುತ್ತಾಳೆ—ಹೆಂಡತಿಯಾಗಿ ಅಲ್ಲ, ತಾಯಾಗಿ. ರಾಮನನ್ನು ಅವನು ಗೆಲ್ಲುತ್ತಾನೆ—ಈಗಲ್ಲ, ಪುನರ್ಜನ್ಮದಲ್ಲಿ. ಇದಕ್ಕೆಲ್ಲ ಮುಂಬೆಳಗಿನಂತೆ ರಾವಣನಲ್ಲಿ ಸೀತೆಯ ಬಗ್ಗೆ ಮಾತೃಭಾವ ಜಾಗ್ರತವಾಗಿದೆ. ಅದೇ ಅವನ ಸ್ವಪ್ನಕ್ಕೆ ಪ್ರೇರಣೆ. ಮೊದಲು ಅಸ್ಪಷ್ಟವಾಗಿದ್ದ ಆ ಭಾವ ಸ್ವಪ್ನದರ್ಶನದ ಬಳಿಕ ಸ್ಫುಟವಾಗಿ ನೆಲೆಗೊಳ್ಳುತ್ತದೆ.

ಅನಂತರ, ಸೀತೆ ತನಗೆ ಮಾತೆ ಮತ್ತು ದೇವತೆ ಎಂದು ಮುಕ್ತ ಕಂಠದಿಂದ ಸಾರುತ್ತಾನೆ ರಾವಣ. ಅವಳು ತನ್ನನ್ನು ಗೆದ್ದುದರಿಂದ, ರಾಮನನ್ನು ಗೆದ್ದು ತಂದು ಅವಳಿಗೆ ಕಪ್ಪವೊಪ್ಪಿಸುವುದಾಗಿ ಹೇಳುತ್ತಾನೆ; ತನ್ನ ಗುರಿ ಗೆಲ್ಲುವುದೆ ಹೊರತು ಕೊಲ್ಲುವುದಲ್ಲ ವೆಂದು ವಿಶದಪಡಿಸುತ್ತಾನೆ. ತನ ಚಿತ್ತ ಪರಿವರ್ತನೆಯನ್ನು ಯಾರಿಗೂ ಅರುಹಬಾರದೆಂದು ಮಂಡೋದರಿಗೆ ಸೂಚಿಸುತ್ತಾನೆ. ಆ ಇರುಳು ಕಳೆದ ಮೇಲೆ ಮೂಡಿದ ಹೊತ್ತಾರೆ ಅವನಿಗೆ ಎಂದಿಲ್ಲದ ಸೊಬಗಿನಿಂದ ಕಾಣಿಸಿಕೊಳ್ಳುತ್ತದೆ. ಅವನೀಗ ಹೊಸ ರಾವಣ.

ಅಂದು ರಾಮ, ರಾವಣರಿಗೆ ನಡೆದ ಘೋರ ಯುದ್ಧದಲ್ಲಿ ರಾವಣ ಮಹಾಶೂಲವನ್ನು ರಾಮನ ಮೇಲೆ ಬಿಡುವಾಗ, ಹೀಗೆ ಪ್ರಾರ್ಥಿಸುತ್ತಾನೆ: "ಆಯುಧವರೇಣ್ಯ! ನಿನ್ನ ವ್ರತವನ್ನು ನಾನು ಬಲ್ಲೆ. ನಿನ್ನನ್ನು ತೊಟ್ಟಮೇಲೆ ವೈರಿಯ ಅಸು ನಿನಗೆ ನೈವೇದ್ಯವೇ ಸರಿ. ಆದರೆ ಆ ವ್ರತದ ಭಂಗವನ್ನು ನನಗಾಗಿ ನೀನು ಸಹಿಸ ಬೇಕು. ಶತ್ರು ಜೀವವನ್ನು ಬಲಿಗೊಳ್ಳದೆ, ಅವನನ್ನು ಸೆರೆ ಹಿಡಿಯಲು ನನಗೆ ನೆರವಾಗು. ಅವನು ಮೈಮರೆಯುವಂತಷ್ಟೆ ತಾಗು!"

ಆ ಮಹಾಶೂಲಕ್ಕೆ ಪ್ರತಿಯಾಗಿ ರಾಮ ಬ್ರಹ್ಮಾಸ್ತ್ರವನ್ನು

ತೊಡುತ್ತಾನೆ. ಅದು ರಾವಣನ ಶೂಲವನ್ನು ತುಂಡರಿಸುತ್ತದೆ. ಆದರೆ ಶೂಲದ ಚೂರೊಂದು ರಾಮನೆದೆಗೆ ತಾಗಿ, ಅವನು ಮೈಮರೆಯುತ್ತಾನೆ. ರಾಮನನ್ನು ಹಿಡಿಯಲು ದೈತ್ಯ ಮುನ್ನುಗ್ಗು ವಷ್ಟರಲ್ಲಿ ಬ್ರಹ್ಮಾಸ್ತ್ರ ಅವನತ್ತ ಹಾಯುತ್ತದೆ. ಅದನ್ನು ರಾವಣ ತುಡುಕುತ್ತಾನೆ. ಆದರೆ ಅದು ಅವನೆದೆಯನ್ನು ಭೇದಿಸುತ್ತದೆ. ಪ್ರಾಣರೂಪವಾದ ಆ ಬಾಣವನ್ನೆ ಕೈಯಲ್ಲಿ ಹಿಡಿದು, "ಸೆರೆಸಿಕ್ಕಿ ದನೊ ವೈರಿ!" ಎಂದು ಉಬ್ಬುತ್ತ ರಾವಣ ಲಂಕೆಗೆ ಮರಳಿ ಮೂರ್ಛಿತನಾಗುತ್ತಾನೆ. ಬಳಿಕ ಎಚ್ಚತ್ತು ಶಾಂತಿ ಸುಮ್ಮಾನ ಗಳಿಂದ "ಸಿಂಗರಿಸವೇಳೆಮ್ಮ ಪುರವನಿತೆಯಂ ರಾಜ್ಞಿ! ನೋಡಿಲ್ಲಿ ಭದ್ರಮುಷ್ಟಿಯೊಳೆಂತು ಪಿಡಿದಿಹೆನ್ ಭುವನೈಕವೀರನಂ! ಕೊಳ್ಳಿದಂ ಕಪ್ಪಮಂ ಕಾಣ್ಕೆಗೊಡು ಮಾತೆ ಸೀತೆಗೆ!" ಎನ್ನುತ್ತಾನೆ. ಮಂಡೋದರಿ ರೋದಿಸುತ್ತ, ಅವನದು ಕೇವಲ ಭ್ರಾಂತಿಯೆನ್ನು ತ್ತಾಳೆ. ರಾವಣ ಹುಬ್ಬು ಗಂಟಿಕ್ಕಿ ನುಡಿಯುತ್ತಾನೆ:

> ಭ್ರಾಂತಿಯಾರ್ಗೆಲಗೆ ? ನಿನಗೆಯೊ ನನಗೊ ? ರಾಮನಂ
> ಪ್ರಾಣರೂಪದಿನಿಲ್ಲಿ ಪಡೆದಿಹೆನ್ ಪೂರ್ಣಮಂ !
> ನೀಂ ಪತಿವ್ರತೆಯಪ್ಪೊಡೆನ್ನೆಂದುದಂ ಮಾಡು !
> ನನ್ನ ವಕ್ಷದಿನೆಳೆದು ತೆಗೆಯಿದಂ. ಸೀತೆ ಮೇಣ್
> ನೀನಲ್ಲದನ್ಯರಿಂದಾಗದೀ ರಾಮನ ಮಹಾನ್
> ಶರಶರೀರಮಂ ಸ್ಪರ್ಶಿಸಲ್ಕೆ !

ಪತಿಯಾಣತಿಯಂತೆ ಮಂಡೋದರಿ ಹಮ್ಮೈಸಿ ನಡುಗುತ್ತ ಆ ಮಹಾಸ್ತ್ರವನ್ನು ರಾವಣವಕ್ಷದಿಂದ ಕೀಳುತ್ತಾಳೆ. ಆ ಬ್ರಹ್ಮಬಾಣ ರಾವಣ ಪ್ರಾಣವನ್ನು ಹೀರಿ, ರಾಮನಾತ್ಮದಲ್ಲಿ ಮೋಕ್ಷ ಪಡೆಯು ತ್ತದೆ. ಅತ್ತ ರಾಮ ಎಚ್ಚರುತ್ತಾನೆ.

ರಾವಣ ರಾಮನಲ್ಲಿ ಐಕ್ಯವಾಗುವುದನ್ನಿಲ್ಲಿ ಕಾಣುತ್ತೇವೆ. ರಾವಣ ನಲ್ಲಿ ರಾಮಶಕ್ತಿ ಸುಪ್ತವಾಗಿತ್ತು. "ನಾನೆ ಅವನಲ್ಲದಿದ್ದರೆ, ಆ

ದಶಗ್ರೀವನಿಗೆ ಸೀತೆಯನ್ನೊಲಿಯುವುದೂ ಒಯ್ಯುವುದೂ ಸಾಧ್ಯವಾಗುತ್ತಿತ್ತೆ?" ಎಂದು ರಾಮನೆ ನುಡಿಯುವುದು ಗಮನಾರ್ಹ. ಆ ರಾಮಶಕ್ತಿಯನ್ನು ಪ್ರಬುದ್ಧಗೊಳಿಸಿ, ರಾವಣತ್ವದಲ್ಲಿ ರಾಮತತ್ತ್ವವನ್ನು ಪ್ರತಿಷ್ಠಾಪಿಸಲು ಎಲ್ಲರ ಸಾಧನೆ ಬೇಕಾಯಿತು. ರಾವಣನೇ ಸ್ವತಃ ಒಬ್ಬ ಸಾಧಕ. ಆದರಿಂದ ಅವನು ಕಾಲಾಂತರದಲ್ಲಿ ಸಿದ್ಧನಾದ. ಕಡೆಯಲ್ಲಿ ರಾವಣನಿಗಾದ ಮರಣ ಮರಣವಲ್ಲ; ಅದು ಅಮೃತತತ್ವದ ಒಂದು ಭಂಗಿ.

ಎಲ್ಲರ ಹೃದಯದಲ್ಲೂ ಭಗವಂತನಿದ್ದಾನೆ ಎಂಬ ತತ್ತ್ವ ಹಳೆಯದೇ. ಆದನ್ನು ಹೀಗೆ ಕಾವ್ಯಮಯವಾಗಿ, ದರ್ಶನಪೂರ್ವಕವಾಗಿ ಪ್ರತಿಪಾದಿಸಿದ್ದು ಕುವೆಂಪು ಪ್ರತಿಭೆಯ ಅನನ್ಯತೆ. ಒಂದರ್ಥದಲ್ಲಿ ಕುವೆಂಪು ರಾಮಾಯಣ 'ರಾವಣಾಯಣ'ವೆ ಆಗಿದೆ.

ರಾಮ, ಸೀತೆ

'ಶ್ರೀ ರಾಮಾಯಣ ದರ್ಶನ'ದ ರಾಮ ಅಪ್ರಾಕೃತನೂ ಹೌದು, ಮಾನವನೂ ಹೌದು. ಅವನ ಮಾನವೀಯತೆಗೆ ಭಂಗ ಬರದಂತೆ ಅವನ ಅಪ್ರಾಕೃತ ವ್ಯಕ್ತಿತ್ವವನ್ನು ಎತ್ತಿಹಿಡಿದಿದ್ದಾರೆ ಕವಿ. ರಾಮಪಾತ್ರದಲ್ಲೂ ಸೂಕ್ಷ್ಮವಾದ ವಿಕಾಸವನ್ನು ಗುರುತಿಸಬಹುದು. ಅವನನ್ನು ಅವತಾರಗಳಲ್ಲೊಂದೆಂದು ನಂಬಲಾಗಿದೆಯಷ್ಟೆ. ಆದರೆ ಕುವೆಂಪು ಅವರ ಅವತಾರಕಲ್ಪನೆಯೇ ಬೇರೆ: ಜನಮನದ ಶಕ್ತಿ ಮತ್ತು ಅಭೀಪ್ಸೆಯನ್ನೇ ಅವರು ಅವತಾರವೆನ್ನುತ್ತಾರೆ:

ಬಹುಜನರ ಪೆರ್ಬಯಕೆ
ಕಲ್ಪವೃಕ್ಷದ ಕೊಂಬೆಯನೆ ಕಚ್ಚಿ ಸೆಳೆದಿಳೆಗೆ
ಫಲದಮೃತಮಂ ಮಳೆಗರೆಯದಿಹುದೆ ? ಜನಮನಮೆ
ಯುಗಶಕ್ತಿಯಲ್ತೆ? ತಾನಾ ಶಕ್ತಿ ಮೂರ್ತಿಗೊಳೆ
ನಾಮದನ್ನವತಾರಮೆಂದು ಪೂಜಿಪೆವಲ್ತೆ, ಪೇಳ್,
ವ್ಯಷ್ಟಿರೂಪದಿನಿಳಿವ ಸೃಷ್ಟಿಯ ಸಮಷ್ಟಿಯುಂ ?

ರಾಮನ ಅಸಾಮಾನ್ಯತೆ ಅವನ ಎಳವೆಯಲ್ಲೆ ಗೊತ್ತಾಗುತ್ತದೆ :

ಮಗನ ಕಂಗಳ ನೋಡಿ
ಬಾನನೀಕ್ಷಿಸಿದಂತೆ, ಮಗನ ತೊದಲಂ ಕೇಳಿ
ಕಡಲನಾಲಿಸಿದಂತೆ ಬೆಚ್ಚುವಳು ತಾಯ್ ಸುಯ್ದು.
ಒರ್ಮೆ ಆ ಹೂಹಗುರ ಶಿಶುವಿದ್ದಕಿದ್ದಂತೆ
ಗಿರಿಭಾರಮಾಗಿ ಬರೆ, ನೆಗಪಲಾರದೆ ತಾಯಿ
ತೇಂಕಿದಳು...
ಮತ್ತೊರ್ಮೆ ಪಚ್ಚೆದೊಟ್ಟಿಲ್ ಬಿಂಬದಲಿ ತನ್ನ
ಮುದ್ದುಕಂದಗೆ ಬದಲ್ ಕಾಣಿಸೆ ಮಹಾಮೂರ್ತಿ....

ಆಗಸದ ಚಂದ್ರ ತನಗೆ ಬೇಕೆಂದು ಹಟ ಹಿಡಿದು ರೋದಿಸುವ ಶಿಶು ರಾಮ ತನ್ನ ಅಮರ್ತ್ಯಪ್ರಜ್ಞೆಯನ್ನು ಮರೆಯುತ್ತಾನೆ.

ತನ್ನನ್ನು ಚಿಕ್ಕಂದಿನಿಂದಲೂ ನಿತ್ಯ ಕರೆಯುತ್ತಿದ್ದ ಕನಸೊಂದನ್ನು ಮುಂದೆ ಅರುಹುತ್ತಾನೆ ರಾಮ :

ಗೋಚರಿಸುತಿವೆ ಕಡಲ್ ಕಾಡುಗಳ್. ತರತರದ
ಪ್ರಾಣಿಗಳ್, ಪರ್ವತಶ್ರೇಣಿಗಳ್. ದಿನದಿನಂ
ಗಿರಿಸದೃಶ ಭವ್ಯನೊರ್ವಂ ಮಹಾವಾನರಂ
ಬೆಳಿಬೆಳೆಯುತಾಕಾಶ ಚುಂಬಿ ಶೈಲಾಗ್ರದೊಳ್
ವಿಸ್ತೃತವ್ಯೋಮ ಪಟಕೆದುರಾಗಿ ನಿಂದೆನಗೆ
ಕೈವೀಸಿ ಕರೆಯುತಿರ್ಪನ್ ದಕ್ಷಿಣಾಪಥಕೆ.

ಈ ಕನಸು ಮುಂದೆ ದಿಟವಾಗುತ್ತದೆ.

ರಾಮನನ್ನು ವನವಾಸದಿಂದ ಮರಳಿಸಲು ಹೋದ ಭರತನಿಗೆ ವಸಿಷ್ಠ ಹೇಳುವ ಮಾತುಗಳು ರಾಮನ ಜೀವಿತೋದ್ದೇಶದ ಮೇಲೆ ಬೆಳಕು ಬೀರುತ್ತವೆ :

ವಿಶ್ವವ್ಯಕ್ತಿಸ್ಫೂರ್ತನೀತನುಂ
ತಿಳಿಯೆ ವಿಶ್ವವ್ಯಕ್ತಿ. ಶುಕ್ತಿಕೆ ಸಮುದ್ರಮುಂ

ಒಳಕೊಳ್ವುದೇನ್ ? ಕೋಸಲಾಕಾಶ ವಿಸ್ತಾರಮೀ
ರಾಮನಾತ್ಮದ ವಿರಾಟ್ ಪಕ್ಷವಿಸ್ಫಾಲನೆಗೆ
ಸಾಲದಲ್ಪಂ. ಅನಂತಾಕಾಶಯಾತ್ರಿ, ಕೇಳ್,
ರಾಮನಿಚ್ಛಾ ವೈನತೇಯಂ. ಅನಂತಮಂ
ಸಾಂತದಲ್ಪಕ್ಕೆಳೆವ ಸಾಹಸಂ ಸಾಲ್ಗುಮಿನ್. ಕೇಳ್,
ಶೋಕಮಂ ಬಿಟ್ಟೆನ್ನ ಪೇಳ್ವುದಂ ಗೆಯ್—ಮುಂದೆ
ತಾನಪ್ಪುದೊಳ್ಪು, ಕೇಳ್, ಲೋಕಕೆ, ನಿನಗೆ, ಕೋಸಲಕೆ.

ರಾವಣ ವಧೆಯನಂತರ, ಮಡಿದ ತಮ್ಮವರ ಅಂತ್ಯಕ್ರಿಯೆಗಳಲ್ಲಿ ತೊಡಗಿದ್ದವರಿಗೆ ರಾಮ ಬೇರೆಬೇರೆಯಾಗಿ ಕಾಣಿಸಿಕೊಳ್ಳುತ್ತಾನೆ; ಅವನನ್ನು ಅಲ್ಲಿ ಕಂಡೆವು, ಇಲ್ಲಿ ಕಂಡೆವು ಎಂದವರು ಹೇಳುತ್ತಾರೆ; ತನ್ಮೂಲಕ ಅವನ ಸರ್ವಾಂತರ್ಯಾಮಿತ್ವಕ್ಕೆ ಸಾಕ್ಷಿಗಳಾಗುತ್ತಾರೆ; "ರಾಮನಖಿಲವ್ಯಾಪಿ ರಾಮಮಯಮೀ ವಿಶ್ವಮೆಂಬ ತತ್ತ್ವ" ವನ್ನು ಸಾರುತ್ತಾರೆ. ಅದೇ ಸಂದರ್ಭದಲ್ಲಿ ವಹ್ನಿಗೆ ರಾಮ ಹೇಳುವ ಮಾತು ಗಮನಾರ್ಹ :

ನಿನ್ನಂತೆ ನಾನ್ ಕಣಾ.
ನನಗದೇಂ ಕೋಡೊಳವೆ ? ನಾನುಂ ಮನುಷ್ಯನೆಯೆ.
ಉಸಿರೆಳೆವೆನುಣುವೆನಾಶಿಸುವೆನೊಲಿವೆನ್ ಮುನಿವೆನ್
ಮೋಹಿಪೆನ್ ನಿನ್ನವೊಲೆ !

ಸೀತೆಯೊಡನೆ ರಾಮನೂ ಅಗ್ನಿಪ್ರವೇಶ ಮಾಡುವುದು 'ಶ್ರೀ ರಾಮಾಯಣ ದರ್ಶನ'ದ ವಿಶಿಷ್ಟ ಪ್ರಸಂಗಗಳಲ್ಲೊಂದು. ಗಂಡು ಹೆಣ್ಣನ್ನು ಶಂಕಿಸುವಂತೆ ಹೆಣ್ಣೂ ಗಂಡನ್ನು ಶಂಕಿಸಬಹುದು; ಹೆಣ್ಣು ಶುಚಿಯಾಗಿರಬೇಕೆಂದು ಗಂಡು ನಿರೀಕ್ಷಿಸುವಂತೆ, ಗಂಡು ಶುಚಿಯಾಗಿರಬೇಕೆಂದು ಹೆಣ್ಣೂ ನಿರೀಕ್ಷಿಸಬಹುದು. ಇದು ಈ ಯುಗದ ಬೆಳವಣಿಗೆ. ರಾಮ ಇದಕ್ಕನುಸಾರವಾಗಿ ನಡೆದುಕೊಳ್ಳುತ್ತಾನೆ. ಅವನೂ ಅಗ್ನಿಯನ್ನು ಹೊಕ್ಕು ಹೊರಬಂದಮೇಲೆ,

ಆನಲೆಯಾಡುವ ಮಾತು ಆಧುನಿಕ ಮನಸ್ಸನ್ನು ಹೊರಗೆಡಹು ವಂಥದು :

‘ ಹದಿಬದೆಯುನಗ್ನಿ ವುಗಿಸುವುದಿರಲಿ,
ತನ್ನಂ ಪರೀಕ್ಷಿಸುವರಾರೊ ? ತಾನೇಂ ಪೊರತೊ
ದುರಿತ ದೋಷಕೆ ?’ ಎನುತೆ ಶಂಕಿಸಿದೆನಾ ನಿಂದೆ
ಭಸ್ಮವಾಯಿತು ತಂದೆ, ನೀನೊಡ್ಡಿದೀ ಚಿತೆಯು
ಲೋಕ ಪಾವಕ ಪವನಸಖನಿಂದೆ; ಪೂಜ್ಯೆಯುಂ
ಪಾಲಿಸುವ ನೆವದಿ ನೀನುಂ ಪರೀಕ್ಷಿತನಲಾ !

ರಾಮ ‘ಗಿರಿವನ ಪ್ರಿಯಂ’. ಆವನ ಹಿರಿಮೆಗೆ ಕವಿ ಕೊಡುವ ಕಾರಣವಿದು :

ಕೊಂದ ಕತದಿಂದೇಂ
ಪೆರ್ಮನಾದನೆ ರಾಮನಾ ಮಾತನುಳಿ : ಪಗೆಯೆ ?
ತೆಗೆ ತೆಗೆ ! ಪೆರ್ಮಗೊಲ್ಮೆಯೆ ಚಿಹ್ನೆ. ಮಹತ್ತಿಗೇಂ
ಬೆಲೆಯೆ ಪೇಳ್ ಕೊಲೆ ? ದೈತ್ಯನಂ ಗೆಲಿದ ಕಾರಣಕಲ್ತು,
ತನ್ನ ದಯಿತೆಯನೊಲಿದ ಕಾರಣಕೆ ಗುರು ಕಣಾ
ರಾಮಚಂದ್ರಂ.

ಒಂದು ದಿನ ಗಂಗೆಯಲ್ಲಿ ವಿಹರಿಸುವಾಗ ದೃಶ್ಯಸೌಂದರ್ಯದಿಂದ ರಸಸಮಾಧಿ ಪಡೆದುದಕ್ಕಾಗಿ ರಾಮ ಪೂಜ್ಯನೆನ್ನುತ್ತಾರೆ ಕವಿ. ಪುರುಷೋತ್ತಮನೂ ಹೌದು, ಎಲ್ಲರಿಗೂ ಹತ್ತಿರದ ಆತ್ಮೀಯ ನಾಗಬಲ್ಲ ಪುರುಷನೂ ಹೌದು ರಾಮ.

ಸೀತೆ ‘ಹದಿಬದೆಯುರಧಿದೇವಿ.’ ರಾಮ–ಸೀತೆಯರ ಸಂಬಂಧ ವನ್ನು ಬೆಳಗುವಂಥದು ಈ ಉಕ್ತಿ :

ಹದಿಬದೆಗೆ ತೋರ್ದಪುದು ತನ್ನಿನಿಯನೊರ್ವನೊಳೆ
ಸರ್ವಮನುಜರ, ಮತ್ತೆ ಸರ್ವಲೋಕದ ಸರ್ವ
ವೈವಿಧ್ಯಮುಂ. ಪ್ರೇಮನಿಷ್ಠೆಯು ಪತಿಗುಮಂತೆ
ತನ್ನ ಸತಿಯೊಳೆ ತೋರ್ದಪುದು ಸರ್ವಲಲನೆಯರ
ಸರ್ವಶೃಂಗಾರಮುಂ !

ರಾವಣನ ಉದ್ಧಾರಕ್ಕಾಗಿ ಇತರರಂತೆ ಸೀತೆಯೂ ನೋಂತು ಕೈಗೊಳ್ಳುತ್ತಾಳೆ. ರಾವಣನಿಗೆ ಒಮ್ಮೆ ಅವಳಾಡುವ ಈ ನುಡಿಗಳನ್ನು ಲಕ್ಷಿಸಬೇಕು :

ಬಿದಿಯ ಬೇಳ್ವೆಗೆ ಬಂದ ಪಶು ನೀಂ ದಶಗ್ರೀವ.
ಮರುಗುವೆನು ನಿನಗೆ. ತಾಯ್ ಕೇಡಾಡಿ ಕಂದಂಗೆ
ಮರುಗುವೋಲ್...
ನೋಂತಿರ್ಪೆನನವರತಮಾತ್ಮದುದ್ಧಾರಕ್ಕೆ
ನಿನಗೆ !

ಇತರ ಪಾತ್ರಗಳು

ಲಕ್ಷ್ಮಣ, ಆಂಜನೇಯ, ಕೈಕೆ, ದಶರಥ ಮುಂತಾದುವು ಇತರ ಪ್ರಮುಖ ಪಾತ್ರಗಳು. ಇವು ಮೂಲಭೂತವಾಗಿ ವಾಲ್ಮೀಕಿಯ ಚಿತ್ರಣಕ್ಕಿಂತ ಬೇರೆಯಲ್ಲವಾದರೂ, ಎಷ್ಟೋ ವಿವರಗಳನ್ನೂ ದರ್ಶನಾಂಶಗಳನ್ನೂ ಕೂಡಿಸಿಕೊಂಡು ಪುಷ್ಟಿ ಪಡೆದಿವೆ.

ಆಂಜನೇಯ ಇಲ್ಲಿ ಯೋಗಶಕ್ತಿಯ ಪ್ರತೀಕವಾಗಿರುವುದನ್ನು ವಿಶೇಷವಾಗಿ ಎತ್ತಿಹೇಳಬೇಕು.

ಮೂಲರಾಮಾಯಣದಲ್ಲಿ ರಾಮ ವನವಾಸಕ್ಕೆ ಹೋದಮೇಲೆ ಕೈಕೆ ಮತ್ತೆ ಕಾಣಿಸಿಕೊಳ್ಳುವುದಿಲ್ಲ. 'ಶ್ರೀ ರಾಮಾಯಣ ದರ್ಶನ'ದ ಅಂತ್ಯದಲ್ಲಿ ಕವಿ ಅವಳನ್ನು ವಿಶಿಷ್ಟ ರೀತಿಯಲ್ಲಿ ತಂದಿದ್ದಾರೆ.

ರಾಮ ಸೀತಾ ಲಕ್ಷ್ಮಣರು ನಂದಿಗ್ರಾಮಕ್ಕೆ ಆಗಮಿಸುತ್ತಾರೆಂಬ ವಾರ್ತೆಯನ್ನು ತಿಳಿದ ಊರ್ಮಿಳೆ ತಂಗಿ ಮಾಂಡವಿಯೊಡನೆ ಬಂದು ಸುಮಿತ್ರೆಗೆ ಮಣಿಯುತ್ತಾಳೆ; ಆಗ ಸುಮಿತ್ರೆ

ಊರ್ಮಿಳೆ, ನಮ್ಮ ಸಂಕಟಕಿಂದು ಬಂದುದು
ವಿರಾಮಮಾ ಕೈಕೆಯ ಮನೋವ್ಯಥೆಗೆ ಪೇಳೆಂದು
ಬರ್ಪುದೊ ಪರಿಸಮಾಪ್ತಿ ? ಬಾ, ನಡೆವಮಾಕೆಯುಂ

ಸಾಮಾನ್ಯತಾ ಶ್ರೀ

ಸಾಧಾರಣ, ಅಲ್ಪ ಎನಿಸಿಕೊಳ್ಳತಕ್ಕದ್ದೂ ಕೂಡ 'ಶ್ರೀರಾಮಾಯಣದರ್ಶನ'ದಲ್ಲಿ ಪ್ರಾಶಸ್ತ್ಯ ಗಳಿಸಿಕೊಂಡಿದೆ. ಪೂರ್ಣದೃಷ್ಟಿಗೆ, ಸರ್ವೋದಯತತ್ತ್ವಕ್ಕೆ ಇದು ಅನುರೂಪವೇ. ಕವಿ ಬಾಯಿಬಿಟ್ಟೆ ಹೇಳಿಕೊಂಡಿದ್ದಾರೆ :

ರಣದ ಸಾಹಸಕಥೆಯ ಬಣ್ಣನೆಗೆ ಬಡತನವೆ ಹೇಳ್ ?
ಹೇರಳಂ ! ದಿನದಿನದ ಸಾಧಾರಣದ ಶಾಂತ
ಸರಳ ಜೀವಿತದ ವರ್ಣನೆಯೆ ವಿರಳಂ. ನಾನದನೆ
ಕೈಕೊಂಡೆಸಗಲೆಳಸುವೆಂ.

ಇದಕ್ಕೆ ಸಮರ್ಥನೆಯೆಂಬಂತೆ ಒಂದೆಡೆ ಈ ಉದ್ಗಾರ ಬಂದಿದೆ

ರಾಮನ ಕಿರೀಟದಾ
ರನ್ನವಣಿಯೋಲೆ ರಮ್ಯಂ, ಪಂಚವಟಿಯೊಳ್
ದಿನೇಶೋದಯದ ಶಾದ್ವಲದ ಪಸುರ್‌ಗರುಕೆಯೊಳ್
ತೃಣಸುಂದರಿಯ ಮೂಗುತಿಯ ಮುತ್ತುಪನಿಯಂತೆ
ಮಿರುಮಿರುಗಿ ಮೆರೆವ ಹಿಮಬಿಂದುವುಂ.

ಕುವೆಂಪು ಅವರ ಈ ಸಾಮಾನ್ಯತಾ ಪುರಸ್ಕಾರ ಅವರ ದರ್ಶನದ ಒಂದಂಗವಾಗಿ, ಕೃತಿಯುದ್ದಕ್ಕೂ ಗೋಚರಿಸುತ್ತದೆ.

ಮೇಲುನೋಟಕ್ಕೆ ಸಾಮಾನ್ಯವೆನಿಸುವ ಘಟನೆ ಮಹದ್ ಘಟನೆಯೊಂದಕ್ಕೆ ಪ್ರೇರಕವಾಗಲೂಬಹುದು. ಮಕ್ಕಳಿಲ್ಲದ ದಶರಥ ಒಮ್ಮೆ ಅರಮನೆಯ ತೋಟದಲ್ಲಿ ತಿರುಗಾಡುವಾಗ, ಮರಿಗೆ ಗುಟುಕು ಕೊಡುತ್ತಿದ್ದ ತಾಯಿ ಹಕ್ಕಿಯೊಂದನ್ನು ಕಾಣುತ್ತಾನೆ. ಅದರ ಪರಿಣಾಮವಿದು :

ಕಣ್‌ನಟ್ಟು
ಕಾಲ್‌ನಟ್ಟು, ನಿಂದನು ಮರಂಬಟ್ಟು. ಮಕ್ಕಳಂ
ಪಡೆದ ಪಕ್ಕಿಯ ಸಿರಿತನಂ ಚಕ್ರವರ್ತಿಗೆ ತನ್ನ

ಬಡತನವನಾಡಿ ಮೂದಲಿಸಿತೆನೆ, ಕರುಬಿ ಕುದಿದನ್
ಕೋಸಲೇಶ್ವರನಾ ವಿಹಂಗಮ ಸುಖಕೆ ಕಾತರಿಸಿ.
ದೇವತೆಗಳಾಶಿತವೊ? ಋತ ಚಿದಿಚ್ಛೆಯೊ? ವಿಧಿಯೊ?
ಪಕ್ಕಿ ಗುಬ್ಬಚ್ಚಿಯಾದೊಡಮೇಂ? ವಿಭೂತಿಯಂ
ಕಿರಿಗೆ ಕರೆವಾಸೆಯುಂ ಕೆರಳಿಸಿದುದಾ ದೊರೆಯ
ಹೃದಯುದಲಿ! ಊರ್ಧ್ವಲೋಕದ ದೇವಶಕ್ತಿಗಳ್
ಸಂಚು ಹೂಡಿದರೆನಲ್, ಚರಿಸಿದತ್ತವರಿಚ್ಛೆ
ಮುದುಕನೆರ್ದೆಯಲಿ ಮಕ್ಕಳಾಸೆವೋಲ್.

ಮರಣೋನ್ಮುಖನಾದ ವಾಲಿ ತೋಡಿಕೊಳ್ಳುವ ನೆನಪುಗಳಲ್ಲಿ ಬದುಕಿನ ಸಾರಾಸಾರ ವಿವೇಚನೆಯಿದೆ:

ಸುಗ್ರೀವ,
ನಿನಗೀಜು ಕಲಿಪಂದು ನೀಂ ಪಂಪೆಯೊಳ್ ಮುಳುಗೆ
ನಾಂ ಮುಳುಗಿ ಮೇಲೆತ್ತಿದಾ ಸೈಪಿನಾ ಸೊಗಂ
ನೆನಗೀಗಳರಿವಾಗುತಿದೆ! ಆಂಜನೇಯ, ಆ
ಮರಕೋತಿಯಾಟಮಂ, ಚಿಣ್ಣಿಕೋಲಾಟಮಂ
ಮರೆತೆಯೇನ್? ಮರೆಯದಿರ್: ಬಾಳಂಚಿನೊಳ್ ನಿಂತು
ಪೇಳ್ವೆನೀ ನನ್ನಿಯುಂ: ಆ ಜಳ್ಳೆ ಗಟ್ಟಿ; ನಾಮ್
ಗಟ್ಟಿಯೆಂದರಿತುದೆಲ್ಲಂ ಜಳ್ಳು, ಬರಿ ಜಳ್ಳು!....
ಸಾವ್‌ಗಾಳಿ ತೂರಲರಿವಪ್ಪುದಯ್!

ತನ್ನನ್ನು ಅರಸಿ ಕಂಡ ಆಂಜನೇಯನ ಮುಂದೆ ಸೀತೆ ತನಗೂ ರಾಮನಿಗೂ ಸಂಬಂಧಿಸಿದ ಸ್ಮೃತ್ಯಭಿಜ್ಞಾನವೊಂದನ್ನು ನಿವೇದಿಸುತ್ತಾಳೆ:

"ನನ್ನ ಬೆರಳಂ ಪಿಡಿದು ತಾನೆ ಮಳಲಂ ತಿದ್ದಿ
ಬರೆದನೊಂದಂ ಪ್ರಣಯಮಂತ್ರಮಂ ಓದೆನಲ್
ಓದಿದೆನ್ ಕೆನ್ನೆಗೆಂಪೇರ್ದಳ್ಕಿ ಬೊಟ್ಟಿಟ್ಟು
ತೀಯ್ದು ಕಲ್ಗಾವಿಯುಂ..." ಮುಂದೆ 'ಮುದ್ದಾಡಿದನ್'
ಎಂದು ತನ್ನೊಳಗೆ ತಾಂ ನವಿದುಕೊಂಡಳ್.

"ಪೆಣ್ಣೊಲಿದ ನಲ್ಲನಿರೆ, ಗಂಡೊಲಿದ ನಲ್ಲೆಯಿರೆ, ಸಿರಿಬಾಳ್ತೆ ಸಿಂಗಾರಸೊಗಕೆ ಹೊಯಿಕ್ಕೈಯಿಹುದೆ, ಪೇಳ್ ಬದುಂಕಿನಲಿ ?" ಎಂದು ಪ್ರಶ್ನಿಸುವ ಕವಿ, ಮನೋಜ್ಞ ವಾಸ್ತವಿಕವಾದ ಹಲವಾರು ಸಂಸಾರಚಿತ್ರಗಳನ್ನು—ರಾವಣ, ಮಂಡೋದರಿಯುರವೂ ಸೇರಿ ದಂತೆ—ಕೃತಿಯುದ್ದಕ್ಕೂ ತೋರಣಗೊಳಿಸಿದ್ದಾರೆ.

ಸುಗ್ರೀವಸೈನ್ಯದ ಇಬ್ಬರು ಸಾಮಾನ್ಯ ಸೈನಿಕರಾದ ವಹ್ನಿ, ರಂಹರ ಪಾತ್ರಗಳು ಕುವೆಂಪು ಗೌರವಿಸುವ ಸಾಮಾನ್ಯತಾ ಶ್ರೀಗೆ ಪ್ರೋಜ್ವಲ ದೃಷ್ಟಾಂತವಾಗಿವೆ.

ವರ್ಣನೆಗಳು

'ಶ್ರೀ ರಾಮಾಯಣ ದರ್ಶನ'ದಲ್ಲಿ ವರ್ಣನೆಗಳು ಸಮೃದ್ಧ ವಾಗಿವೆ. ಇವುಗಳಲ್ಲಿ ಯುದ್ಧವರ್ಣನೆಗಳೇ ಹೆಚ್ಚು: ಎರಡನೆಯ ಸ್ಥಾನ ಪ್ರಕೃತಿವರ್ಣನೆಗಳಿಗೆ. ಈ ವರ್ಣನೆಗಳಲ್ಲಿ ಬಹುಪಾಲು ಹಿಂದಿಲ್ಲದ ಹೊಸ ವಿನ್ಯಾಸದಲ್ಲಿ ಹೊಮ್ಮಿವೆ: ಕೆಲವಂತೂ ಭವ್ಯತಾಗುಣದಿಂದ ಕೂಡಿವೆ. ಎಲ್ಲವೂ ಕಣ್ಮನಗಳಲ್ಲಿ ಅಚ್ಚೊತ್ತಿ ನಿಲ್ಲುತ್ತವೆ. ಒಂದೆರಡು ಪ್ರಕೃತಿವರ್ಣನೆಗಳನ್ನು ಮಾತ್ರ ಇಲ್ಲಿ ನೋಡಬಹುದು.

ಒಮ್ಮೆ ರಾಮ ನೋಡಿದ ಮಂಜಿನ ಅಪೂರ್ವ ಚಿತ್ರವಿದು;

ಪ್ರಕೃತಿಪ್ರಿಯಂ
ನೋಡಿದನು ಸೃಷ್ಟಿಯ ಅಭಾವವನೆ ಚಿತ್ರಿಸಿದವೋಲ್
ನೀಹಾರರಚಿತಮಾ ಹೇಮಂತ ಮಂಜುಕಲೆಯಂ:
ಗಿಡವಿಲ್ಲ, ಮರವಿಲ್ಲ; ಮಲೆಯಿಲ್ಲ, ಕಾಡಿಲ್ಲ;
ನೆಲವಿಲ್ಲ: ಬಾನಿಲ್ಲ; ಬಿಳಿಯ ಬಣ್ಣವನುಳಿದು
ನೋಟಕೇನೊಂದಿಲ್ಲ. ಬೆಳ್ಪೊಂದೆ ಜಗಮೆಲ್ಲಮುಂ !
ಕಡಲ ಕಡೆತದೊಳುದಿಸಿ, ಮಂಥನದ ರಭಸಕ್ಕೆ

ಸಿಡಿದು, ತುಂತುರು ತುಂತುರಾಗಿ, ನಾನಾ ದೆಸೆಗೆ
ಪರ್ವಿದಾ ಶೀಂದ್ರಾತಿಗಾಮೃತಂ ಪರ್ವತದ ಮೇಣ್
ಫಣೆಯು, ಮೇಣಸುರಾಮರಾಕಾರದಿಂ ಪ್ರವಹಿಸಿತೊ
ಶೀಕರ ತುಷಾರದೋಲೆಂಬಂತೆ ಬಿಳಿಮಂಜು ತಾಂ
ರೌಪ್ಯ ಧೂಳಿಯು ಸಾಂದ್ರ ಧೌತಧವಳವನೆರಚಿ
ಮುಚ್ಚಿ ಮುಸುಕಿದುದು ಗಿರಿವನ ಭುವನಮಂ. ಮೇಣ್ ಮಳಲೆ
ಹೊಗೆಯಾಯ್ತೊ, ನೊರೆಯೆ ಇಬ್ಬನಿಯಾಯ್ತೊ ತಾನೆಂಬ
ಕಡಲಾಗೆ ದಟ್ಟೈಸಿತ್ತೈಕಿಲ್ ಸೋನೆ, ಬಳಿಯಿರ್ದ್ದ ಮಾ
ಬಳಸಿರ್ದ್ದ ಮುಳ್ಳಿನೊಡ್ಡಂ ಮಂಜಿನೊಳ್ ಮಸುಳೆ,
ತೆಪ್ಪಮಾದುದು ತೇಲ್ದುದವರಾಶ್ರಮಂ !

ಮುಂಗಾರಿನ ಬಣ್ಣನೆ ಒಂದೆಡೆ ಹೀಗೆ ರೋಮಾಂಚಕಾರಿಯಾಗಿ ಬರುತ್ತದೆ:

ಓ ಆ ದಿಗಂತದೆಡೆ, ಮದದಂತಿವೋಲ್
ಕಾಣಿಸಿತು ವರ್ಷಶಾಪಂ, ರವಿಸಂಗಿ, ಶರಧಿಶಿಶು,
ನೀರದ ಸ್ತೂಪನೀಲಂ. ಶಿವನ ಜಟೆಯಂತೆವೋಲ್
ಶಿಖರಾಕೃತಿಯಿನುಣ್ಮಿ, ಮೇಲೆಮೇಲಕ್ಕೇರ್ದ್ದು
ಶೈಲಾಕೃತಿಯಿನುಬ್ಬಿ, ತೆಕ್ಕನೆ ಕೆದರ್ದ್ದತ್ತು,
ಕುಣಿವ ಕಾಳಿಯ ಕರಿಯ ಮುಡಿ ಬಿಚ್ಚಿ ಪರ್ವುವೋಲ್
ಸಂಜೆಬಾನಂ ಮುಸುಕಿ ಮುಚ್ಚಿ. ಮೇಣ್ ಕಾರ್ಗಾಳಿ
ಬೀಸಿದುದು ಮಲೆಯ ಮಂಡೆಯು ಕಾಡುಗೂದಲಂ
ಪಿಡಿದಲುಬಿ ತೂಗಿ. ನೋವಿಂಗೊರಲಿದತ್ತಡವಿ
ಹಳೆಮರಗಳುರುಳಿ; ಮರಕೆ ಮರವುಜ್ಜಿ: ಕೊಂಬೆಗೆ
ಕೊಂಬೆ ತೀಡಿ; ಮೆಳೆಯೊಳ್ ಬಿದಿರು ಕರ್ಕಶವುಲಿದು
ಕೀರಿ. ಸಿಡಿರೋಷದಿಂ ಕಿಡಿಯಿಡುವ ಮಸಿನವಿರ
ಪುಬ್ಬಿನಾ ಕಾರ ರಾಕ್ಷಸಿಯಕ್ಷಿಮುಳಿವಂತೆ
ಮಿಂಚಿತು ಮುಗಿಲಿನಂಚು. ಸಂಘಟ್ಟಣೆಗೆ ಸಿಡಿಲ್
ಗುಡುಗಿದುವು ಕಾರ್ಗಲ್ ಮುಗಿಲ್‌ಬಂಡೆ. ತೋರ ಹನಿ
ಮೇಣಾಲಿಕಲ್ ಕವಣೆವೀಸಿದುವು. ಬಿಸಿಲುಡುಗಿ,
ದೂಳುಂಡೆಗಟ್ಟಿ, ಮಣ್ ತೊಯ್ದು, ಕಮ್ಮನೆ ಸೊಗಸಿ

ತೀಡಿದುದು ನೆಲಗಂಪು ನಲ್. ರ್ಘಣನ್ನೂಪುರದ
ಸುಸ್ವರದ ಮಾಧುರ್ಯಡಿಂ ಕನತ್ಕಾಂತಿಯಿಂ
ಝುರದ ಝಲ್ಲರಿಯ ಜವನಿಕೆಯಂತು ನರ್ತಿಸುವ
ಯೌವನಾ ಯುವನಿಯ ಕರದ ಪೊಂಜುರಿಗೆಯಂತೆ
ಸುಮನೋಜ್ಞಮಾದುದಾ ಭೀಷ್ಮಸೌಂದರ್ಯದಾ
ಮುಂಗಾರ್ ಮೊದಲ್.

ಛಂದೋಲಯದಲ್ಲಿ ಅನುಭವವನ್ನು ಪುನಃ ಸೃಜಿಸಬಲ್ಲ ಸಮುಂದ್ರ ವರ್ಣನೆ ಇಲ್ಲಿದೆ:

ತೆರೆಪರಂಪರೆ : ಮೊರೆಪರಂಪರೆ : ಪರಂಪರೆಯ
ಬೆಳ್ನೊರೆನೊರೆಯು ಪೊರೆಯ ಸಾಗರದ ನಾಗರನ
ಭೋರ್ಗರೆವ ಭೋಗಕುಲ ಬಲಮುಪ್ಪಳಿಸಿದುದು
ನಿರಂತರಂ, ತಟಗತ ಅಶೋಕವನ ವಂಕಿಮ
ಶಿಲಾವೇಲೆಯಂ.

ಮಹಾಕಾವ್ಯಕ್ಕೆ ಸಮುಚಿತವಾದ ಅನೇಕ ಮಹೋಪಮೆಗಳನ್ನು 'ಶ್ರೀ ರಾಮಾಯಣ ದರ್ಶನ'ದಲ್ಲಿ ಕಾಣುತ್ತೇವೆ. ಸುಗ್ರೀವಸೈನ್ಯವನ್ನು ಚಿತ್ರಿಸುವ ಮಹೋಪಮೆಯೊಂದು ಇಂತಿದೆ :

ವರ್ಷದಿಂ
ವರ್ಷಮೆಲ್ಲಂ ತೊಯ್ದು, ಆ್ಯಡಂ ಶಿಖರದಿಂದೆ
ಶೋಭಿಸಿದೆ ದಾಕ್ಷಿಣಾಟ್ಲಾಂಟಿಕಾ ದ್ವೀಪೋತ್ತಮಂ
ಫಾಕ್‌ಲೆಂಡ್. ನವೀನ ಭೂ ಅನ್ವೇಷಿ ನಾವಿಕಂ
ತೀರಮಂ ಬಳಿಸಾರ್ದು, ನೋಳ್ಪನಚ್ಚರಿಯಿಂದೆ
ಏರ್ದು ನೌಕಾಧ್ವಜಸ್ತಂಭದೌನ್ನತ್ಯಮಂ.
ಏಂ ದೃಶ್ಯಮಾ ಚಿತ್ರಂ ! ಮಾನವರೊ ? ಪಕ್ಷಿಗಳೊ ?
ಪ್ರಾಣಿಗಳೊ ? ದಂಡೊ ತಂಡವೊ ? ಹಿಂಡೊ ? ನಾವಿಕಂ
ಬೆರಗುವೆರಸಿದ ಭೀತಿಯಿಂ ನೋಡುವನು ಮತ್ತೆ
ಮತ್ತೆ ನೋಲ್ಪನ್ನೆಗಂ ಕಣ್ಣು, ಪರಿವನ್ನೆಗಂ
ದಿಟ್ಟಿ. ತಗ್ಗುಬ್ಬುಗಳನೆಲ್ಲಮಂ ತುಂಬುತಾ

ದ್ವೀಪವಿಸ್ತೀರ್ಣವಂ, ದಶದಶ ಸಹಸ್ರದಿಂ,
ಪೆಂಗುಯಿನ್ ಪಕ್ಷಿವೃಂದಂ ರಾಶಿರಾಶಿಯಿಃಂ
ಶತಕೋಟಿ ಸಾಂದ್ರಮೆಸೆದಪುದಜಸ್ರಂ-ಅಂತೆವೋಲ್
ಕಿಕ್ಕಿರಿದುದತ್ಯತಿ ಅಸಂಖ್ಯ ವಾನರಸೇನೆಗಳ್
ಕಿಷ್ಕಿಂಧೆಯುಂ ತುಂಬಿ, ಸುತ್ತಿ.

ಕವಿಯ ವ್ಯುತ್ಪತ್ತಿಯ ಹರವು ಇಲ್ಲಿ ನಿದರ್ಶಿತವಾಗಿದೆ. ಎಷ್ಟೋ ವೈಜ್ಞಾನಿಕ ಉಪಮಾನಗಳನ್ನೂ ಇಲ್ಲಿ ನೆನೆಯಬೇಕು; "ದೂರ ದರ್ಶಕ ಯಂತ್ರದಕ್ಷಿಯೊಳ್ ಕಣ್ಣಿಟ್ಟು, ಗಗನವಿಜ್ಞಾನಿ ತಾಂ ರಾತ್ರಿಯಾಕಾಶದಲಿ ಕಾಣ್ಬೊಂದು ತಾರಾಗರ್ಭದಂತೆ," "ರವಿ ಯಾಕರ್ಷಣೆಯನುಳಿಯೆ, ನಿಚ್ಚನೇಮಂಗೆಟ್ಟು, ಬಟ್ಟೆ ನಿಟ್ಟೆಗೆ ತಪ್ಪಿ ತತ್ತರಿಸಿ, ನೀಲ ಶೂನ್ಯಕ್ಕುರುಳ್ದುರುಳ್ವಿಳೆಯಂತೆ" ಇತ್ಯಾದಿ. ಇಂಥ ಹೋಲಿಕೆಗಳನ್ನು ಆಧುನಿಕ ಸಂವೇದನೆಯ ಕವಿ ಮಾತ್ರ ಕೊಡಬಲ್ಲ. "ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ," "ಕವಿಕಲ್ಪನೆಯ ಕೂಡೆ ಏರಲೆಳಸಿಯುಮೇರಲಾರದ ವಿಮರ್ಶಕನ ಕಾಣ್ಮೆಯಿಲ್ಲದ ಬರಿಯ ಜಾಣ್ಮೆಯೋಲ್" ಮುಂತಾದ ಕಾವ್ಯ ಪ್ರಪಂಚದ ಉಪಮೆಗಳೂ ಉಲ್ಲೇಖನೀಯ. ಒಟ್ಟಿನಲ್ಲಿ 'ಶ್ರೀ ರಾಮಾಯಣ ದರ್ಶನ'ದ ವರ್ಣನೆಗಳು ವಿವಿಧಾಲಂಕಾರ ಬಂಧುರ.

ರಸ ಪ್ರತಿಪಾದನೆ

ಕುವೆಂಪು ತಮ್ಮ ಕಾವ್ಯದಲ್ಲಿ ಎಲ್ಲ ರಸಗಳನ್ನೂ ಪರಿಣಾಮಕಾರಿ ಯಾಗಿ ಪ್ರತಿಪಾದಿಸಿದ್ದಾರೆ. ಯುದ್ಧ ವರ್ಣನೆಗಳಲ್ಲಂತೂ ವೀರಾದ್ಭುತ ರೌದ್ರ ರಸಗಳ ತ್ರಿವೇಣಿಯಿದ್ದು, ಓದುಗರ ಮೈಮನ ಗಳು ಪುಲಕಗೊಳ್ಳುತ್ತವೆ. ಈ ವರ್ಣನೆಗಳಿಗೆ ಆಧುನಿಕತೆಯ

ಸ್ಪರ್ಶವೂ ಉಂಟು. ಉದಾಹರಣೆಗೆ, ಕುಂಭಕರ್ಣನ ಸಮರೋದ್ಯಮ ವರ್ಣನೆಯನ್ನು ನೋಡಬಹುದು. ಅವನು ಯುದ್ಧಕ್ಕೆ ಹೊರಡುವಂದು, ಸೂರ್ಯ ಉದಯಿಸಲು ಹೆದರುತ್ತಾನೆ. ಶಿವೆ ಅವನಿಗೆ ಅಭಯವೀಯುತ್ತಾಳೆ. ವಾಸ್ತವವಾಗಿ ಅವಳಿಗೇ ಅಂಜಿಕೆ. "ಕುಮಾರಿ ಸೀತೆಯ ಹಣೆಯ ಕುಂಕುಮಕೆ ಹಾನಿ ಬರದಿರಲಿ" ಎಂದು ರುದ್ರನನ್ನು ಬೇಡುತ್ತಾಳೆ. ಅವನು ಅವಳನ್ನು "ನಿನ್ನಂಶಮಾ ಸೀತೆ" ಎಂದು ಸಾಂತ್ವನಗೊಳಿಸಿ, "ನೋಡು, ಕುಂಭಕರ್ಣನ ಲೋಕಭೀಕರ ಮಹಾಭೀಳ ರಣ ಕಾವ್ಯಮಂ" ಎಂದು ತೋರಿಸುತ್ತಾನೆ. ಇದಿಷ್ಟು ಹಿನ್ನೆಲೆಯಿಂದಲೆ ಧ್ವನಿತವಾಗುತ್ತದೆ, ಕುಂಭಕರ್ಣ ಎಂತಹವನೆಂಬುದು. ಮುಂದೆ ಅವನ ರಣಚಿತ್ರವನ್ನು ಹೀಗೆ ಕುತೂಹಲಕರವಾಗಿ ಕೊಡುತ್ತಾರೆ ಕವಿ:

ತನ್ನ
ಪೇರಾನೆದೇರೇರಿ ಕೋಂಟೆಪೆರ್ಬಾಗಿಲ್ ಬರಂ
ಬಿಜಯಂಗೈಯ್ದಾ ಕುಂಭಕರ್ಣಂ, ವಿಸರ್ಜಿಸುತೆ
ತನಗೆ ಗೌರವಮಾತ್ರದಂತಿರ್ದ ತೊಡಕನ್, ಆ
ರಥಮಂ ತಿರಸ್ಕರಿಸಿ ಭೂರಥಕ್ಕವತರಿಸಿದನ್.
ಸದ್ದಡಗಿದುದು ಕಪಿಸೇನೆಯಲಿ; ಮೂಗುವೆರಳಾಗಿ
ನೋಡುತಿರ್ದುದು ಕುಂಭಕರ್ಣನ ಮಹದ್‌ರುಂದ್ರ
ಗಾತ್ರಗಿರಿಯಂ ಮೂಗುವಟ್ಟಂತೆ! ನೋಡುತಿರೆ,
ಪಜ್ಜೆಪಜ್ಜೆಗೆ ಧರೆಗೆ ಪುಟ್ಟಲ್ ಪ್ರಕಂಪನಂ,
ನೆಗೆತವೊಂದಕೆ ದಾಂಟಿದನು ಬಲ್ಗೋಂಟೆಯಂ;
ನೆಗೆತವೆರಡಕೆ ದಾಂಟಿದನಗಳ್ತೆಯಂ ವಿಪುಲ
ವಿಸ್ತಾರದಾ. ದಾಂಟಿದನು ನೆಗೆತ ಮೂರಕೆ ತನ್ನ
ಮರ್ತ್ಯಯುಮೇರೆಯಂ. ಕಾಲಾಂತಕನ ತೆರದಿ
ಕಾಲಿಕ್ಕಿದನು ಕಾಲವಶಿ ಕಾಲವಲಯಕೆ
ಅಕಾಲಮೃತ್ಯುವಿನಂತೆವೋಲ್! ಮುಸಲಕೇಶಿನಿಗೆ

ಗದೆಯುಂ ತ್ರಿಶೂಲಮುಂ ಮುಸಲಮುಂ ಖಡ್ಗಮುಂ
ಸರ್ವಾಯುಧಂಗಳುಂ ತನ್ನೊಳೊಂದಾಗಿರ್ದ
ದೈತ್ಯದೈತ್ಯನ ದೈತ್ಯಮುದ್ಗರಕೆ. ತಲೆತೊಯ್ದು
ಕೆನ್ನೀರ್ ಬಸಿಯೆ, ಬಿರಿದು ಕೆಡೆಯೆ ಕಪಿರುಂಡಗಳ್,
ಬಡಿದಲ್ಲಿ ಬಯಲೇಳೆ, ಬಡಿತ ಬಡಿತಕೆ ನೆಲಂ
ಝಗ್ಗನೆ ಕಣಿವೆ ಬೀಳೆ. ಬೀಸಿದನು, ಬಡಿದನ್,
ತಿರುಪ್ಪಿದನ್, ಜಪ್ಪಿದನ್. ಕೊಂದನರೆದನು ಕೋಟಿ
ಕಪಿಕುಲರಾ: ಇಂದಲ್ಲಿ ಐರೋಪ್ಯ ದೌಷ್ಟ್ಯಮ್
ಪ್ರಯೋಗಿಸುವ ದೈತ್ಯಯಂತ್ರಗಳೆಂತು ಮನೆಯೆನದೆ
ಮಠವೆನದೆ, ಚರವೆನದಚರವೆನದೆ, ಪೆಣ್ಣೆನದೆ
ಗಂಡೆನದೆ ನಾಗರಿಕರೆನದೆ. ಸೈನಿಕರೆನದೆ
ಪಶು ಪಸುಳೆಯೆನ್ನದೆಯೆ. ತಗ್ಗುಬ್ಬು ತಡೆಯೆನದೆ
ಮುಂದೆ ತಡೆಬಂದನಿತುಮಂ ಮೆಟ್ಟಿ ತುಳಿತುಳಿದು,
ಬರಿಗೈದು, ಬಟ್ಟಬಯಲಂಗೈಯ್ದು. ಮಿಳ್ತುವಿನ
ಮುನ್ನಡೆಗೆ ನೆತ್ತರೋಕುಳಿವೊಯ್ದು, ಕಂಬನಿಯ
ಕಾಲುವೆಗೆ ರಕ್ತವರ್ತ್ಮಗಳಾಗುತಿಪ್ಪಂತೆವೋಲ್
ಮುಂಬರಿದನಾ ಕುಂಭಕರ್ಣಂ, ದಶಾನನ
ಮಹಾ ಸಮರ ಯಂತ್ರಸ್ವರೂಪಂ.

ಕುಂಭಕರ್ಣನನ್ನು ಎದುರಿಸಲು ಹೊರಟ ರಾಮನ **ಚಿತ್ರ**ವೇನು ಕಡಮೆ ? —

ಖಂಡ-

ಪರಶುವೆ ಪಿನಾಕಮುಂ ತುಡುಕಿದನೆನಲ್ ಉಗ್ರ
ಕೋದಂಡಧರನಾಗಿ, ಉಪಮಾದರಿದ್ರತೆಗೆ
ಕಪಿಕಪಾಲಕರೆ ಸರಸತಿಯೆ ಶಿವವೃತ್ತಿಯುಂ
ಕೈಕೊಂಡು ಭಿಕ್ಷಾಟನೆಗೆ ಹೊರಮುಡುವಳೆನಲ್,
ಕುಂಭಕರ್ಣಂಗೆದುರುವಾಡಿ ಜಗದ್‌ಭೀಕರಂ
ಭಾವೋಗ್ರನಾಗಿ, ಸುಗ್ರೀವ ಜಾಂಬವರಸುರ
ಸಂಗ್ರಾಮಧರೆಗೆ ನಡೆದನು ರಾಮನತಿಭೀತಿ
ಸಂಚರಿಸಿ ಕಂಪಿಸೆ ಕನಕ ಲಂಕೆ !

ಇಂದ್ರಜಿತುವಿನ ನಿಕುಂಭಿಳಾಯಾಗಮಂಟಪವನ್ನು ಲಕ್ಷ್ಮಣ ನಾಶಮಾಡಿದಾಗ ಉಂಟಾದ ಪರಿಣಾಮಗಳನ್ನು ನಿರೂಪಿಸುವಲ್ಲಿ ಭಯಾನಕ ರಸದ ಪ್ರತೀತಿಯಿದೆ:

ಸ್ವಪ್ನವಿದ್ಯುತ್‌ಕಶಾಘಾತಕೆನೆ
ಮಂಚದಿಂದುರುಳಿ ಬೀಳ್ವನಿತರೊಳಗೆಚ್ಚತ್ತು
ಕುಳ್ತ ಮಂಡೋದರಿಗೆ ಮನೆ ನಡುಗಿದಂತಾಯ್ತು, ಕೇಳ್,
ಅಣುಘೋರಮಸ್ತ್ರಂ ಸಿಡಿಯಲಾ ಮಹಾಸ್ಫೋಟಕೆ
ಸುದೂರ ಪುಟಭೇದನಂ ಭಿತ್ತಿ ಭೂಕಂಪಿಪೋಲ್ !
ಹೃದಯಗಿರಿ ನಡುಗಿತ್ತು; ಬುಡ ಸಡಿಲ್ದುರುಳ್ದುದು
ದಶಗ್ರೀವ ಧೈರ್ಯಾದ್ರಿ ಶಿಖರದ್ರುಮಂ ! ನಡುಗಿತು
ಕನಕಲಂಕೆ; ಗೃಹಶಿರಗಳದಿರಿದುವು; ಉದುರಿದುವು
ದೈತ್ಯಧ್ವಜಾಳಿ ! ಗಹ್ವರಕಂಠ ಘೋಷದಿಂ
ಕಂಪನಕೊರಲ್ದುವಯ್ ಲಂಬ ತ್ರಿಕೂಟಗಿರಿ
ಭೂವಿಪಿನಗಳ್, ವಿಪತ್ ಸೂಚಕಮೆನಲ್ ! ಕಡಲ್
ಕುದಿಗೊಂಡವೋಲುಕ್ಕಿ, ಕಡೆಗೊಂಡವೋಲ್ ಮೊರೆದು,
ನೊರೆತೆರೆಯನವ್ವಳಿಸಿದುದು ವೇಲೆ ಹಮ್ಮೈಸೆ !
ಬಂದುದತಿಕಾಯನಳಿವಿನ ವಾರ್ತೆಯುಂ ಬಿಡದೆ
ಬೆಂಬತ್ತಿ ಮೇಘನಾದನ ಮಂತ್ರಮಂಟಪ
ಮಹಾಸ್ಫೋಟ ರಾವ ಭೀಕರವಾರ್ತೆಯುಂ, ಲಂಕೆ
ಮಿಳ್ಮಿಳನೆ ಬೆಬ್ಬಳಿಸೆ, ಭಯಕೆ ನೆತ್ತರ್ ತಣ್ಣವೋಲ್ !

ರಾಮ–ಸೀತೆಯರ ಈ ಒಲವಿನಾಟದ ಚಿತ್ರಣದಲ್ಲಿ ಶೃಂಗಾರದ ಚೇತೋಹರ ವಿಲಾಸವಿದೆ:

ನೀರಿಗಿಳಿದರು ರಾಮಸೀತೆಯರು. ಕಣ್ಣಾಯ್ತು
ಶೈಲಕಾನನ ಪೃಥಿವಿ ತಾನಾ ಸ್ನಾನದರ್ಶನಕೆ:
ಮಹಿಮೆ ತಾಂ ಮಾಳ್ಪುದನಿತುಂ ಮಹತ್ ಕಲೆಯಲ್ತೆ!
ಮುಳುಗಿದರ್; ಮೂಡಿದರ್; ಸರಸಕ್ಕೆ ಕಾಡಿದರ್;
ಬಯಸಿ ನಿಡುನೋಡಿದರ್; ಬೆನ್ನಟ್ಟುತೋಡಿದರ್;
ಸುಖಖನಿಯ ತೋಡಿದರ್; ನೀರಾಟವಾಡಿದರ್...

ಕುಂಭಕರ್ಣನನ್ನು ಕಳೆದುಕೊಂಡ ರಾವಣನ ಅವಸ್ಥೆಯನ್ನು ಅನಲೆ ಬಣ್ಣಿಸುವ ಈ ಭಾಗ ಕರುಣರಸದ ಊಟೆಯಾಗಿದೆ;

ಕಳ್ಳರಾಟದಲಿ ನಾವಟ್ಟಿ.
ಅವನೋಡಿ, ನಾನ್ ಪಿಡಿಯಲಾರದಿರೆ, ಕೊನೆಕೊನೆಗೆ
ನಗೆ ತಡೆಯಲಾರದೆಯೆ ಸೋಲ್ತು ನಿಲುತಿರ್ದನಂ
ನಾನ್ ಮುಟ್ಟೆ, ನನ್ನನಂಬರಕೆತ್ತಿ ಮೇಲೆಸೆದು
ಪಿಡಿದು 'ನೀನೊಂದು ಪೂವಿನ ಚೆಂಡು' ಎನುತೆನ್ನ
ಮುದ್ದಾಡುತಿರ್ದನ್ 'ಚೆಂಡುವೂ! ಚೆಂಡುವೂ!'
ಎಂದಟ್ಟಹಾಸಂ ಮೊಳಗಲದ್ಭುತಂ ನಗುತೆ!—
ಅಯ್ಯೊ ಆ ಅಯ್ಯನನ್, ಇಂದು, ಕಡಲೆಡೆ, ಮಳಲ
ತೀರದಲಿ, ಗಂಧ ಚಿತೆಯಲಿ ಬೇಳ್ದು, ಬೂದಿಯಂ
ತಂದನೂರಿಗೆ ನನ್ನ ಬದುಕಿರ್ದ ದೊಡ್ಡಯ್ಯನ್,
ಅಸುರೇಶ್ವರಂ! ಅದನ್ ಇಟ್ಟ ರತ್ನಮಂಜೂಷೆಯಂ
ಬಿಗಿದಪ್ಪಿ ತಮ್ಮ ತಮ್ಮೆಂದೊರಲುತಿರ್ದನಂ
ನೆನೆಯಲಮ್ಮೆಂ...

ಹಾಸ್ಯಕ್ಕೂ ಕೊರತೆಯಿಲ್ಲ, 'ಶ್ರೀರಾಮಾಯಣ ದರ್ಶನ'ದಲ್ಲಿ. ರಾಮಸೀತೆಯರ ಈ ಸಂಭಾಷಣೆಯ ಭಾಗ ನಿರ್ಮಲ ಹಾಸ್ಯದ ಒಂದು ತಾಣ:

"....ಬಾ, ಅಣುಗಿ,
ಬೇಗ ಬಾ. ನಿನ್ನ ದೆಸೆಯಿಂದೆನಿತು ತಡವಾಯ್ತೊ?
ತಮ್ಮನೇನೆಂದಪನ್!"
"ಆಃ! ಜಾಣ್ನುಡಿದಿರಲ್ತೆ
ತಳುವಿದುದಕಾನೆ ಕಾರಣಮಪ್ಪೆನಾದೊಡಂ
ನನ್ನಿಂದೆ ತಡವಾಯಿತೆಂಬುದದು ದಿಟಮೆ, ಪೇಳ್,
ಸತ್ಯಸಿಂಧು?" ಎನುತೆ ಕಡೆಗಣ್ಣೆಸೆದ ತಿರೆಮುಗಳ
ತಾತ್ಪರ್ಯಮಂ ತಿಳಿಯುತೆಳನಗೆ ಸುಳಿಸಿ ದಾಶರಥಿ:
"ತರ್ಕಸಿಂಹಿಣಿ, ಸಾಲ್ಗುಮೀ ಜಾಣ್ಮೆ: ಬೇಗ ಬಾ!"
ಎನುತೋಡುತಡರಿದನ್ ಲಕ್ಷ್ಮಣನೆಡೆಗೆ. ದೇವಿಯುಂ

ಪಿಂತಣಿಂದೇದುತ್ತೈತರೆ, ಸುಮಿತ್ರಾತ್ಮಜಂ:
" ಅತ್ತಿಗೆಯನೇಕಿಂತು ದಣಿಸುವಿರಿ, ಅಣ್ಣಯ್ಯ,
ಕಾಡು ಕೊರಕಲನಲೆಸಿ ?" ಎನೆ, ಸೀತೆ " ಮೈದುನನೆ,
ನೆಳಲಿಗೇನ್ ನಡೆವವನ ತೊಂದರೆಯೆ ?" ಎಂದೊಡನೆ
ಗಂಡನ ಕಡೆಗೆ ತಿರುಗಿ, ಸಿಡುಕುಮೋರೆಯ ಮಾಡಿ,
ನೆಲಗುಡಿಗಿನಂತಾಡಿದಳ್: "ಗಂಡು ಬರಿಹೊಟ್ಟೆ !
ಕೂಳಿರ್ಪೆಡೆಗೆ ಹರಣ ಹೋದುದನ್ ಲೆಕ್ಕಿಸದೆ
ಹಾರಿ ನುಗ್ಗಿದಪುದೇಂ ಸಾಣ್ಗೇಡೊ!"

ಗಜನೆಂಬ ವಾನರ ಕುಂಭಕರ್ಣನನ್ನು ಬೇಸ್ತು ಬೀಳಿಸುವ **ಈ** ಪ್ರಸಂಗ ನಗೆಯುಕ್ಕಿಸುತ್ತದೆ:

ಪಿಡಿದನಾ ಪಿಡಿದನೆನೆ ತನ್ನೆಡದ ತೋಳ್ ಸೊಂಡಿಲಂ
ರಾಕ್ಷಸಂ ನೀಡೆ, ಚಕ್ಕನೆ ನಿಂತು, ಪಕ್ಕಕೆ ಚಿಮ್ಮಿ,
ದಿಕ್ಕನೆ ತೊರೆದು ಬೇರೆ ದಿಕ್ಕೋಡಿದನು ಗಜಂ.
ರಾಕ್ಷಸಸ್ಥೂಲಕಾಯಂ ತನ್ನ ರಭಸಕ್ಕೆ
ತಾನೆ ಮುಂದೋಡಿದುದು. ಹಿಂದಕೆಳೆದುದು ಮನಂ–
ಅತ್ತಲೆಳೆದುದು ದೇಹವೇಗಂ ಪದದ್ವಯುವನ್.
ಇತ್ತಲೆಳೆದುದು ಚಿತ್ತವೇಗಂ ಬೃಹಚ್ಛಿರವನ್;
ಅತ್ತಲಿತ್ತಲ್ ತೂಗಿ ತೊನೆದನ್ ! ಅದನ್ ಕಂಡು.
ನೆಗೆವೊನಲ್ ನೆರೆಯುಕ್ಕಿತಿರ್ಕೆಲದ ಬಲತಟಂ
ಗೊಳ್ಳನೆ ಕುಸಿದು ಬೀಳೆ. ಅಪಮಾನಕುರೆ ಕನಲಿ,
ಕೋಪಶಿಖಿ ದಳ್ಳುರಿದು ಬೆಂಬತ್ತಿದನು ಮತ್ತೆ
ಕಿಲಕಿಲನೆ ನಗುತೋಡುತಿರ್ದ ಕಪಿವೀರನಂ.
ಕೊಂಕಿ ಡೊಂಕುತೆ, ನಿಂದು ಪರಿಯುತ್ತೆ, ಬೆನ್ದೆಸೆಗೆ
ಬಳುಕುತ್ತೆ, ಕಾಲ್‌ನಡುವೆ ಪೊಕ್ಕು ಜುಣುಗುತೆ, ಮತ್ತೆ
ರಕ್ಕಸಂ ಪುಗಲಾರದಿಕ್ಕಟ್ಟಿನೊಳ್ ನುಗ್ಗಿ
ಸಿಕ್ಕಿಸುತೆ, ಹೊಂಚಿ ಹೊಮ್ಮುತೆ ಚಿಮ್ಮಿ ವಂಚಿಸುತೆ,
ಮೂರು ಸೂಳ್ ಸುತ್ತಿಸಿದನಸುರೇಂದ್ರನಂ ಗಜಂ
ದುರ್ಗತ್ರಿಕೂಟಮುಂ ಲಂಕೆಯಾ! ಪೇಳ್ವೆನೇಂ
ಕುಂಭಕರ್ಣ ಸ್ಥಿತಿಯ ಪರಿಹಾಸಮಂ? ಮುಡಿಗೆದರೊ,

ಮ್ಮೆ ಬೆವರೊ, ಸುಯ್ಲುಗಳೊ, ಹೊಯ್ವುಳ್ಳೆಗಳೊ, ಸೋರ್ವ
ಶೋಣಿತವೊ—

ಕುಂಭಕರ್ಣನ ಕೈಗೆ ಸಿಕ್ಕಿದ ಸುಗ್ರೀವ ಅವನಿಗೆ ಚಕ್ಕಳಗುಳಿಯಿಕ್ಕಿ ಫಜೀತಿಗೆ ಗುರಿಮಾಡಿ ತಪ್ಪಿಸಿಕೊಳ್ಳುವುದೂ ಹಾಸ್ಯಪೂರ್ಣ ಪ್ರಕರಣ.

ನಾಟಕೀಯತೆ

'ಶ್ರೀ ರಾಮಾಯಣ ದರ್ಶನ'ದಲ್ಲಿ ಕವಿ ಮೇಲಿಂದ ಮೇಲೆ ಸೊಗಸಾದ ನಾಟಕೀಯತೆಯನ್ನು ತಂದು, ಕೃತಿ ಬದುಕಿಗೆ ಹತ್ತಿರ ವಾಗುವಂತೆ ನೋಡಿಕೊಂಡಿದ್ದಾರೆ. ವಹ್ನಿ-ರಂಹರಿಗೂ ರಾಮ ನಿಗೂ ನಡೆದ ಸಂವಾದದ ಒಂದು ಭಾಗವನ್ನಷ್ಟೆ ನೋಡಿದರೂ ಸಾಕು, ನಾಟ್ಯಗುಣ ಸಹಿತವಾದ ಮಾರ್ಮಿಕ ಚಿತ್ರಣ ಗಮನಕ್ಕೆ ಬರುತ್ತದೆ:

"...ವಹ್ನಿ, ನಿನಗೆ ಸಹಧರ್ಮಿಣಿಯು
ಸುಖಿ ಸಂಗಮಿರ್ಪುದೇನಯ್?" "ಇರ್ದುದೆನ್ನೂರೊಳಗೆ"
ಪ್ರತ್ಯುತ್ತರದ ಇಂಗಿತ ವ್ಯಂಗ್ಯಕೊಂದಿನಿತೆ
ನಕ್ಕು ಸೀತಾಪ್ರಾಣವಲ್ಲಭಂ: "ಇರ್ದುದೇನ್ ?
ಅಯ್ಯೊ ಇಪ್ಪುದನುಳಿದು ಬಂದು ಸಂಕಟಕೇಕೆ
ಸಿಲ್ಕಿದಯ್ ? ನಿನ್ನವೊಲೆ ನಿನ್ನಾಕೆಯುಂ ದುಃಖಿ !"
ಸುಯ್ದು ಕೇಳ್ದನ್. "ನನ್ನ ಕತದಿಂದಾದುದಲ್ತೆ
ನಿಮಗೆ ಬನ್ನಂ, ವಹ್ನಿ?"
ತತ್ತರಿಸಿದನು ವಹ್ನಿ
ಸುಯ್ಲುರಿಗೆ ಸಿಲ್ಕಿ. ಕೈಮುಗಿದು, ಮೊಣಕಾಲೂರಿ,
ಬೇಡಿದನ್: "ದೇವ, ಮನ್ನಿಸು ನನ್ನ ಬಿನಪಮಂ.
ತಪ್ಪಿತರ್ಥವ್ಯಾಪ್ತಿ !"
"ಏಳೇಳ್, ಭಟವರೇಣ್ಯ;

ಮಕ್ಕಳಿಹರೇ ನಿನಗೆ?" ರಘುಜನೆಂದನು, ದನಿಯೆ
ನೇಹವ ಸೂಸುವಂತೆ.
"ಇರ್ಪನೊರ್ವನ್, ದೇವ"
"ಚಿಕ್ಕವನೆ" "ಅಲ್ಲದಿರೆ ನನ್ನ ಪಕ್ಕದೊಳಿರನೆ
ನಿನ್ನ ಸೇವೆಯು ದೇವಕಾರ್ಯಕ್ಕೆ?" "ಅವರ್ಗಾರ್
ರಕ್ಷಕರ್?" "ನಾನೆ!"

ಯುದ್ಧ ಕೋಲಾಹಲದ ನಡುವೆ ಸಾಮಾನ್ಯ ಯೋಧರ ಸುಖ ದುಃಖಗಳ ಒಳನೋಟವನ್ನು ಮತ್ತಾವ ಕವಿಯೂ ಹೀಗೆ ಕೊಟ್ಟಿಲ್ಲವೆನ್ನಬಹುದು.

ಪ್ರತಿಮಾ ದೃಷ್ಟಿ

ಪ್ರತಿಕೃತಿ ದೃಷ್ಟಿಗಿಂತ ಅಧಿಕತರವಾಗಿ ಪ್ರತಿಮಾದೃಷ್ಟಿ 'ಶ್ರೀ ರಾಮಾಯಣ ದರ್ಶನ'ದಲ್ಲಿ ಅನುಭವಕ್ಕೆ ಬರುತ್ತದೆ. ಒಂದರ್ಥದಲ್ಲಿ ಇಡೀ ಕಾವ್ಯವೇ ದರ್ಶನಧ್ವನಿಗರ್ಭಿತವಾದ ಪ್ರತಿಮೆ. ಅದರ ಅಂಗೋಪಾಂಗಗಳನ್ನು ತೆಗೆದುಕೊಂಡರೂ, ಅವು ಎಷ್ಟೋ ಕಡೆ ಪ್ರತಿಮೆಗಳಾಗಿದ್ದು, ಮೇಲ್ನೋಟಕ್ಕೆ ತೋರುವುದಕ್ಕಿಂತ ಭಿನ್ನವಾದ ಅರ್ಥವನ್ನು ವ್ಯಂಜಿಸುವುದು ವಿದಿತವಾಗುತ್ತದೆ. ಸಂಪ್ರದಾಯದತ್ತವಾದ ಪುರಾಣ ಸಂಗತಿ ಅಥವಾ ಘಟನೆ ಇದರಿಂದ ವೈಜ್ಞಾನಿಕ ಶೋಧನಕ್ಕೊಳಪಟ್ಟು, ಹೊಸ ಮೌಲ್ಯವನ್ನು ಧರಿಸುತ್ತದೆ. ಒಂದೆರಡು ನಿದರ್ಶನಗಳನ್ನು ಕೊಡಬಹುದು.

ಕಾಡಿನಲ್ಲಿ ರಾಮ ಲಕ್ಷ್ಮಣ ಸೀತೆಯರನ್ನು ಅಡ್ಡಗಟ್ಟಿದ ವಿರಾಧ ರಾಕ್ಷಸ ಹತನಾಗುತ್ತಾನೆ; ಅವನ ಮೃತದೇಹದಿಂದ ಗಂಧರ್ವನೊಬ್ಬ ಮೈದೋರಿ ಹೇಳುವ ಮಾತಿದು :

ದಂಡಕಾರಣ್ಯಮಿದು ಭೀರುಗೆ ಭಯಂಕರಂ;
ರಸಿಕ ಧೀರಗೆ ಕಲಾಶಂಕರಂ: ನನ್ನಂತೆವೋಲ್.

ಮುಂದೆ ರಾಮಲಕ್ಷ್ಮಣರಿಗೆದುರಾದ ಬೀಭತ್ಸಾಕೃತಿಯು ಕಬಂಧ, ರಾಮನನ್ನು ಕವಿದಿದ್ದ ನಿರಾಶೆಯಲ್ಲದೆ ಮತ್ತೇನಲ್ಲ. ಲಕ್ಷ್ಮಣನಿಂದ ರಾಮ ಧೈರ್ಯಗೊಂಡಮೇಲೆ ಆ ರಕ್ಕಸ ಮಾಯವಾಗಿ, ವೃಂದಾರಕನೊಬ್ಬ ಮೂಡುತ್ತಾನೆ; "ನೈರಾಶ್ಯದಿಂದುದ್ಭವಿಸಿ ತೋರ್ಪವೋಲಾಶಾಮರೀಚಿ". ಇಲ್ಲೆಲ್ಲ ಆ ರಾಕ್ಷಸರು ಪ್ರತಿಕೃತಿಗಳಾಗಿರದೆ, ಮತ್ತಾವುದೋ ಸತ್ಯಕ್ಕೆ ಪ್ರತಿಮೆಗಳಾಗಿದ್ದಾರೆ.

ರಾಮ ವಾಲಿಯ ಬೆನ್ನಿಗೆ ಬಾಣ ಪ್ರಯೋಗಮಾಡಿ ಅವನನ್ನು ಕೊಂದದ್ದು ಅನೇಕರ ಆಕ್ಷೇಪಣೆಗೆ ಕಾರಣವಾಗಿದೆಯಷ್ಟೆ. ಆದರೆ ಕುವೆಂಪು ಅವರ ಪ್ರತಿಮಾದೃಷ್ಟಿ ಇದಕ್ಕೆ ಸಮಾಧಾನ ಹೇಳುತ್ತದೆ:

ನಿರ್ಲಕ್ಷಿಸುತೆ ದೈವಮಂ, ಪ್ರತಿಭಟಿಸಿ
ದೈವೀಪರಂಗಳಂ ಶಕ್ತಿಯುಂ, ನೆಮ್ಮುತ್ತೆ
ತನ್ನಹಂಕಾರಮಂ ಸ್ವಬಲಮಂ ಸ್ವಾರ್ಥಮಂ,
ಚಲದಿಂ ವಿರೋಧಿಸಲ್ ವೈರಭಾವವನಾಂತ
ಆಸುರೀ ಸಾಧನೆಯ ದೈವೀವಿಮುಖಮಪ್ಪ
ಲೌಕಿಕ ಪರಾಕ್ರಮದ ಶಿಕ್ಷಾರಕ್ಷೆಗಿನ್ನಿಹುದೆ,
ಪೇಳ್, ಕೃಪಾಬಾಣಕ್ಕೆ ಬೆನ್ನಲ್ಲದನ್ಯಲಕ್ಷ್ಯಂ
ತುದಿಗೆ ?

ಅಸತ್‌ಶಕ್ತಿ ಸತ್‌ಶಕ್ತಿಗೆ ಮುಖಾಮುಖಿಯಾಗಲಾರದು: ಬೆನ್ನು ತಿರುಗಿಸಿ ನಿಲ್ಲಬಲ್ಲುದು ಮಾತ್ರ. ಆಗ ಅದರ ಬೆನ್ನಿಗೆ ಹೊಡೆಯಂದೆ ಅನ್ಯಮಾರ್ಗವಿಲ್ಲ.

ಆಂಜನೇಯ ವಾನರಸಮೂಹದ ಸ್ತೋತ್ರದಿಂದ ಬೃಹನ್ಮೂರ್ತಿಯಾಗಿ ಬೆಳೆದು, ಅನಂತರ ಸಾಗರಲಂಘನ ಮಾಡಬಲ್ಲವನಾಗುತ್ತಾನೆ. ಪ್ರೋತ್ಸಾಹ, ಪ್ರಶಂಸೆಗಳಿಂದ ಸಾಮಾನ್ಯನೂ ಸ್ಫೂರ್ತಿಗೊಂಡು ಮಹತ್ಕಾರ್ಯಗಳನ್ನು ಮಾಡಬಲ್ಲನೆಂಬುದು ಇದರಿಂದ ಧ್ವನಿತವಾಗುತ್ತದೆ. "ಕೀರ್ತಿ ತಾಂ ಸ್ಫೂರ್ತಿಯಪ್ಪೊಡೆ ಅಲ್ಪಮಣುರೂಪಿ ತಾನಾಗನೇನ್ ಅಭ್ರಂಕಷ ಬೃಹನ್ಮೂರ್ತಿ ?"

ಕಲ್ಲಾಗಿದ್ದ ಅಹಲ್ಯೆ—ಮೂಲರಾಮಾಯಣದಲ್ಲಿ ಹಾಗಲ್ಲ— ರಾಮನ ಪಾದಸ್ಪರ್ಶದಿಂದ ಹೆಣ್ಣಾದದ್ದು, ರಾಮನ ರುಜೆಯನ್ನು ಶಬರಿ ವಹಿಸಿಕೊಂಡು ಪ್ರಾಣತ್ಯಾಗಮಾಡಿದ್ದು—ಇವು ಕೂಡ ಪ್ರತಿಮೆಗಳೇ. ಕುಂಭಕರ್ಣನನ್ನು ಎಬ್ಬಿಸುವ ಸನ್ನಿವೇಶವೂ ಅಷ್ಟೆ: ಜಡದಿಂದ ಜೀವವುದಿಸಿ ವಿಕಾಸಗೊಂಡ ಕ್ರಮಕ್ಕೆ ಅದು ದ್ಯೋತಕ.

ಹಳೆಯ ಆಭರಣಗಳನ್ನು ಕರಗಿಸಿ ಹೊಸ ನಾಣ್ಯಗಳನ್ನು ಟಂಕಿಸಿದೆ, 'ಶ್ರೀ ರಾಮಾಯಣ ದರ್ಶನಂ'. ಅದು ಶೂನ್ಯದಿಂದ ಹುಟ್ಟಿದ್ದಲ್ಲ; ಹಿಂದಿನದನ್ನು ವೈಚಾರಿಕ, ಅರ್ಥಾತ್ ಪ್ರತಿಮಾ ದೃಷ್ಟಿ ಯಿಂದ ಬಳಸಿ ಮಾನ್ಯವಾಗಿದೆಯಷ್ಟೆ.

ಕಲಾ ಪರಿಣತಿ

ಶ್ರೇಷ್ಠವಾದ ಕಲೆ 'ಶ್ರೀ ರಾಮಾಯಣ ದರ್ಶನ'ದಾದ್ಯಂತ ಹಾಸುಹೊಕ್ಕಾಗಿದೆ. ಕುವೆಂಪು ಅವರ ಪ್ರತಿಭೆ ಉತ್ತುಂಗದೈತ್ಯ ಶಿಲ್ಪಗಳನ್ನೆಂತು ಕಡೆಯಬಲ್ಲುದೊ ಅಂತೆಯೇ ಸೂಕ್ಷ್ಮವಾದ ಕುಸುರಿ ಕೆಲಸವನ್ನೂ ಮಾಡಬಲ್ಲುದು; ಲೋಕದ ನಡೆವಳಿಕೆ ಯನ್ನು, ಮಾನವ ಹೃದಯದ ರಾಗ ಭಾವಗಳನ್ನು, ತುಡಿತ ಮಿಡಿತಗಳನ್ನು ಅವುಗಳ ಸಂಕೀರ್ಣತೆಯೊಡನೆ ಯಥಾವತ್ತಾಗಿ ಗ್ರಹಿಸಿ, ಮಾರ್ಮಿಕವಾಗಿ ಅಭಿವ್ಯಕ್ತಿಸಬಲ್ಲುದು. ಇಲ್ಲಿ ಒಂದೇ ಒಂದು ನಿದರ್ಶನ ಕೊಡಬಹುದು. (ಹಿಂದೆಯೇ ಎಷ್ಟೋ ಬಂದಿವೆ).

ವಾಲ್ಮೀಕಿರಾಮಾಯಣದಲ್ಲಿ ರಾಮಸೀತೆಯರ ಕಥೆಯ ಕೋಲಾ ಹಲದಲ್ಲಿ ಲಕ್ಷ್ಮಣನ ವ್ಯಥೆಗೆ ಸ್ಥಾನವೆ ಇಲ್ಲ. ಆದರೆ ಕುವೆಂಪು ಲಕ್ಷ್ಮಣನ ಊರ್ಮಿಳಾ ವಿರಹವನ್ನು ಒಂದೆರಡು ಕಡೆಯಾದರೂ

ಧ್ವನಿಸಿದ್ದಾರೆ. ವಾಸ್ತವವಾಗಿ ಲಕ್ಷ್ಮಣನ ವ್ಯಥೆ ರಾಮಾಯಣದಲ್ಲಿ ಗೌಣ. ಏಕೆಂದರೆ ಅವನು ಹೆಂಡತಿಯನ್ನು ಹಿಂದೆ ಬಿಟ್ಟು, ಸ್ವಸಂತೋಷದಿಂದ ರಾಮ ಸೀತೆಯರ ಛಾಯಾನುವರ್ತಿಯಾಗಿ ಅರಣ್ಯಕ್ಕೆ ಹೋಗಿ, ಅವರ ಸೇವೆಯಲ್ಲಿ ಸ್ವತಂತ್ರ ಅಸ್ತಿತ್ವವನ್ನೆ ಮರೆತವನು. ಆದರೆ ಅವನ ಮನಸ್ಸಿನಲ್ಲಿ ಸತಿ ಊರ್ಮಿಳೆಯ ರೂಪ ಸುಳಿಯುತ್ತಿದ್ದಿರಬೇಕು; ಅವಳನ್ನು ನೆನೆನೆನೆದು ಅವನು ನುಯ್ಯುತ್ತಿದ್ದಿರಬೇಕು, ಮೂಕವೇದನೆಯನ್ನು ಅನುಭವಿಸಿದ್ದಿರಬೇಕು. ಅದು ತೀರ ಸಹಜ, ಮಾನವೀಯ. ಆದರೆ ತನ್ನ ಬೇಗೆ ಬೇನೆಗಳನ್ನು ಹೊರಕ್ಕೆ ತೋರ್ಪಡಿಸಿಕೊಳ್ಳುವ ವ್ಯಕ್ತಿ ಅವನಲ್ಲ. ಸ್ವಾರ್ಥವನ್ನು ಮರೆತು, ಅಣ್ಣ-ಅತ್ತಿಗೆಯರ ಪದತಲದಲ್ಲಿ ಅವನು ತನ್ನನ್ನು ತಾನು ಸಮರ್ಪಿಸಿಕೊಂಡಿದ್ದಾನೆ. ಅವನ ಈ ಸಮರ್ಪಿತ ವ್ಯಕ್ತಿತ್ವಕ್ಕೆ ಊನ ಬರದಂತೆ ಅವನ ಮೂಗಳ್ಕೆಯನ್ನು ಚಿತ್ರಿಸುವುದು ಸಾಮಾನ್ಯರಿಗೆ ಸಾಧ್ಯವಿಲ್ಲ; ಆ ಕೆಲಸವನ್ನು ಕುವೆಂಪು ತುಂಬ ಯಶಸ್ವಿಯಾಗಿ ಮಾಡಿದ್ದಾರೆ; ರಾಮಸೀತೆಯರ ಮೂಲಕವೆ ಮಾಡಿದ್ದಾರೆ ಎನ್ನುವುದು ಸ್ವಾರಸ್ಯ.

ರಾಮ, ಸೀತೆಯರು ಚಿತ್ರಕೂಟದಲ್ಲಿರುವಾಗ, ಅವರ ಪಾಲಿಗೆ ಒಂದೊಂದು ವಸ್ತುವೂ ಅಚಿದ್ಭಾವವನ್ನು ತೊರೆದು ಸ್ಮೃತಿಕೋಶವಾಗಿ ಪರಿಣಮಿಸುತ್ತದೆ. ಅಲ್ಲಿ ಒಂದು ಕಲ್ಲು ಯುಗಯುಗಗಳಿಂದ ಬರಿಯ ಕಲ್ಲಾಗಿ ಬಿದ್ದಿರುತ್ತದೆ. ಸೀತೆ ಅದನ್ನು ಕಾಣುವುದಕ್ಕೆ ಮೊದಲು ಅದು ಕಲ್ಲಲ್ಲದೆ ಮತ್ತೇನೂ ಆಗಿರುವುದಿಲ್ಲ. ಒಂದು ದಿನ ಅವಳು ಪರ್ಣಶಾಲೆಯ ಮುಂದೆ ಪತಿಯೊಡನೆ ಮಾತನಾಡುತ್ತ ಆ ಕಲ್ಲಿನತ್ತ ನೋಡುತ್ತಾಳೆ. ಸೋಜಿಗ ! ಆ ಕಲ್ಲಿಗೆ ಏನೋ ಆಕೃತಿ ಬಂದಂತೆ ತೋರುತ್ತದೆ. ಬೆರಗಾಗಿ ಅದನ್ನು ಇನಿಯನಿಗೆ ತೋರುತ್ತಾಳೆ. ಅವನೂ ಕಂಡು ಕೌತುಕಪಡುತ್ತಾನೆ.

ಅಂದಿನಿಂದ ಇಬ್ಬರೂ ಅದನ್ನು 'ಕಲ್ಲುವಸಿ' ಎಂದು ಕರೆಯ ತೊಡಗುತ್ತಾರೆ. ಮತ್ತೊಂದು ದಿವಸ ಹೀಗಾಗುತ್ತದೆ:

ಬೈಗುಗಪ್ಪಿಳಿಯುತಿರೆ ಸೀತೆ
ಮರ್ಬಿನೊಳ್ ಕಂಡಳಾರಸೊ ಕಲ್ಲ ನೆತ್ತಿಯೊಳ್;
ಪಣತೆ ಸೋದರರೊಳ್ ತಾನಗಂ ಓದುತಿರ್ದಿನಿಯನಂ
ಕರೆದು ತೋರಿದಳ್ ಹೆದರೆದೆಯ ಹೆಣ್. ರಾಮನುಂ
ಸೋಜಿಗಂಬಡುತೆ ಗುರುತಿಸೆ ನೋಡಿದನ್ ಕೂಡೆ
ಶೋಕಮುಖಭಂಗಿಯಿಂದಶ್ರುಲೋಚನನಾಗಿ.
ನಿಡುಸುಯ್ದುನೆರ್ದೆ ನೊಂದನೋಲ್. ಸೀತೆಗರಿವಾಯ್ತು
ತೆಕ್ಕನಾ ಕಲ್ಲ ನೆತ್ತಿಯ ಮೂರ್ತಿ ಯಾರೆಂದು;
ಸೌದೆಯಂ ಪೊತ್ತು ತಂದಲ್ಲಿ ವಿಶ್ರಮಿಸಿರ್ದನಾ
ಊರ್ಮಿಳಾವಲ್ಲಭನದೈಸೆ! ನೆನೆದಾಕೆಯುಂ
ಬೇಯುತಿರುವನೆ? ಬೇಡುವನೆ ದೇವರಂ ತನ್ನ
ಸತಿಗಾಗಿ? ಸುಯ್ದರ್ ಕೃತಜ್ಞತಾಭಾರದಿಂ
ದಂಪತಿಗಳಿರ್ವರುಂ—ಮಾತನುಳಿದಳ್ ಸೀತೆ...

ಇದು 'ಶ್ರೀ ರಾಮಾಯಣ ದರ್ಶನ'ದ ಅತ್ಯಂತ ಗಂಭೀರವೂ ಚಿತ್ತಸ್ಪರ್ಶಿಯೂ ಆದ ಚಿತ್ರಗಳಲ್ಲೊಂದು. ಆ ದಂಪತಿಯ ಊಹೆಯ ಮೂಲಕವೆ ಊರ್ಮಿಳಾವಲ್ಲಭನ ಅಂತರ್ಯವನ್ನು ಸೂಚಿಸುವ ತಂತ್ರ ಪ್ರಭಾವಶಾಲಿಯಾಗಿದೆ. ಕವಿ ಬೇರಾವ ನೇರ ವಾದ ವಿಧಾನವನ್ನು ಆಶ್ರಯಿಸಿದ್ದರೂ ಅದು ಲಕ್ಷ್ಮಣನ ಪಾತ್ರದ ದೃಷ್ಟಿಯಿಂದ ಶೋಭಿಸುತ್ತಿರಲಿಲ್ಲ, ಇನ್ನು, ರಾಮಸೀತೆಯರು ಕೃತಜ್ಞತೆಯಿಂದ ಸುಯ್ದರೆಂಬುದಾಗಲಿ ತಮ್ಮನನ್ನು ಮಾತನಾಡಿ ಸಲು ರಾಮ ಬಂಡೆಯೆಡೆಗೆ ನಡೆದನೆಂಬುದಾಗಲಿ ಎಂತಹ ಸ್ವಾಭಾ ವಿಕವಾದ ಸಂಗತಿ!

ಕುವೆಂಪು ಒಮ್ಮೊಮ್ಮೆ ಧ್ವನಿಯನ್ನು ವಾಚ್ಯಮಾಡುತ್ತಾರೆಂಬ ಆಕ್ಷೇಪಣೆಯೊಂದಿದೆ. ಆದರೆ ಮಹಾಕಾವ್ಯ ವಾಚ್ಯತೆಯನ್ನು ತಡೆದುಕೊಳ್ಳಬಲ್ಲುದೆಂದು ಇಲ್ಲಿ ಹೇಳಿದರೆ ಸಾಕು.

'ಶ್ರೀ ರಾಮಾಯಣ ದರ್ಶನ'ದ ರಚನೆಯಲ್ಲಿ ಎಷ್ಟೋ ಸಾಂಪ್ರದಾಯಿಕವಾದ ಅಂಶಗಳೂ ಇವೆ. ಆದರೆ ಅದು ಒಟ್ಟಿನಲ್ಲಿ ಪ್ರಾಚೀನ ಕಾವ್ಯಗಳಿಂದ ಸಾಕಷ್ಟು ಬೇರೆಯಾಗಿ, ನೂತನತೆಯನ್ನು ಸಂಪಾದಿಸಿದೆಯೆನ್ನುವುದು ಮುಖ್ಯ. ಅದರ ಪ್ರಬಂಧ ಧ್ವನಿಯಂತೂ ಹೊಸತು.

ಸಣ್ಣಪುಟ್ಟ ದೌರ್ಬಲ್ಯಗಳು ಏನೇ ಇರಲಿ, ಕುವೆಂಪು ಅವರದು ಮಹತ್‌ಕಲೆ. 'ಶ್ರೀರಾಮಾಯಣ ದರ್ಶನ'ದ ಜ್ಯೋತಿಷ್ಮತೀ ಜಗತ್ತನ್ನು ಹೊಕ್ಕವರು "ಎಲ್ಲಿಯೂ ಎಲ್ಲವು ಮಹತ್ತೆ ಇಲ್ಲಿ!" ಎಂದು ಅಚ್ಚರಿಗೊಳ್ಳುವಂತಾಗುತ್ತದೆ. ಆದರೆ ಅದು ಅಲ್ಪವನ್ನು ಅಲಕ್ಷಿಸಿದ ಮಹತ್ತಲ್ಲ; ಅದನ್ನು ತನ್ನ ಮಟ್ಟಕ್ಕೆತ್ತಿಕೊಂಡು ನಿಂತ ಮಹತ್ತು.

ಶೈಲಿ

'ಶ್ರೀ ರಾಮಾಯಣ ದರ್ಶನ'ದ್ದು ಮಹಾಕಾವ್ಯಕ್ಕೆ ತಕ್ಕ ಮಹಾಶೈಲಿ (Grand Style). ಅದರಲ್ಲಿ ಉದಾತ್ತತೆಯಿದೆ. ಗಾಂಭೀರ್ಯವಿದೆ. ಓಜಸ್ಸಿದೆ. ಸಂಸ್ಕೃತ ಶಬ್ದಗಳ ಆಧಿಕ್ಯ ಮತ್ತು ಸಮಾಸಪ್ರಾಚುರ್ಯ ಅದರ ಮುಖ್ಯ ಲಕ್ಷಣಗಳು. ಆದರೆ ಸಂದರ್ಭಾನುಸಾರವಾಗಿ ಅದು ಸರಳ ಸೌಮ್ಯವೂ ಆತ್ಮೀಯವೂ ಆಗುತ್ತದೆ. ಉದ್ದಿಷ್ಟ ಭಾವಾನುಭವಗಳ ಸಂವಹನಕ್ಕೆ ಅನುಕೂಲಿಸುವಂತೆ ಹೊಂದಿಕೊಳ್ಳುವುದು ಅದರ ಸ್ವಭಾವ. ಅದು ಭೇರಿ, ಡಿಂಡಿಮ, ವೀಣೆ, ವೇಣು—ಏನೆಲ್ಲ ಆಗಬಹುದು.

ಸಂಸ್ಕೃತ ಸಮಾಸ ಭೂಯಿಷ್ಠವಾದ ಶೈಲಿಗೆ ಉದಾಹರಣೆಯಿದು :

ಜನಚರಣ ಚಲದ್ ಧೂಳಿದೂರಂ, ಮೃಗಖುರಾ
'ಕ್ಷುಣ್ಣ ಶಾದ್ವಲ ಸುಂದರಂ, ಜಲಪಾನ ಸಂತೃಪ್ತ
ಪಕ್ಷಿಪಾದಾಂಕಿತ ಶಿಲಾ ಕಲಾ ಶೈವಾಲ
ಚಿತ್ರಿತಂ, ವೃಕ್ಷಗುಲ್ಮ ವ್ರತತಿ ಸಂವೃತಂ,
ಝರ ಪತನಘೋಷ ಗದ್ಗದ ವಿಹಗಕೂಜಿತಂ,
ಸಂಕ್ಷಿಪ್ತ ವಿಪಿನದೋಲಿರ್ದುದಾ ನಿಕುಂಜಭೂ,
ಕಿಂಶುಕ ಕದಂಬಾದಿ ತರು ನಿಸೇವಿತ ಮಹಾ
ಶಿಂಶುಪಾಶೋಕ ಸಂಶೋಭಿತಂ.

"ವಿಪ್ರಲಂಭಗ್ರೀಷ್ಮಸಂಕಟ ತಪಸ್ತೇಜೋ ಪ್ರದೀಪ್ತಾಕ್ಷಿ ತೀಕ್ಷ್ಣ," "ಸಂಮಥಿತ ದಶರಥತನೂಜ ಜೀವಿತ ಕಥಾ ಸಾಗರೋತ್ಥಿತ ಘೋರಗರಳ" ಮುಂತಾದ ದೀರ್ಘ ಸಮಾಸಗಳನ್ನೂ ಲೆಕ್ಕಿಸಬಹುದು.

ಕುವೆಂಪು ಹೇಗೆ ಅಚ್ಚಗನ್ನಡದಲ್ಲೆ ಬರೆಯಬಲ್ಲರೆಂಬುದಕ್ಕೆ ಈ ಭಾಗವೊಂದು ಉದಾಹರಣೆ :

ಕುಡುಬಿಲ್ಲು ಬಾಗಿದ ಮೆಯ್ಯ,
ತೊನ್ನ ಬೆಳ್ಗಲೆವಿಡಿದ ಕರ್ರನೆಯ ಕುಬ್ಜತೆಯ,
ಗೂಳಿ ಹಿಣಿಲಿನವೋಲು ಗೂನುವುಬ್ಬಿದ ಬೆನ್ನ,
ಸುಕ್ಕು ನಿರಿನಿರಿಯಾಗಿ ಬತ್ತಿದ ತೊವಲ್ ಪತ್ತಿ
ಬಿಗಿದೆಲ್ವುಗೂಡಿನಾ ಶಿಥಿಲ ಕಂಕಾಲತೆಯ,
ಪಲ್ಲುದುರಿ ಬೋಡಾದ ಬಚ್ಚುಬಾಯಿಯ, ಕುಳಿಯ
ಕೆನ್ನೆಗಳ, ದಿಟ್ಟಿಮಾಸಿದ ಕಣ್ಣ ಕೋಟರದ
ಕರ್ಬುನ ಮೊರಡು ಮೊಗದ, ಕೂದಲುದುರಿದ ಬೋಳು
ಪುರ್ಬಿನ ವಿಕಾರದಾ, ಬೆಳ್ವಕ್ಕಿ ಶಿಪ್ಪುಳೆನೆ
ಮಂಡೆಯಿಂ ಮುತ್ತಿ ಕೆದರಿದ ಬೆಳ್ಪನೆಯ ನವಿರ....

ಇಲ್ಲಿ ಸಂಸ್ಕೃತ ಪದಗಳು ಎರಡು ಮೂರು ಮಾತ್ರ. ಒಟ್ಟಿನಲ್ಲಿ 'ಶ್ರೀ ರಾಮಾಯಣ ದರ್ಶನ'ದ ಶೈಲಿಯಲ್ಲಿ ಬಹಳ ವೈವಿಧ್ಯ

ವಿದೆ. ಕನ್ನಡ–ಸಂಸ್ಕೃತಗಳ ಸರಳ ಮೈತ್ರಿ ಅದರ ವೈಶಿಷ್ಟ್ಯ. ಅದು ಸಂಸ್ಕೃತ ಪ್ರಚುರವಾದಾಗಲೂ ವ್ಯಥಾಡಂಬರವಾಗುವುದಿಲ್ಲ; ಕ್ಲಿಷ್ಟ ಅಥವಾ ಕರ್ಕಶವೆನಿಸುವುದಿಲ್ಲ. ಅದಕ್ಕೆ ತನ್ನದೇ ಆದ ದೀಪ್ತಿ, ಘನತೆ ಮತ್ತು ಮೋಹಕತೆ ಉಂಟು. ಸಂಭಾಷಣೆಗಳಲ್ಲಂತೂ ಆಡುಮಾತಿನ ಧಾಟಿಯೆ ಇದೆ. ಮಹಾಕಾವ್ಯದ ಭಾಷೆ ಪೂರ್ತಿ ಇಂದಿನದಾಗುವುದು ಸಾಧ್ಯವಿಲ್ಲ.

ಛಂದಸ್ಸು

ತಮ್ಮ ಕೃತಿಗೆ 'ಮಹಾಛಂದಸ್ಸಿನ' ಎಂಬ ವಿಶೇಷಣವೊಂದನ್ನು ಕುವೆಂಪು ಹಚ್ಚಿರುವುದು ಗಮನಾರ್ಹ. ಅದರ ಶೈಲಿಯಂತೆ ಛಂದಸ್ಸಿನಲ್ಲೂ ಧೀರ ಗಂಭೀರ ವಿನ್ಯಾಸವನ್ನು ಕಾಣುತ್ತೇವೆ. ವಸ್ತುತಃ ಈ ಮಹಾಛಂದಸ್ಸು ಒಂದು ಸಮನ್ವಯರೂಪ; ಅದರಲ್ಲಿ ವೃತ್ತ, ಕಂದ. ರಗಳೆ, ಷಟ್ಪದಿಗಳ ಮಧುರ ಸಮ್ಮೇಲನವಿದೆ. ಕುವೆಂಪು ಅದನ್ನು ಸ್ವತಃ ರೂಪಿಸಿ, ಅತ್ಯಂತ ಸಾರ್ಥಕವಾಗಿ ದುಡಿಸಿಕೊಂಡಿದ್ದಾರೆ.

ತಾಂತ್ರಿಕವಾಗಿ ನೋಡಿದರೆ, ಸರಳರಗಳೆಯ ಬೆಳವಣಿಗೆಯೇ ಮಹಾಛಂದಸ್ಸು. ಸರಳರಗಳೆಯ ಪ್ರತಿಪಾದದಲ್ಲೂ ಇಪ್ಪತ್ತು ಮಾತ್ರೆಗಳಿದ್ದರೆ, ಮಹಾಛಂದಸ್ಸಿನಲ್ಲಿ ಬಹಳ ಕಡೆ ಒಂದೊ ಎರಡೊ ಮಾತ್ರೆಗಳು ಹೆಚ್ಚಾಗಿ ಬರುತ್ತವೆ. ಇದಕ್ಕಿಂತ ಮುಖ್ಯವಾದ ಮಾತೆಂದರೆ, ಮಹಾಛಂದಸ್ಸು ಯಾಂತ್ರಿಕ ಗಣಸಂಯೋಜನೆಯಿಂದಾದುದಲ್ಲ ಎನ್ನುವುದು. ಗಣವೈವಿಧ್ಯ ಮತ್ತು ಲಯವೈವಿಧ್ಯ ಅದರ ಜೀವಾಳ. ಐದು ಮಾತ್ರೆಗಳಿಗೆ ಒಂದು ಗಣವಂತೆ ಕತ್ತರಿಸುವುದು ಇಲ್ಲಿ ಸಲ್ಲದು; ಕೈಕಾಲುಗಳನ್ನು ಮುಡಿಸುವಂತೆ ಪಂಕ್ತಿಗಳನ್ನು ಸಹಜವಾಗಿ, ಅರ್ಥಾನುಸಾರವಾಗಿ ವಿಭಾಗಿಸಬೇಕಾಗು

ತ್ತದೆ. ಅಲ್ಲದೆ, "ಇವರಲ್ಲಿ ಪಂಕ್ತಿ ಮೂಲಘಟಕವೆಂಬುದನ್ನು ಮರೆಯಬೇಕಾಗುತ್ತದೆ. ಪಂಕ್ತಿಖಂಡ, ಪಂಕ್ತಿ, ಪಂಕ್ತಿದ್ವಯ, ಪಂಕ್ತಿತ್ರಯ ಒಂದೊಂದು ಘಟಕವಾಗಿ ಪರಿಣಮಿಸುತ್ತದೆ.''

ಸಮಾಪ್ತಿ

'ಶ್ರೀ ರಾಮಾಯಣ ದರ್ಶನಂ' ಕಾವ್ಯ "ಪುರುಷೋತ್ತಮನ ಲೋಕಲೀಲಾ ದರ್ಶನ"ವನ್ನೊಳಕೊಂಡದ್ದು.

> ಶ್ರೀ ರಾಮನಾ ಲೋಕದಿಂದವತರಿಸಿ ಬಂದು
> ಈ ಲೋಕ ಸಂಭವೆಯನೆಮ್ಮ ಭೂಜಾತೆಯಂ
> ಸೀತೆಯಂ ವರಿಸುತಾಕೆಯ ನೆವದಿ ಮೃಚ್ಛಕ್ತಿಯಂ
> ಮರ್ದಿಸುತೆ,

ಚಿಚ್ಛಕ್ತಿಯನ್ನು ಸಂವರ್ಧಿಸಿದ್ದು ಅದರ ತಿರುಳು. ಆದರೆ ಅದು ಅಷ್ಟೇ ಮಾನವೀಯ ಸ್ವಾರಸ್ಯವುಳ್ಳ ಕಾವ್ಯ; ಜೀವನ ಪ್ರೀತಿಯನ್ನು ಕುಗ್ಗಿಸದೆ ಉತ್ತೇಜಿಸುವ ಕೃತಿ. ಅದರ ದರ್ಶನ ಕಲೆಗೆ ಹೊರೆಯಾಗಿಲ್ಲ; ತಲೆವಣಿಯಾಗಿದೆ. ವಿವರಣೆ, ವ್ಯಾಖ್ಯಾನಗಳ ನೆರವಿಲ್ಲದೆ ಸಾಮಾನ್ಯರಿಗೆ ಗ್ರಾಹ್ಯವಾಗದ ಎಷ್ಟೋ ಗಹನ ತಾತ್ತ್ವಿಕ ಭಾಗಗಳುಂಟು, 'ಶ್ರೀರಾಮಾಯಣ ದರ್ಶನ'ದಲ್ಲಿ. ಆದರೆ ಅವು ಕಾವ್ಯೋದ್ದೇಶಕ್ಕೆ ಅನಿವಾರ್ಯ. ಸಾಮಾನ್ಯವಾಚಕ ಮಹಾಕಾವ್ಯದ ದರ್ಶನ ಗೌರವವನ್ನು ಬದಿಗಿರಿಸಿ, ಅದರ ಕತೆಯನ್ನೂ ಕಲೆಯನ್ನೂ ಆಸ್ವಾದಿಸಿ ತಣಿಯುವುದು ಸಾಧ್ಯ. ಆದರೆ ಆದರಿಂದ ಕಾವ್ಯದ ಪೂರ್ಣ ಪ್ರಯೋಜನ ಲಭಿಸಿದಂತಾಗುವುದಿಲ್ಲ. ಅಂತೂ 'ಕಲೆಗಾಗಿ ಕಲೆ' ಎಂಬ ನಿಲುವಿನಿಂದ ರಚಿತವಾದುದಲ್ಲ, 'ಶ್ರೀ ರಾಮಾಯಣ ದರ್ಶನಂ.' ಅದು ಬರಿಯ ಉದ್ಯೋಗವೊ ಪ್ರಯೋಗವೊ ಆಗಿ ಮಾಡಿದ್ದಲ್ಲ; ಯೋಗವಾಗಿ ಮೂಡಿದ್ದು.

'ಜನತಾಂತರ್ದೃಷ್ಟಿ'ಯಿಂದ ಕೂಡಿದ್ದು. ಅದರಲ್ಲಿ ಐಹಿಕ ಮತ್ತು ಪಾರಮಾರ್ಥಿಕ ಮೌಲ್ಯಗಳಿವೆ, ಅದು ಸಂತೋಷ ಕೊಡುವುದರಲ್ಲೆ ಮುಗಿಯುವುದಿಲ್ಲ, ಮುಗಿಯಬಾರದು; 'ಶಿವೇತರ'ವನ್ನು ಕ್ಷಯಿಸಿ ಸಂಸ್ಕಾರದಾಯಕವಾಗಬೇಕು.

ನಮ್ಮ ಬದುಕು ಹಿಂದಿದ್ದುದಕ್ಕಿಂತ, ಈಗಿರುವುದಕ್ಕಿಂತ ಉತ್ತಮ ವಾಗಬೇಕು, ಉನ್ನತವಾಗಬೇಕು ಎಂಬ ಆಕಾಂಕ್ಷೆ ಯಾರಿಗಿಲ್ಲ? ಭವ್ಯ ಭವಿಷ್ಯದ ಕನಸು ಯಾರಿಗಿಲ್ಲ? ಮನುಷ್ಯ ಉತ್ತಮ ಮನುಷ್ಯನಾಗಬೇಕು; ಇನ್ನೂ ಮುಂದುವರಿದು ದೇವನಾಗ ಬೇಕು. ಇದೇ 'ಶ್ರೀ ರಾಮಾಯಣ ದರ್ಶನ'ದ ಆಶಯ. ಅದು ಭೂತವನ್ನು ಗ್ರಹಿಸಿ, ವರ್ತಮಾನವನ್ನು ನಿರೂಪಿಸುತ್ತಲೆ, ಭವಿಷ್ಯ ಸಂವೇದಿಯಾಗುತ್ತದೆ. ಎಲ್ಲರೂ ಉದ್ಧಾರಗೊಂಡು, ಒಳ್ಳೆಯವ ರಾಗಿ, ಸಮಾನತೆ ಸ್ವಾತಂತ್ರ್ಯ ಸೌಹಾರ್ದಗಳನ್ನು ಸಾಧಿಸಿ, ಸುಖಮಯ ಜೀವನವನ್ನು ನಡೆಸುವಂತಹ ಆದರ್ಶ ಸ್ಥಿತಿ ಯೊಂದನ್ನು ಅದು ಕಲ್ಪಿಸಿಕೊಳ್ಳುತ್ತದೆ. ಇಂಥ ಸ್ಥಿತಿ ಅಸಾಧ್ಯ ವಲ್ಲ; ಶ್ರದ್ಧೆಯಿಂದ ಸಾಧ್ಯ. ಶ್ರದ್ಧೆಯೆ ತಪಸ್ಸು; ಅದಕ್ಕೆ ಎಟುಕದ್ದು ಯಾವುದೂ ಇಲ್ಲ. ಹಾರೈಕೆ, ಪ್ರಾರ್ಥನೆಗಳ ಶಕ್ತಿ ಅದಮ್ಯವಾದದ್ದು. "ಶುದ್ಧಿ ವೇೞ್ ಶ್ರದೆ ಯಿರೆ ತಂದಿಗೆ ತಪ್ಪದು ಸಿದ್ಧಿ ಸಾಧನೆಗೆ." 'ಕಾಲಾನುವಶಿ' ಯಾದ ಸಿದ್ಧಿಯ, ಪರಿಪೂರ್ಣತೆಯ ಚಿತ್ರಗಳನ್ನು 'ಶ್ರೀ ರಾಮಾಯಣ ದರ್ಶನಂ' ಕೊಡುತ್ತದೆ; ತಾನೆ ಒಂದು ಸಿದ್ಧಿಯಾಗಿದೆ. ಇಂಥ ಕೃತಿ ನಿಜವಾಗಿ 'ಭುವನದ ಭಾಗ್ಯ'; ವಿಶ್ವಸಾಹಿತ್ಯಕ್ಕೆ ಕನ್ನಡದ ಕೊಡುಗೆ. ಮಹಾಕಾವ್ಯದ ಸಮಾಪ್ತಿ ವಾಕ್ಯಗಳಿಂದಲೇ ಮುಗಿಸಬಹುದು :

ಯುಗಯುಗದಿ ಸಂಭವಿಪೆನೆಂಬ ಭಗವದ್ದಿವ್ಯಮಾ
ವಚನಮೇಂ ನರರೂಪಮಾತ್ರಕ್ಕೆ ಮುಡಿಪೆ, ಪೇೞ್ ?

ನರಸಿಂಹ ಮತ್ಸ್ಯ ಕೂರ್ಮಾದಿ ಚರಮಾ ಲೀಲೆಗೇಂ
ಪೊರತೆ ಈ ಕೃತಿರೂಪಮಾ ಭಗವದಾವಿರ್ಭಾವ
ಬಹುರೂಪ ಸೂತ್ರತೆಗೆ ? ರಾಮಂಗೆ ಮೊದಲಲ್ತೆ
ರಾಮಾಯಣಂ ? ಮುನ್ನಲ್ತೆ, ಪಿರಿದಲ್ತೆ, ಮೆಯ್ಯಲ್ತೆ,
ಮನೆಯುಲ್ತೆ ರಾಮಾಯಣಂ ? ರಾಮನಾಮದ ಮಹಿಮೆ
ರಾಮಂಗೆ ಮಿಗಿಲೆಂಬವೋಲ್ ರಾಮಾವತಾರಕಿಂ
ಗುರುತರಂ ತಾನೈಸೆ ರಾಮಾಯಣಾವತಾರಂ !
ಓಂ ನಮೋ, ರಾಮಾವತಾರಕಿರ್ಮ್ಮಡಿಯೆನಲ್,
ಮೂಲವಿಗ್ರಹಕೆತ್ತಿದುತ್ಸವದ ಪಡಿಯೆನಲ್,
ನನ್ನೊಳೀ ರಾಮಾಯಣಾವತಾರವನೆತ್ತಿ, ಮೇಣ್
ಸರ್ವಭಾಷಾಮಯೀ ಭಗವತಿಯ ಪೂವಡಿಯ
ಕನ್ನಡದ ಸಿರಿಗುಡಿಯ ನುಡಿಯ ಕಣ್ಪಡಿಮೆಯೊಳ್,
ಕಡೆದು ಮೂಡಿದ ನಿತ್ಯರಾಮಂಗೆ, ಓಂ ನಮೋ
ಓಂ ನಮೋ, ಓಂ ನಮಃ ! ಓಂ ಶಾಂತಿಶ್ಶಾಂತಿಶ್ಶಾಂತಿಃ!

.ಸಂ ೨೯೪೮೩—ಎಂ.ಯು.ಪಿ.ಎಂ.—೧೦,೦೦೦ ಪ್ರತಿಗಳು–೩–೧೧–೮೯

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—
ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ
೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ. ಪಿ.
ಕೃಷ್ಣಕುಮಾರ್